
ಕಲ್ಯಾಣ ಕಿರಣ



1994

ನವೆಂಬರ್

ಕನ್ನಡ ರಾಜ್ಯೋತ್ಸವ

ಬೆಲೆ : 4 ರೂ.

ಕಲ್ಯಾಣ ಕಿರಣ

ಮಾಸ ಪತ್ರಿಕೆ, ಅಕ್ಟೋಬರ್ - ನವಂಬರ್ 1994,
ಬಿಡಿ ಸಂಚಿಕೆಯ ಬೆಲೆ : 4-00 ರೂ.

ಸಂಪುಟ : 24 ಸಂಚಿಕೆ : 4-5 ಬಸವ ಶಕ : 889.
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

* **ತಿದ್ದುಪಡಿ :** ಈ ಸಂಚಿಕೆಯ ಪುಟ 22 ರಲ್ಲಿ ಪ್ರಕಟವಾಗಿರುವ "ಅಮರ ಚೇತನ ಗಾಂಧೀಜಿ" ಲೇಖನವನ್ನು **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರು ಬರೆದಿದ್ದಾರೆ

ಮುಖಪುಟ : "ಕಲ್ಯಾಣ ಕಿರಣ"ದ ಓದುಗರಿಗೆಲ್ಲ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ಹೊದ್ದಿಕೆಯ 4ನೇ ಪುಟ : ರಾ. ಬ. ದಳ, ಬೈಲಹೊಂಗಲ-ಮಹಾಚೈತ್ರದ ವಿರುದ್ಧ ಪ್ರತಿಭಟನೆಯ ಮನವಿ ಸಲ್ಲಿಕೆ.

ಬೆಂಗಳೂರು ವಿಳಾಸ : **ಕಲ್ಯಾಣ ಕಿರಣ** ಮಾಸ ಪತ್ರಿಕೆ, ಬಸವ ಮಂಟಪ, 2035,
2 ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ,
ಬೆಂಗಳೂರು-10. ದೂರವಾಣಿ : 3325335

KALYANA KIRANA – Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560074. Phone : 8437234

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಕ್ರಾಂತಿ ದಿನದ ಅಂಗವಾಗಿ ಎಂಟನೆಯ ಶರಣ ಮೇಳ
1995 ನೆಯ ಜನವರಿ 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ–ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ 1988 ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು, ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ (ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು ಎಂಟನೆಯ ಶರಣ ಮೇಳವು 1995 ನೇ ಇಸವಿಯ ಜನವರಿ 12, 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

... ಶರಣರ ಬರವೆಮಗೆ ಪ್ರಾಣಜೀವಾಳ ...

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
2 ನೇ ಬ್ಲಾಕ್, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ,
ಕೂಡಲ ಸಂಗಮ-587115
ತಾ॥ ಹುನಗುಂದ, ಜಿಲ್ಲೆ॥ ಬಿಜಾಪುರ.
ದೂರವಾಣಿ :838

ಮಹಾಚೈತ್ರ ಪಠ್ಯಪುಸ್ತಕ ರದ್ಧತಿ ಕುರಿತಾದ ಹೋರಾಟದ ರೂಪುರೇಷೆ ಮತ್ತು ಹೋರಾಟದ ಕಾರಣಗಳು

—ಪೂಜ್ಯ ಮಾತಾಜಿ

ಶನಿವಾರ, ದಿ. 12-11-1994 ರಂದು ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಹೇಳಿಕೆ

ಪೀಠಿಕೆ :

ಮಹಾಚೈತ್ರ ಎಂಬ ನಾಟಕ ಕೃತಿಯು 1986 ರಲ್ಲಿ ಮುದ್ರಣಗೊಂಡಿದ್ದರೂ ವಿಶೇಷವಾಗಿ ನಮ್ಮ ಗಮನವನ್ನೇನೂ ಸೆಳೆದಿರಲಿಲ್ಲ. ದಿ. 16–9–1994 ರಂದು ರಾಯಚೂರಿನ ಓರ್ವ ವಿದ್ಯಾರ್ಥಿ ನಮಗೆ ವಿಶೇಷ ಪರಿಚಿತರೂ ಅಲ್ಲದವರು ಪತ್ರ ಬರೆದರು. [ಬಸವ ಧರ್ಮ ಪೀಠಕ್ಕೆ ಬರೆದ ಪತ್ರವನ್ನು ಪ್ರತ್ಯೇಕವಾಗಿ ಮುದ್ರಿಸಲಾಗಿದೆ. ಶಿವಕುಮಾರ್ ಬಂಡೋಳಿ, ಎಲ್. ವಿ. ಡಿ. ಕಾಲೇಜ್ ವಿದ್ಯಾರ್ಥಿ ಬರೆದಾಗಲೂ ಸ್ವಲ್ಪಕಾಲ ನಾನು ನಿರ್ಲಿಪ್ತಳಾಗಿದ್ದೆ. ಬೇರೊಂದು ಮಹತ್ವದ ಕೆಲಸದಲ್ಲಿ ನಿರತವಾಗಿದ್ದುದರಿಂದ ಮನಸ್ಸನ್ನು ಬಹಿರ್ಮುಖಗೊಳಿಸಲು ಇಷ್ಟವಿರಲಿಲ್ಲ.

ಅದಾದ ಕೇವಲ 3-4 ದಿವಸಗಳಲ್ಲಿ ಕುಮಾರಿ ಟಿ. ಮಂಗಳಾ, ಬಿ. ಎ. ಮೊದಲ ತರಗತಿ ವಿದ್ಯಾರ್ಥಿನಿ ಎಸ್. ಜೆ. ಎಂ. ಮಹಿಳಾ ಕಾಲೇಜ್ ಚಿತ್ರದುರ್ಗ ಪತ್ರ ಬರೆದು ತನ್ನ ದುಃಖ ತೋಡಿಕೊಂಡಿದ್ದಳು. ಪಠ್ಯ ಪುಸ್ತಕ ಕೈ ಸೇರುತ್ತಲೇ ಆಕೆಯು ಒಂದು ಪ್ರತಿಭಟನಾತ್ಮಕ ಪತ್ರವನ್ನು ಕುವೆಂಪು ವಿಶ್ವವಿದ್ಯಾಲಯದ ಉಪಕುಲಪತಿಗೆ ಬರೆದು, ಅದರ ಒಂದು ಪ್ರತಿಯನ್ನು ಕಾಲೇಜಿನ ಪ್ರಾಂಶುಪಾಲರಿಗೆ ದಿ. 12–9–94 ರಂದು ತಲುಪಿಸಿ, ಅದರ ಜೆರಾಕ್ಸ್ ಪ್ರತಿ ನಮಗೆ ಕಳಿಸಿದ್ದಲ್ಲದೆ. ಮಹಾಚೈತ್ರದ ಒಂದು ಪ್ರತಿಯನ್ನು ನೋಂದಾಯಿತ ಅಂಚೆಯಲ್ಲಿ ರವಾನಿಸಿ, "ಪ್ರಿನ್ಸಿಪಾಲರು ನೀರಸ ಪ್ರತಿಕ್ರಿಯೆ ವ್ಯಕ್ತಪಡಿಸಿದರು, ನಮಗೆ ನ್ಯಾಯ ದೊರಕಿಸಿ ಕೊಡಲು ಯಾರೂ ಇಲ್ಲವೆ ? ಉಪನ್ಯಾಸಕರು, ಪ್ರಾಂಶುಪಾಲರು ಯಾರೂ ಅಳಲನ್ನು ಕೇಳುತ್ತಿಲ್ಲ. ಇಂಥ ಕೀಳುಮಟ್ಟದ ಪುಸ್ತಕವನ್ನು ನಾವು ಓದುವುದು ಹೇಗೆ ? ಪರೀಕ್ಷೆಯಲ್ಲಿ ಬರೆಯುವುದು ಹೇಗೆ? ನಮ್ಮ ಧರ್ಮಗುರುವಿನ ಶವ ನೀರಲ್ಲಿ ಬೆಸ್ತರು ಬಲೆ ಬೀಸಿದಾಗ ಸಿಕ್ಕಿತು ಎಂದು ಹೇಗೆ ಬರೆಯಬೇಕು ? ಅಕ್ಕನಾಗಲಾಂಬಿಕೆಯನ್ನು ನಡತೆಗೆಟ್ಟ ಹೆಂಗಸು ಎಂದು ಹೇಗೆ ಬರೆಯಬೇಕು ? ಧರ್ಮ ರಕ್ಷಣೆಯಲ್ಲಿ ನಿಮ್ಮ ಕರ್ತವ್ಯ ಏನೂ ಇಲ್ಲವೆ ? ಧರ್ಮ ಪೀಠಗಳ ಉದ್ದೇಶವೇನು ? ಇಂಥ ಯಾವ ಹೊಣೆ ಮಠ–ಪೀಠಾಧೀಶರು ಎನಿಸಿಕೊಂಡವರಲ್ಲಿ ಇಲ್ಲವಾದರೆ ಅವರನ್ನು ನಾವು ಹಿತೈಷಿಗಳೆಂದು ಹೇಗೆ ತಿಳಿಯಬೇಕು ? ಇಂಥ ಅಸಹ್ಯ

ಪುಸ್ತಕ ರದ್ದುಮಾಡಲು ನೀವಾರೂ ಪ್ರಯತ್ನಮಾಡದಿದ್ದರೆ ನಾನು ಕಾಲೇಜ್ ವಿದ್ಯಾಭ್ಯಾಸವನ್ನು ನಿಲ್ಲಿಸುತ್ತೇನೆ." ಎಂದು ಕಟುವಾಗಿ ಬರೆದ ಪತ್ರ ನಮ್ಮ ಹೃನ್ಮನ ಬುದ್ಧಿಗಳನ್ನು ಅಲ್ಲಾಡಿಸಿಬಿಟ್ಟಿತು. ನಮ್ಮ ಹೊಣೆಗಾರಿಕೆಯನ್ನು ಕುರಿತು ಚಿಂತಿಸುವಂತೆ ಮಾಡಿತು. ಪುಸ್ತಕವನ್ನು ಆಗ ಅನಿವಾರ್ಯವಾಗಿ ಓದುವಂತೆ ಆಯಿತು ; ಓದಿದ ನಮಗೆ ಆಶ್ಚರ್ಯ–ಆಘಾತ ಕಾದಿದ್ದವು. ಇಂಥ ಒಂದು ಕೆಳಮಟ್ಟದ ಪುಸ್ತಕ ಮುದ್ರಣಗೊಂಡು ನಿರಾತಂಕವಾಗಿ ಸಂಚರಿಸಿಕೊಂಡಿರುವುದೇ ಅಲ್ಲದೆ ಪಠ್ಯವಾಗಿ ಇರುವುದು ಇನ್ನೂ ಸೋಜಿಗ ಉಂಟು ಮಾಡಿತು. ತಕ್ಷಣ ವಿಮರ್ಶೆ ಬರೆದು, ಮುಖ್ಯಮಂತ್ರಿಗಳಿಗೆ ದಿ. 20–9–1994 ರಂದು ಮನವಿ ಸಲ್ಲಿಸಲಾಯಿತು, ಪಠ್ಯಕ್ರಮದಿಂದ ಪುಸ್ತಕವನ್ನು ತೆಗೆದು ಹಾಕಲು ಆಗ್ರಹಪಡಿಸಲಾಯಿತು. ಅಲ್ಲಿಂದ ಹೋರಾಟವು ಪ್ರಾರಂಭವಾಗಿದೆ.

ಪಠ್ಯಪುಸ್ತಕವಾಗಲು ಅರ್ಹವಲ್ಲದ ಕೃತಿ

ಚಾರಿತ್ರಿಕ ದೋಷ :

ಓರ್ವ ಬರಹಗಾರನು ತನ್ನ ಮನಸ್ಸಿಗೆ ಬಂದಂತೆ ಬರೆಯುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೊಂದಿರುವನಾದರೂ, ಚಾರಿತ್ರಿಕ ವ್ಯಕ್ತಿಗಳ ಬಗ್ಗೆ ಅಷ್ಟು ಮನಸ್ವೇಚ್ಛೆಯಾಗಿ ಬರೆಯುವ ಹಕ್ಕು ಹೊಂದಿರನು. ಪೂರ್ಣವಾಗಿ, ನಿಖರವಾಗಿ ಬರೆಯಲು ಸಾಧ್ಯವಿರದೆ ಇದ್ದರೂ ಸತ್ಯಕ್ಕೆ ಸಮೀಪದಲ್ಲಿ ಇರಬೇಕೆಂದು ನಿರೀಕ್ಷಿಸಬೇಕಲ್ಲವೆ ? ಶ್ರೀ ಆದಿ ಶಂಕರಾಚಾರ್ಯರು ಭಾರತದ ನಾಲ್ಕು ಮೂಲೆಗಳಲ್ಲಿ ಸಂಚರಿಸಿದರು, ಕಾಶ್ಮೀರಕ್ಕೆ ಹೋದರು, ಕಾಶಿ–ಹಿಮಾಲಯಗಳನ್ನು ಸಂದರ್ಶಿಸಿದರು ಎಂದು ಶಾಸ್ತ್ರ-ಕಾವ್ಯ ಗ್ರಂಥಗಳು, ನುಡಿಯುವಾಗ ಹಾಗೆ ಬರೆಯದೆ ಅವರು ನ್ಯೂಯಾರ್ಕ್ ಪಟ್ಟಣಕ್ಕೆ ಹೋಗಿ ಸರ್ವಧರ್ಮ ಮಹಾಸಭೆಯಲ್ಲಿ ವಿದ್ವತ್ಪೂರ್ಣ ಭಾಷಣ ಮಾಡಿದರು ಎಂದರೆ ಚಾರಿತ್ರಿಕ ದೋಷವಾಗದೆ ? "ಮಹಾಚೈತ್ರ" ಲೇಖಕರು ಮಾಡಿರುವುದು ಇಂಥ ಪ್ರಮಾದವನ್ನೆ. ಲಿಂಗಾಯತ ಧರ್ಮದ ಇತಿಹಾಸದಲ್ಲಿ ಅತ್ಯಂತ ವಿರೋಚಿತವಾದ ಪ್ರಸಂಗವೆಂದರೆ ಅಕ್ಕನಾಗಲಾಂಬಿಕೆ–ಚನ್ನಬಸವಣ್ಣ–ಮಡಿವಾಳ ಮಾಚಿದೇವರ ನೇತೃತ್ವದಲ್ಲಿ ವಚನ ಸಾಹಿತ್ಯ ಮತ್ತು ಶರಣರ ರಕ್ಷಣೆಗಾಗಿ ನಡೆದ ಹೋರಾಟ. ಈ ಮಹತ್ವಪೂರ್ಣ ಘಟನೆಗೆ ಅಪಚಾರ ಮಾಡುವಂತೆ ಚನ್ನಬಸವಣ್ಣನವರನ್ನು ತಪಸ್ಸಿಗೆ ಲೇಖಕರು ಕಳಿಸಿದ್ದಾರೆ ; ಅಕ್ಕನಾಗಲಾಂಬಿಕೆಯನ್ನು ಗುರು ಬಸವಣ್ಣನವರ ಸಂಗಡ ಕೂಡಲ ಸಂಗಮಕ್ಕೆ ಕಳಿಸಿ, ಮಡಿವಾಳ ಮಾಚಿದೇವರನ್ನು ಕಲ್ಯಾಣದಲ್ಲಿ ಉಳಿಸಿದ್ದಾರೆ. ನಂತರ ಅವರನ್ನು ಹೊರಗೆ ಹೊರಡಿಸಿದ್ದಾರಾದರೂ, ಶರಣ ಸಮೂಹದ ರಕ್ಷಣೆ ಮಾಡುತ್ತ ಉಳಿವಿಯತ್ತ ಸಾಗಿದಂತೆ ಅಲ್ಲ.

ಬಸವಣ್ಣನವರ ಧರ್ಮಪತ್ನಿ ನೀಲಾಂಬಿಕೆಯು ಕಲ್ಯಾಣದಿಂದ ಹೊರಟು, ತಂಗಡಗಿಗೆ ಬಂದು ಕೂಡಲ ಸಂಗಮದಲ್ಲಿರುವ ಕೃಷ್ಣಾನದಿಯ ಆಚೆಯ ದಂಡೆಯಲ್ಲಿ ಬೀಡುಬಿಟ್ಟು ಲಿಂಗೈಕ್ಯಳಾದಳು. ಆ ತಾಯಿಯ ಸಮಾಧಿ ಮತ್ತು ಜೊತೆಗೆ ಬೆಂಗಾವಲಾಗಿದ್ದ ಶರಣ ಅಪ್ಪಣ್ಣನವರ ಸಮಾಧಿ ಇವು ಪ್ರತ್ಯಕ್ಷ ಸಾಕ್ಷಿಗಳಾಗಿದ್ದರೂ ಮಹಾ-ಚೈತ್ರದ ಲೇಖಕರು ನೀಲಾಂಬಿಕಾ ತಾಯಿಯನ್ನು ಕಲ್ಯಾಣ ಬಿಟ್ಟು ಹೊರಡಿಸಿಯೇ ಇಲ್ಲ. ಹೀಗೆ ಹಲವಾರು ಚಾರಿತ್ರಿಕ ದೋಷಗಳಿವೆ.

ಮಹಾಚೈತ್ರವನ್ನು ಕೇವಲ ಒಂದು ಸಾಹಿತ್ಯಕ ಕೃತಿ. ನಾಟಕದ ಕೃತಿ ಎಂದು ಪರಿಗಣಿಸಬೇಕೇ- ವಿನಾ ಚಾರಿತ್ರಿಕ ವಸ್ತುವೆಂದಲ್ಲ ಎಂದು ಕೆಲವು ಬುದ್ಧಿವಂತರು ಟೀಕಿಸಿದ್ದಾರೆ. ಆಯ್ಕೆ ಮಾಡಿಕೊಂಡ ವಸ್ತುವು ಕಾಲ್ಪನಿಕವಾಗಿದ್ದರೆ ಲೇಖಕರು ತಮ್ಮ ಕಲ್ಪನೆಯ ಕುದುರೆಯನ್ನು ಕಡಿವಾಣ ಹಾಕದೆ ಓಡಿಸಲಿ ಬೇಡವೆನ್ನುವವರಾರು ? ತಾವು ಅದರ ಬೆನ್ನೇರಿ ವಿಹರಿಸಲಿ. ಆರಿಸಿಕೊಂಡ ವಸ್ತುವು ಮತ್ತು ವಿಷಯ ಐತಿಹಾಸಿಕ ವ್ಯಕ್ತಿಗಳಿಗೆ ಸಂಬಂಧಿಸಿದಾಗ ಅಂಥ ಸ್ವೇಚ್ಛಾಚಾರಕ್ಕೆ ಇಳಿಯುವುದು ಅಭಿವ್ಯಕ್ತಿ ಸ್ವಾತಂತ್ರ್ಯವಾಗದೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯಾಗುವುದು. ಅದರಲ್ಲೂ ಬರಹವು ಮಹಾತ್ಮರು, ಅನೇಕ ಅನುಯಾಯಿಗಳನ್ನು ಹೊಂದಿ ಪೂಜನೀಯರಾದ ಮಹನೀಯರ ಬಗ್ಗೆ ಬರೆಯುವಾಗ ಇನ್ನೂ ಹೆಚ್ಚಿನ ಎಚ್ಚರಿಕೆ, ವಸ್ತುನಿಷ್ಠೆ ಅತ್ಯಗತ್ಯ. ವಿಶ್ವಗುರು ಬಸವಣ್ಣನವರ ಬಗ್ಗೆ ಯಾವುದೇ ಭಾವನಾತ್ಮಕ-ಭಾಕ್ತಿಕ ಸಂಬಂಧ ಹೆಚ್. ಎಸ್. ಶಿವಪ್ರಕಾಶರಿಗೆ ಇರಲಿಕ್ಕಿಲ್ಲವಾದ್ದರಿಂದ ಬಸವಣ್ಣನವರನ್ನು ವೈಭವೀಕರಿಸಬೇಕೆಂದು ನಾವೇನೂ ನಿರೀಕ್ಷಿಸುವುದಿಲ್ಲ, ಆದರೆ ಇರುವ ಸತ್ಯವನ್ನೂ ವಿಕೃತಗೊಳಿಸಿ ವ್ಯಕ್ತಿ ಚಿತ್ರಣ ಮಾಡುವುದು ಅಕ್ಷಮ್ಯ ಅಪರಾಧವಲ್ಲವೆ ?

ವೈಚಾರಿಕ ವಿಮರ್ಶೆಯ ಆಧಾರ

ಮಹಾಚೈತ್ರವನ್ನು ವಿರೋಧಿಸುವವರು ಕೇವಲ ಭಾವನಾತ್ಮಕವಾಗಿ ಆಲೋಚಿಸುತ್ತಿದ್ದಾರೆಂದು ಕೆಲವರು ಟೀಕಿಸುತ್ತಿದ್ದಾರೆ. ನಮ್ಮ ಹೋರಾಟ ಮತ್ತು ಅದಕ್ಕೆ ಕಾರಣಗಳು ವೈಚಾರಿಕ ವಿಮರ್ಶೆಯ ನೆಲೆಗಟ್ಟಿನ ಮೇಲಿವೆಯೇ ವಿನಾ ಭಾವುಕತೆ ಆವೇಶಗಳ ಮೇಲಿಲ್ಲ. ಮಹಾಚೈತ್ರ ಲೇಖಕರು ಪಾತ್ರಗಳ ಮೂಲಕ ಆಡಿಸಿರುವ ಮಾತುಗಳು, ಚಿತ್ರಿಸಿರುವ ಪ್ರಸಂಗಗಳು ಮುಂತಾದುವಕ್ಕೆ ನಾವು ಚಾರಿತ್ರಿಕ ಮತ್ತು ಸಾಹಿತ್ಯಕ ಆಧಾರ, ಸಮಜಾಯಿಷಿ ಕೇಳುತ್ತಿದ್ದೇವೆ. ಅವರು ಸಾಧಾರಪೂರ್ವಕವಾಗಿ ಸಮರ್ಥಿಸಲಿ. ಕೇವಲ ನಾಟಕ ಪ್ರಾಕಾರವಾದ್ದರಿಂದ ಸ್ಪಷ್ಟತೆ–ಖಚಿತತೆ ನಿರೀಕ್ಷಿಸುವ ಅಗತ್ಯವಿಲ್ಲ ಎಂದು ಜಾರಿಕೊಳ್ಳ ತೊಡಗಿದರೆ ನಾವು ಒಪ್ಪಲು ಸಾಧ್ಯವಿಲ್ಲ. ಯಾವ ಪ್ರಾಕಾರದ ಸಾಹಿತ್ಯವಾದರೇನು ಅದು ಕೇವಲ ಅಭಿವ್ಯಕ್ತಿ ಮಾಧ್ಯಮ ಮಾತ್ರ. ಆ

ಮಾಧ್ಯಮದ ಮೂಲಕ ಸಂವಹನಗೊಳ್ಳುವ ವಿಷಯವು ಸತ್ಯವೂ–ವಸ್ತುನಿಷ್ಠವೂ ಆಗಿರಲೇ ಬೇಕು.

ಬದುಕು ಭಾವನಾತ್ಮಕ

ವಿಶ್ವಗುರು ಬಸವಣ್ಣನವರು ಎಂದರೆ ಕೇವಲ ಒಂದು ನಿರ್ಜೀವ ಭಾವಚಿತ್ರವಲ್ಲ, ಇತಿಹಾಸದಲ್ಲಿ ಆಗಿಹೋಗಿ ಸತ್ತು ಮಣ್ಣಾಗಿರುವ ಒಂದು ಮಣ್ಣಿನ ಕಾಯವಲ್ಲ, ನಿರಂತರವಾಗಿ ಅಸಂಖ್ಯಾತರ ಹೃದಯದಲ್ಲಿ ಪ್ರಕಾಶಿಸುತ್ತ ಜೀವನ ಪಥದಲ್ಲಿ ಬೆಳಕು ತೋರುವ ಶಕ್ತಿ. ಕೆಲವರಿಗೆ ಬಸವಾದಿ ಪ್ರಮಥರನ್ನು ಕುರಿತು ಕೇವಲ ಸಾಹಿತ್ಯಕ ಸಂಬಂಧವಿರಬಹುದು ; ಮತ್ತೆ ಕೆಲವರಿಗೆ ಅಸಂಖ್ಯಾತ ಅಭಿಮಾನಿಗಳನ್ನು ಹೊಂದಿರುವ ಬಸವಣ್ಣನವರ ಮೇಲೆ ಬರೆಯುವುದು ಲಾಭದಾಯಕವಾಗಿ, ವ್ಯಾವಹಾರಿಕ ಸಂಬಂಧವಿರಬಹುದು ; ಆದರೆ ಕೋಟಿಗಟ್ಟಳೆ ಜನರ ಭಾಕ್ತಿಕ ಜೀವನದ ಉಸಿರಾಗಿರುವ ಗುರು ಬಸವಣ್ಣನವರೊಡನೆ ಅನೇಕರಿಗೆ ಭಾವನಾತ್ಮಕ ಸಂಬಂಧವಿದೆ. ಈ ಭಾವನಾತ್ಮಕ ಶ್ರದ್ಧೆ ಕೆಡಿಸಲು ಯಾರಿಗೂ ಹಕ್ಕಿಲ್ಲ. ಕನ್ನಡಕ್ಕಾಗಿ ಏಕೆ ದುಡಿಯಬೇಕು, ಮಡಿಯಬೇಕು ? ಅದು ಪದಗಳ ಸಮುಚ್ಚಯ ಮಾತ್ರ ; ಕನ್ನಡದ ಬಗ್ಗೆ ಅಭಿಮಾನ ಆವೇಶ ತಾಳುವುದು ಮೌಢ್ಯತೆ, ಭಾಷಾಂಧತೆ ಎನ್ನಲಾದೀತೆ ? ಜನ್ಮಕೊಟ್ಟ ತಾಯಿ–ತಂದೆ ಕೇವಲ ಸಪ್ತಧಾತುಗಳಿಂದಾದ ಮಾಂಸದ ಮುದ್ದೆಗಳು, ಅವರ ಸೇವೆ ಏಕೆ ಮಾಡಬೇಕು ಎನ್ನಲಾದೀತೆ ? ಭಾರತ ಎಂದರೇನು ಕಲ್ಲು–ಮಣ್ಣು, ನದಿ–ನದಗಳಿಂದ ಕೂಡಿದ ನಿರ್ಜೀವ ಭೂಖಂಡ, ಇದಕ್ಕಾಗಿ ಏಕೆ ಪ್ರಾಣ ತೆರಬೇಕು ಎಂದು ಸೈನಿಕನು ಭಾವಿಸಲಾದೀತೆ ? ಹೀಗೆ ಬದುಕು ನಿಂತಿರುವುದೇ ಭಾವಸಂಪದದ ಮೇಲೆ. ಶ್ರೀ ಬಸವಣ್ಣನವರು ಅವರ ಸಮಕಾಲೀನ ಶರಣರು ಸಾಧಿಸಿದ ಸಾಧನೆ, ಮಾಡಿದ ತ್ಯಾಗ, ನೀಡಿದ ಕೊಡುಗೆ, ಇವುಗಳನ್ನು ಕೃತಘ್ನರಾಗಿ ನಾವು ಮರೆಯಲು ಸಾಧ್ಯವಿಲ್ಲ. ಈ ಎಲ್ಲವಕ್ಕೂ ಅಪಚಾರ ಬಗೆದು ಶರಣರನ್ನು ಹೀನಾಯವಾಗಿ ಚಿತ್ರಿಸುವ ಮಹಾಚೈತ್ರವು ಪಠ್ಯಕ್ರಮದಿಂದ ರದ್ದಾಗುವವರೆಗೂ ನಮ್ಮ ಹೋರಾಟ ನಿಲ್ಲದು. ಅಸಂಖ್ಯಾತ ಶ್ರದ್ಧಾವಂತರ ಭಾವನೆಯೊಡನೆ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಮಾಡುವ ಚೆಲ್ಲಾಟ ಸಮರ್ಥನೀಯವಲ್ಲ. ಅಭಿವ್ಯಕ್ತಿ ಸ್ವಾತ್ರಂತ್ರ್ಯದ ಹೆಸರಿನಲ್ಲಿ ಕೆಲವು ಬರಹಗಾರರು ಅತ್ಯಂತ ನಿರ್ವಿಕಾರಿಗಳಾಗಿ ಮಹಾಪುರುಷರ ಜೀವನ–ಸಾಧನೆ–ಸಂದೇಶಗಳ ಬಗ್ಗೆ ನಡೆಸುತ್ತಿರುವ ಸಾಹಿತ್ಯಕ ಹಲ್ಲೆಯು ಧಾರ್ಮಿಕ ಜನರ ಸಹನೆಯನ್ನು ಕೆಣಕುತ್ತಲಿದೆ.

ಮಹಾಚೈತ್ರವು ಮೌಲಿಕ ಕೃತಿಯೆ ?

ಬಸವಣ್ಣನವರು ಮತ್ತು ಸಮಕಾಲೀನ ಶರಣರ ಬಗ್ಗೆ ಕೇವಲ ಕಾವ್ಯ, ಪುರಾಣಗಳು ಮಾತ್ರವಲ್ಲದೆ ಅತ್ಯಂತ ನಿಖರವಾದ ಸಾಕ್ಷಿಗಳು, ಆಕರಗಳೂ ಆಗಿ ವಚನಗಳ

ರಾಶಿಯೇ ಇದೆ. ಅಂದಾಗ ಇವನ್ನೆಲ್ಲ ಧಿಕ್ಕರಿಸಿ ಯಾವುದೇ ಸಾಹಿತ್ಯ ಕೃತಿಯು–ಅದು ನಾಟಕವೇ ಇರಲಿ ಕಾದಂಬರಿಯೇ ಇರಲಿ **ಮಾತನಾಡಲಾರದು, ಮಾತನಾಡಲೂ ಬಾರದು.** ಅಂಥ ನಾಲ್ಕಾರು ಪ್ರಮಾದಪೂರ್ಣ ಚಾರಿತ್ರಿಕ ದೋಷಗಳನ್ನು ಒಡಲೊಳಗೆ ಇಟ್ಟುಕೊಂಡು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಬರೆದುದೆಲ್ಲವನ್ನೂ ಸಮರ್ಥಿಸಿಕೊಳ್ಳುವ ಕೆಲವರ ಪ್ರಯತ್ನವು ಬೌದ್ಧಿಕ ಪ್ರಾಮಾಣಿಕತೆಯಾಗದು. ಇಷ್ಟುದಿನ ಯಾವುದೋ ಭ್ರಮೆಯಲ್ಲಿ ಮಹಾಚೈತ್ರವನ್ನ ಮೌಲಿಕ ಸಾಹಿತ್ಯ ಕೃತಿ ಎಂದು ಏಕಮುಖವಾಗಿ ನಂಬಿದವರು, ಓದಿದವರು, ಪುಸ್ತಕವನ್ನು ಓದದೆಯೇ ದುರಾಗ್ರಹದಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ವಕಾಲತ್ತು ವಹಿಸಿ, ಇದು ಪಠ್ಯವಾಗಿ ಇರಬೇಕು ಎನ್ನುವವರು ಈಗಲಾದರೂ ಭ್ರಮಾಧೀನತೆಯಿಂದ ಹೊರಬರುವ ಯತ್ನ ಮಾಡಿ, ಕೀಳು–ಮಟ್ಟದ ಸಂಭಾಷಣೆ, ವಿವಿಧ ಜಾತಿಗಳವರು ಪರಸ್ಪರ ದೂಷಿಸುವ ರೀತಿ, ಕೀಳು ಬೈಗುಳ, ಚಾರಿತ್ರಿಕ ಅಸ್ಪಷ್ಟತೆ, ವ್ಯಕ್ತಿತ್ವದ ವಿಕೃತ ಚಿತ್ರಣ, ಮಹಾಪುರುಷರ ನಿಂದೆ- ಇಂಥ ಹತ್ತಾರು ದೋಷ ಗಳನ್ನು ಮಹಾಚೈತ್ರದಲ್ಲಿ ಗುರುತಿಸುವ ಬೌದ್ಧಿಕ ಪ್ರಾಮಾಣಿಕತೆ ಹೊಂದಬೇಕಾಗಿದೆ.

ಲೇಖಕರು ಬರೆಯುವ ಮತ್ತು ಪ್ರಕಾಶಿಸುವ ಸ್ವಾತಂತ್ರ್ಯ ಹೊಂದಿರುವುದು ಸ್ವಾಭಾವಿಕ. ಹಾಗೆ ಬರೆಯಲ್ಪಟ್ಟವನ್ನೆಲ್ಲ ಓದುವ ಕಡ್ಡಾಯತೆ, ಅನಿವಾರ್ಯತೆ ಜನರಿಗಿರದು. ಆದರೆ ಅದು ಪಠ್ಯವಾದಾಗ ವಿದ್ಯಾರ್ಥಿಗಳ ಮೇಲೆ ಹೇರಲ್ಪಟ್ಟು, ಓದುವಿಕೆ ಅನಿವಾರ್ಯವಾಗುತ್ತದೆ. ವಿಷವು ಉತ್ಪಾದನೆಯಾಗುವ ಸ್ವಾತಂತ್ರ್ಯ ಹೊಂದಿದೆ. ಔಷಧಿ ಅಂಗಡಿಗಳಲ್ಲೂ ಇರಬಹುದು. ಆದರೆ ಶಾಲೆಯ ಮಕ್ಕಳಿಗೆ ಸರ್ಕಾರ ಕೊಡುವ ಉಪಾಹಾರದಲ್ಲಿ ಸೇರಿಸಲ್ಪಡಲು ಸಾಧ್ಯವೆ ? ಆದ್ದರಿಂದ ಯಾವುದನ್ನೇ ಆದರೂ ಪಠ್ಯವಾಗಿ ಆಯ್ಕೆ ಮಾಡುವಾಗ ಆ ಕೃತಿಯ ಸಾಹಿತ್ಯಕ ಮೌಲ್ಯವನ್ನಷ್ಟೆ ಅಲ್ಲ, ಚಾರಿತ್ರಿಕ ನಿಖರತೆ ಅದು ಪ್ರತಿಪಾದಿಸುವ ತಾತ್ತ್ವಿಕ ಮೌಲ್ಯ, ಬಿಂಬಿಸುವ ಜೀವನ-ಸಿದ್ಧಾಂತ ಮುಂತಾದುವುಗಳ ಕಡೆಗೂ ಗಮನಕೊಡುವುದು ಅಗತ್ಯ.

ಕೆಲವು ಸಾಹಿತಿಗಳು ಮಹಾಚೈತ್ರವನ್ನು ಕೇವಲ ಸಾಹಿತ್ಯ ಕೃತಿ, ನಾಟಕ ಎಂದು ಮಾತ್ರ ನೋಡಬೇಕೆಂದು ಪದೇ ಪದೇ ಪತ್ರಿಕಾ ಹೇಳಿಕೆ ನೀಡುತ್ತಿರುವರು. ಶ್ರೀ ಬಸವಣ್ಣನವರು, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ ಮುಂತಾದವರು ಧಾರ್ಮಿಕ–ದಾರ್ಶನಿಕ ವ್ಯಕ್ತಿತ್ವವಿಲ್ಲದೆ ಕೇವಲ ಕವಿಗಳೋ, ಸಾಹಿತಿಗಳೋ ಆಗಿದ್ದರೆ ಧಾರ್ಮಿಕ ಶ್ರದ್ಧಾಳುಗಳು ಇಷ್ಟೊಂದು ಉದ್ವಿಗ್ನರಾಗುವ ಅಗತ್ಯವಿರಲಿಲ್ಲ. ಆ ಮಹಾಪುರುಷರ ಜೊತೆಗೆ ಸಮಾಜದ, ಅನುಯಾಯಿಗಳ ಕರುಳ ಬಳ್ಳಿ (ಹೊಕ್ಕುಳ ಬಳ್ಳಿ) ಬೆಸೆದುಕೊಂಡಿದೆ. ಕೆಲವು ಬರಹಗಾರರು ಧರ್ಮದ ಬಗ್ಗೆ ಬರೆಯುತ್ತಾರೆ. ಆದರೆ ಅದು ನಿರ್ದೇಶಿಸುವಂತೆ ಬದುಕರು. ಧಾರ್ಮಿಕ ಶ್ರದ್ಧಾಳುಗಳು ಧರ್ಮವು ನಿರ್ದೇ-

ಶಿಸುವಂತೆ ಬದುಕನ್ನು ರೂಪಿಸಿಕೊಳ್ಳುವ ಉದಾತ್ತ ಚಿಂತನೆಯುಳ್ಳವರು. ಸಾಹಿತ್ಯ ಅಕಾಡೆಮಿಗಳ ಬಹುಮಾನಗಳಾಗಲೀ, ನಾಟಕವಾಗಿ ರಂಗದ ಮೇಲೆ ಯಶಸ್ವಿಯಾದ ಪ್ರಯೋಗಗಳಾಗಲೀ ಮಹಾಚೈತ್ರ ಕುರಿತು ಈಗ ರಾಷ್ಟ್ರೀಯ ಬಸವ ದಳವು ಎತ್ತಿರುವ ಆಕ್ಷೇಪಗಳಿಗೆ ಸೂಕ್ತ ಉತ್ತರ ನೀಡಿದಂತೆ ಆಗದು. "ಇಷ್ಟು ದಿವಸ ಕಾಲ ಅಂದರೆ ಹಿಂದೆ ಹಲವಾರು ವಿಶ್ವವಿದ್ಯಾಲಯಗಳಿಗೆ ಮತ್ತು ಈಗ ಕುವೆಂಪು–ಕಲಬುರ್ಗಿ ವಿಶ್ವವಿದ್ಯಾಲಯಗಳ ಪಠ್ಯದಲ್ಲಿದೆ ; ಆದ್ದರಿಂದ ಈಗಲೂ ಮುಂದುವರಿಯಲಿ"ಎನ್ನುವುದು ಬುದ್ಧಿಜೀವಿಗಳಿಗೆ ಉಚಿತವಲ್ಲದ ನಿಲುವು. ಬಹುದಿನಗಳ ಕಾಲ ಮಲಿನಗೊಂಡ ನೀರನ್ನು ಶೋಧಿಸದೆ ಕುಡಿದಿದ್ದೇವೆ ಹಾಗೆಯೇ ಇನ್ನಷ್ಟು ಕಾಲ ಕುಡಿಯೋಣ ಎಂದಂತಾಗುವುದು. ಇಂಥ ಕುಚೋದ್ಯದ ಪುಸ್ತಕಗಳು ಪಠ್ಯಗಳಾಗುತ್ತ ಹೋದರೆ ಮುಂದಿನ ಪೀಳಿಗೆ ಬಸವಣ್ಣ, ಗಾಂಧೀಜಿಯಂತಹವರನ್ನು ರಾಷ್ಟ್ರದ್ರೋಹಿಗಳು, ದೇಶದ ಬೊಕ್ಕಸ ಲೂಟಿ ಮಾಡಿದವರು ಎಂದು ಮುಂತಾಗಿ ತಿಳಿಯುವುದೇ ಅಲ್ಲದೆ ಅವರ ಅಹಿಂಸಾವಾದವನ್ನು ಹೇಡಿತನವೆಂದು, ಸತ್ಯನಿಷ್ಠೆಯನ್ನು ಬದುಕನ್ನು ಪ್ರೀತಿಸಲಾರದ ಅಸಮರ್ಥತೆ ಎಂದು ಭಾವಿಸಬಹುದು, ನನ್ನ ಮೇಲೆ ಅಪಾರವಾದ ಪ್ರಭಾವ ಬೀರಿದ "ಮಹಾರಾತ್ರಿ"ಯಂತಹ ಉದಾತ್ತ ನಾಟಕ ರಚಿಸಿದ ಒಂದು ಸುಸಂಸ್ಕಾರ ಸಹಿತವಾದ ಸಾಹಿತ್ಯ ಪರಂಪರೆಯ ದಾರ್ಶನಿಕ ಸಾಹಿತಿ ಶ್ರೀ ಕುವೆಂಪುರವರ ಕಾಲ ಮುಗಿದುದು ಕನ್ನಡ ನಾಡಿನ ದುರ್ದೈವ. ಶ್ರೀ ಕುವೆಂಪು ಆರಂಭಿಸಿದ ಅಂಥ ಸುಸಂಸ್ಕೃತ ಕಾವ್ಯ ಸಂಪದ, ಭಾಷಾ ಸಂಪತ್ತಿನಿಂದ ಮೆರೆದಾಡುವ ಕೃತಿಗಳ ಜನನ ಅವರ ನಿರ್ಗಮನದೊಡನೆಯೇ ಅಂತ್ಯಗೊಂಡು ಬೈಗುಳಗಳು, ಅಸಭ್ಯ ಭಾಷೆಯ ಸಾಹಿತ್ಯ ಕೃತಿಗಳೇ ವಿದ್ಯಾರ್ಥಿಗಳಿಗೆ ತರಬೇತಿ ಕೊಡುವ ಮುಂಚೂಣಿಯಲ್ಲಿ ನಿಲ್ಲುವ ಕಾಲ ಮುಂದಿರಬಹುದು. ಸರ್ಕಾರವು ಯಾವುದೇ ರೀತಿಯಲ್ಲೂ ಪಠ್ಯವಾಗಲು ಅರ್ಹವಿಲ್ಲದ ಮಹಾಚೈತ್ರವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಿ. ನಂತರ ಪುಸ್ತಕವನ್ನು ಸಮರ್ಥಿಸಿಕೊಳ್ಳುತ್ತಿರುವವರು ನಾವು ಎತ್ತಿರುವ ಚಾರಿತ್ರಿಕ, ತಾತ್ತ್ವಿಕ ಆಕ್ಷೇಪಣೆಗಳಿಗೆ ಸೂಕ್ತವಾದ ಸಮಜಾಯಿಷಿ ನೀಡಲಿ. ಕಾಗೆಯನ್ನೇ ಹಂಸ ಪಕ್ಷಿ ಎಂದು ಒಪ್ಪಿಕೊಂಡು ಗೌರವಿಸಿರಿ ಎಂಬ ಹಿತೋಪದೇಶವನ್ನು ಬಿಟ್ಟು ಬೌದ್ಧಿಕ ಪ್ರಾಮಾಣಿಕತೆ, ಮುಕ್ತಮನಸ್ಸು ಇದ್ದರೆ ಪುಸ್ತಕದ ಪರವಾಗಿ ಕುರುಡು ಅಭಿಮಾನದಿಂದ ಸಮರ್ಥಿಸುತ್ತಿರುವ ಕೆಲವು ಸಾಹಿತಿಗಳು ಪುನಶ್ಚಿಂತನೆ ಮಾಡಲಿ,

ವಾಸ್ತವ್ಯ–ಬೆಂಗಳೂರು.
ದಿ. 12–11–1994

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ

ಕುಹಕ ಕಲ್ಪನೆಗಳ 'ಮಹಾಚೈತ್ರ' ಮತ್ತು ಡಂಬಾಯಗಾರರು!

—ವಿಶ್ವಾರಾಧ್ಯ ಸತ್ಯಂಪೇಟೆ

'ಶಂಖದಿಂದ ಬಿದ್ದದ್ದೆ ತೀರ್ಥ'—ಎಂದು ತಿಳಿದಿರುವ ನಮ್ಮ ವಿಶ್ವವಿದ್ಯಾಲಯಗಳ ಪಂಡಿತ ಮಂಡಳಿಗಳು ತಮ್ಮ ಎಂದಿನ ದಿವ್ಯ ನಿರ್ಲಕ್ಷ್ಯ ಹಾಗೂ 'ಮುಖನೋಡಿ ಮಣೆ ಹಾಕುವ' ಕೀಳುತನದಿಂದಾಗಿ ಪ್ರತಿವರ್ಷ ಯಾವುದಾದರೊಂದು ವಿವಾದಿತ ಪುಸ್ತಕವನ್ನು ಪಠ್ಯಕ್ಕಾಗಿ ಆಯ್ಕೆ ಮಾಡಿರುತ್ತದೆ. ಈ ಪುಸ್ತಕದಲ್ಲಿರುವ ಅತ್ಯಂತ ಬಾಲಿಶ, ಅಪಕ್ವ, ಐತಿಹಾಸಿಕವಲ್ಲದ ಹಾಗೂ ಅಶ್ಲೀಲಯುತ ವಿಚಾರಗಳು ಕೆಲ ದಿನಗಳು ಕಳೆಯುತ್ತಿರುವಂತೆ ಬಟಾ-ಬಯಲಾಗುತ್ತವೆ. ಹೀಗೆ ಪುಸ್ತಕದಲ್ಲಿನ ಹುಳುಕುಗಳು ಗೊತ್ತಾಗುತ್ತಲೇ ಕೆಲ ಹಿತಾಸಕ್ತ ವ್ಯಕ್ತಿಗಳು ಅದರ ವಿರುದ್ಧ ಹೇಳಿಕೆ ನೀಡಿ, ಈ ಪುಸ್ತಕ ವಿಶ್ವವಿದ್ಯಾಲಯ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ, ಯಾವುದಾದರೂ ಹೇಳಿಕೆಗೆ ಪ್ರಬಲ ಪ್ರತಿಭಟನೆ ಒಡ್ಡುವುದೇ 'ಬಂಡಾಯ' ಎಂದು ತಿಳಿದಿರುವ ನಮ್ಮ ಕೆಲ ಡಂಬಾಯಗಾರರು. ಮುಗಿಲೇ ಹರಿದು ಬೀಳುವಂತೆ ಈ ಕೃತಿಯ ಪರ ಹೇಳಿಕೆಗಳನ್ನು ನಾಮುಂದೆ-ತಾಮುಂದೆ ಎಂದು ನೀಡತೊಡಗುತ್ತಾರೆ. ಹೀಗೆ ಹೇಳಿಕೆ ನೀಡುವಾಗ ಆ ಕೃತಿಯನ್ನು ಆರೋಗ್ಯ ಪೂರ್ಣ ದೃಷ್ಟಿಯಿಂದ ನೋಡುವ ಪುರುಸೊತ್ತಾಗಲೀ, ತಾಳ್ಮೆಯಾಗಲಿ ಈ ಬಂಡಾಯಗಾರರಿಗೆ ಇರುವುದೇ ಇಲ್ಲ ಎಂಬುದು ಇಲ್ಲಿ ಗಮನಾರ್ಹ !

ಎಚ್. ಎಸ್. ಶಿವಪ್ರಕಾಶರ 'ಮಹಾಚೈತ್ರ' ನಾಟಕ ಕೂಡ ಮೇಲಿನ ಈ ಎಲ್ಲಾ ಗೊಂದಲಗಳಿಂದ ಹೊರತಾಗಿಲ್ಲ. ಈ ಕೃತಿಯನ್ನು ಆರೋಗ್ಯಕರ ನಿಲುವಿನಿಂದ ಓದುತ್ತಾ ಹೋದರೆ ಈ ಕೃತಿಯ ಲೇಖಕರಿಗೆ ಐತಿಹಾಸಿಕ ಪ್ರಜ್ಞೆ, ಶರಣತ್ವದ ಘನತೆ ಅರಿಯುವ ತಾಕತ್ತು ಇಲ್ಲದ್ದು ಮೇಲುನೋಟಕ್ಕೇ ಗೊತ್ತಾಗುತ್ತದೆ. ಬಸವಣ್ಣನವರ ಅಳಿಯ ಚೆನ್ನಬಸವಣ್ಣನವರಂತೂ ಅತ್ಯಂತ ಗುರುತರವಾದ ಸಂದರ್ಭವೊಂದರಲ್ಲಿ ಅಸಹಾಯಕನಂತೆ, ಕೈಲಾಗದ ಹೇಡಿಯಂತೆ, ಬಸವಣ್ಣನ ಆಜ್ಞಾಧಾರಕ ಪಾತ್ರನಾಗಿರುವಂತೆ, ಏನೊಂದೂ ಗೊತ್ತಿಲ್ಲದ ಹುಂಬನಂತೆ ಚಿತ್ರಿಸಿದ ಶಿವಪ್ರಕಾಶರ ಕುಹಕತನ ಯಾರನ್ನೂ ಕೆರಳಿಸುತ್ತದೆ.

ಏಕೆಂದರೆ ಷಟಸ್ಥಲ ಚಕ್ರವರ್ತಿ ಎಂಬ ಹೆಸರಿನಿಂದ ಹೆಸರಿಸಲ್ಪಡುತ್ತಿದ್ದ

"ಗಗನ ಪವನದ ಮೇಲೆ ಉದಯಮುಖದನುಭಾವ
....
ಬಯಲ ಬಣ್ಣಕೆ ತಂದು ನೆಳಲ ಶೃಂಗಾರ ಮಾಡಿದ
ಗುಹೇಶ್ವರ ಶರಣ ಚೆನ್ನಬಸವಣ್ಣಂಗೆ ಶರಣೆನ್ನುತಿರ್ದೆನು" —ಅಲ್ಲಮಪ್ರಭು

[49 ನೇ ಪುಟಕ್ಕೆ ಮುಂದುವರಿದಿದೆ]

'ಮಹಾಚೈತ್ರ' -ಪಠ್ಯಪುಸ್ತಕವಾಗಲು ಅರ್ಹವೆ ?

ವಿಮರ್ಶೆ :

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಮಹಾಮನೆ ಮಹಾಮಠ,
ಕೂಡಲ ಸಂಗಮ.

[ರಾಶಿರಾಶಿ ವಚನ ಸಾಹಿತ್ಯ, ಅದರ ಮೇಲೆ ಉತ್ಕೃಷ್ಟ ಗ್ರಂಥಗಳು ಇರುವಾಗ, ವಿಧಾಯಕವಾದ ಕೃತಿಗಳನ್ನು ಬಿಟ್ಟು ಕೋಮುಭಾವನೆ, ಭಿನ್ನಾಭಿಪ್ರಾಯ ಹುಟ್ಟಿಸುವ ಹೆಚ್, ಎಸ್, ಶಿವಪ್ರಕಾಶ್ ಎಂಬುವವರ ನಾಟಕ "ಮಹಾಚೈತ್ರ" ಎಂಬ ಕೆಳಮಟ್ಟದ ಕೃತಿಯನ್ನು ಗುಲಬರ್ಗಾ ಮತ್ತು ಕುವೆಂಪು ವಿಶ್ವವಿದ್ಯಾಲಯಗಳು ಪಠ್ಯ-ಪುಸ್ತಕವನ್ನಾಗಿ ಆಯ್ಕೆ ಮಾಡಿರುವ ಔಚಿತ್ಯವನ್ನು ಪೂಜ್ಯ ಮಾತಾಜಿಯವರು ಪ್ರಶ್ನಿಸಿ, ಈ ಕೃತಿಯನ್ನು ಪಠ್ಯಕ್ರಮದಿಂದ ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಕೃತಿಯನ್ನು ಸಮಗ್ರವಾಗಿ ವಿಮರ್ಶಿಸಿದ್ದಾರಲ್ಲದೆ ಇಂತಹ ಪುಸ್ತಕವನ್ನು ಪಠ್ಯವಾಗಿ ಆಯ್ಕೆ ಮಾಡಿದ ಪಠ್ಯಪುಸ್ತಕ ಸಮಿತಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು, ಇಂಥ ಕೃತಿಯನ್ನು ಆಯ್ಕೆ ಮಾಡುವ ಹಿನ್ನೆಲೆಯಲ್ಲಿ ನಡೆದಿರಬಹುದಾದ ಶಿಫಾರಸು-ಭ್ರಷ್ಟಾಚಾರಗಳನ್ನು ವಿಚಾರಣೆಯ ಮೂಲಕ ಬಯಲಿಗೆಳೆಯಬೇಕೆಂದು ಸರ್ಕಾರವನ್ನು ಆಗ್ರಹಪಡಿಸಿದ್ದಾರೆ.]

ಬಸವಕುಮಾರ್ ಪಾಟೀಲ್, ಬೀದರ.
ಕಾರ್ಯಾಧ್ಯಕ್ಷ, ರಾಷ್ಟ್ರೀಯ ಬಸವ ದಳ
ಕರ್ನಾಟಕ ರಾಜ್ಯ ಸಮಿತಿ,

ಮಹಾಚೈತ್ರ—ಒಂದು ಕುಚೋದ್ಯದ ನಾಟಕ

[ವಿಮರ್ಶೆ]

"ಮಹಾಚೈತ್ರ" ಎಂಬ ಶೀರ್ಷಿಕೆ ಹೊತ್ತ ಒಂದು ನಾಟಕ ಕೃತಿಯು ಹೆಚ್. ಎಸ್. ಶಿವಪ್ರಕಾಶ್ ಎಂಬ ಲೇಖಕರ ಕೃತಿಯಾಗಿದ್ದು 112 ಪುಟಗಳಿಂದ ಕೂಡಿದೆ. 1986 ರಲ್ಲಿ ಮೊದಲ ಮುದ್ರಣವನ್ನು 1991 ರಲ್ಲಿ ಎರಡನೆಯ ಮುದ್ರಣವನ್ನು, 1994 ರಲ್ಲಿ ಮೂರನೆಯ ಮುದ್ರಣವನ್ನು ಕಂಡಿರುವುದಾದರೂ ಇದೀಗ ನಮ್ಮ ಗಮನಕ್ಕೆ ಬಂದಿದ್ದು ಕೆಲವು ವಿದ್ಯಾರ್ಥಿಗಳು ಪತ್ರ ಬರೆದುದರಿಂದ, ಈ ಕೃತಿಯನ್ನು 94-95ನೆಯ ಸಾಲಿನಿಂದ 3 ವರ್ಷಗಳ ಅವಧಿಗಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಥಮ ಬಿ.ಎ (ಸಾಮಾನ್ಯ)ಗೆ ಪಠ್ಯವನ್ನಾಗಿ ಗೊತ್ತುಪಡಿಸಲಾಗಿದೆ. ಕುವೆಂಪು ವಿಶ್ವವಿದ್ಯಾಲಯದ ಮೊದಲ ವರ್ಷದ ಪದವಿ ತರಗತಿಗಳಿಗೆ ಸಹ ಪಠ್ಯವಾಗಿದೆ. ಈ ಹಿಂದೆ ಮಂಗಳೂರು ವಿಶ್ವವಿದ್ಯಾಲಯದಲ್ಲೂ ಪಠ್ಯವಾಗಿದ್ದಿತಂತೆ. 1986 ರಷ್ಟು ಹಿಂದೆಯೇ ಮುದ್ರಣಗೊಂಡಿದ್ದರೂ ಹೆಚ್ಚಿನ ಜನರ ಗಮನ ಸೆಳೆದಿರದ ಇದು, ಪಠ್ಯವಾಗಿರುವುದರಿಂದ ವಿದ್ಯಾರ್ಥಿಗಳ ಮೂಲಕ ನಮ್ಮ ಗಮನಕ್ಕೆ ಬಂದಿದೆ.

"ಮಹಾಚೈತ್ರ" ಎಂಬ ಹೆಸರು ಸುಂದರವಾಗಿದೆ. ಈ ನಾಟಕದಲ್ಲಿ ಕ್ರಾಂತಿಯ ನೇತಾರ ಬಸವಣ್ಣನವರು ನೇರವಾಗಿ ಕಾಣಿಸಿಕೊಳ್ಳುವುದಿಲ್ಲ. ಅವರು ಕಲ್ಯಾಣವನ್ನು ತೊರೆದ ಸಮಯ ಮತ್ತು ತಕ್ಷಣದಲ್ಲಿ ಏನೇನು ಆಯಿತು ಎಂಬುದನ್ನು ತಮ್ಮದೇ ಆದ ಕಪೋಲ ಕಲ್ಪಿತ ಊಹೆಗಳನ್ನು ಸೇರಿಸಿ, ವಿವಿಧ ಪಾತ್ರಗಳ ಮೂಲಕ ಲೇಖಕ ಶಿವಪ್ರಕಾಶ್ ಅವರು ಚಿತ್ರಿಸಿದ್ದಾರೆ. ಆದರೆ ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ಭವ್ಯವೂ, ಧೀರೋದಾತ್ತವೂ, ಉದಾತ್ತ ಉದ್ದೇಶದ್ದೂ ಆದ ಒಂದು ಘಟನೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವಲ್ಲಿ ಸೋತಿದ್ದಾರೆ. ಈ ಸೋಲಿನ ಹಿಂದೆ ಲೇಖಕರ ಊಹಾಶಕ್ತಿಯ ಕೊರತೆ, ಅಧ್ಯಯನದ ಕೊರತೆಗಳಷ್ಟೇ ಇರದೆ ಬಸವಾದಿ ಪ್ರಮಥರ ವ್ಯಕ್ತಿತ್ವವನ್ನು ಅರಿಯಲಾರದ ಅಸಮರ್ಥತೆ, ಅವರ ವ್ಯಕ್ತಿತ್ವದ ಬಗ್ಗೆ ಕಲಂಕ ಹಚ್ಚಬೇಕೆಂಬ ದುರುದ್ದೇಶ ಎದ್ದು ಕಾಣುತ್ತಿವೆ.

ಚಾರಿತ್ರಿಕ ದೋಷ

ಭಾರತೀಯರಲ್ಲಿ ಚಾರಿತ್ರಿಕ ಪ್ರಜ್ಞೆ, ನಿಖರತೆ ಕಡಿಮೆ ಎಂಬ ಪಾಶ್ಚಾತ್ಯ ದೇಶಗಳ ಆರೋಪವು ಜನಸಾಮಾನ್ಯರಿಗೆ ಅನ್ವಯಿಸಿ, ಜನ ಸಾಮಾನ್ಯರ ವಿಷಯದಲ್ಲಿ ಕ್ಷಮ್ಯ ಅಪರಾಧವಾದರೂ, ಹೆಚ್. ಎಸ್. ಶಿವಪ್ರಕಾಶರಂಥ ಬರಹಗಾರರ ವಿಷಯದಲ್ಲಿ ಅಕ್ಷಮ್ಯ ಅಪರಾಧ. ಕಾಲ್ಪನಿಕ ಕಥೆ–ನಾಟಕಗಳ ಪಾತ್ರಗಳ ವಿಷಯದಲ್ಲಿ ಯಾರು

ಏನು ಬರೆದರೂ ನಡೆಯುತ್ತದೆ. ಆದರೆ ಚಾರಿತ್ರಿಕ ವ್ಯಕ್ತಿಗಳನ್ನು, ಪ್ರಸಂಗಗಳನ್ನು ಚಿತ್ರಿಸುವಾಗ, ಉಲ್ಲೇಖಿಸುವಾಗ ಅದರಲ್ಲೂ ವಿಶ್ವಗುರು ಬಸವಣ್ಣನವರಂಥ, ಅಕ್ಕ ನಾಗಲಾಂಬಿಕೆ, ಮಡಿವಾಳ ಮಾಚಿದೇವ, ಚನ್ನಬಸವಣ್ಣನವರಂಥ ಮಹಾಪುರುಷರ ಬಗ್ಗೆ ಬರೆಯುವಾಗ ಲೇಖಕರು ಅತೀವ ಎಚ್ಚರಿಕೆ ವಹಿಸುವುದು ಅಗತ್ಯವಿದೆ. ಮನಸ್ಸಿಗೆ ಬಂದುದನ್ನು ಗೀಚುವ ಪ್ರವೃತ್ತಿ ಸಹನಾರ್ಹವಲ್ಲ.

೧. ವಿಶ್ವಗುರು ಬಸವಣ್ಣನವರ ನಿರ್ಗಮನ :

ವಿಶ್ವಗುರು ಬಸವಣ್ಣನವರು ವರ್ಣಾಂತರ ವಿವಾಹವನ್ನು ಮಾಡಿಸಿದ ಕಾರಣಕ್ಕಾಗಿ ಗಡಿಪಾರು ಶಿಕ್ಷೆಯನ್ನು ಹೊಂದಿ, ಕಲ್ಯಾಣವನ್ನು ತೊರೆಯಬೇಕಾಯಿತು. ಈ ಬಗ್ಗೆ ಸ್ಪಷ್ಟತೆಗಿಂತಲೂ ಅಸ್ಪಷ್ಟತೆಯೇ ಈ ಕೃತಿಯಲ್ಲಿದೆ. ಬಸವಣ್ಣನವರು ಹೇಡಿಯಂತೆ ಪಲಾಯನ ಮಾಡಿದರು ಎಂಬ ಭಾವ ಬರುವ ಮಾತುಗಳನ್ನು ಕೆಲವು ಪಾತ್ರಗಳ ಮೂಲಕ ಆಡಿಸಿ ಶಿವಪ್ರಕಾಶರು ಬಹುದೊಡ್ಡ ಅಪಚಾರ ಮಾಡಿದ್ದಾರೆ. ಉದಾ : ಮಾಚಿದೇವ–ಪುಟ 14,

"ಅವರು ನಮ್ಮನ್ನು ನಡುನೀರಿನ ತನಕ ಬಿಟ್ಟು ಹೋಗಿದ್ದಾರೆ. ದಡ ಸೇರಬೇಕಾದ್ದು ನಮ್ಮ ಕೆಲಸ." "ಅವರಿಗೇನು ? ನಮ್ಮನ್ನು ಬಿರುಗಾಳಿ, ಭೂಕಂಪದ ಪಾಲುಮಾಡಿ ತಣ್ಣಗೆ ಅಲ್ಲಿಗೆ ನಡೆದುಬಿಟ್ಟರು." (ಸೋಮಮ್ಮ–49) ಸಂಪ್ರದಾಯ ಜಡರ ಪ್ರೇರೇಪಣೆಗಳಿಂದ ಮತಿಭ್ರಾಂತನಾದ ಬಿಜ್ಜಳನ ರಾಜಾಜ್ಞೆಗೆ ಒಳಪಟ್ಟು ಬಸವಣ್ಣನವರು ಕಲ್ಯಾಣವನ್ನು ತೊರೆಯಬೇಕಾದುದಕ್ಕೆ ಹಲವಾರು ಆಧಾರಗಳು ನಮಗೆ ಸಿಗುತ್ತವೆ. ಕಲ್ಯಾಣದಿಂದ ಕೂಡಲ ಸಂಗಮದವರೆಗಿನ ಮಾರ್ಗದುದ್ದಕ್ಕೂ ಅಲ್ಲಲ್ಲೇ ಸಿಕ್ಕುವ **ದಂಡಗೊಂಡ ಬಸವಣ್ಣ**ನ ಗುಡಿಗಳು ಇದಕ್ಕೆ ಸಾಕ್ಷಿಯಾಗುತ್ತವೆ. ಅವರು ಹೊರಟಾಗ ಹೆಚ್ಚಿನ ಜನರು ಹಿಂಬಾಲಿಸಲು ಸಾಧ್ಯವಾಗದ ಕಾರಣವೂ ಅದೇ ಆಗಿದೆ. ಮೊದಲೊಮ್ಮೆ ರಾಜಕೀಯದ ಸಹವಾಸವೇ ಬೇಡವೆಂದು ಕಲ್ಯಾಣವನ್ನು ತೊರೆದು ತುಸು ದೂರದ ಗುಡ್ಡವೊಂದರ ಮೇಲೆ ತಮ್ಮ ಕುಟುಂಬ ಪರಿವಾರದೊಡನೆ ಬಸವಣ್ಣನವರು ಬೀಡು ಬಿಟ್ಟಾಗ, ಜನರು ಅಲ್ಲಿಗೇ ಧಾವಿಸಿ, ಅದೇ ಮರಿ ಕಲ್ಯಾಣವಾಗಿ, ಬಂದ ಜನರನ್ನು ಸಂತೈಸುವುದು ಕಷ್ಟದ ಕೆಲಸವಾಗುತ್ತದೆ. ಹೀಗಿದ್ದಾಗ ಕಡೆಯ ನಿರ್ಗಮನದ ಸನ್ನಿವೇಶದಲ್ಲಿ ಅವರ ಆಪ್ತ ಅನುಯಾಯಿಗಳ ಸಮೂಹ ಬೆನ್ನುಹತ್ತದೆ ಇರುತ್ತಿತ್ತೆ? ಗಡಿಪಾರು ಹೊಂದಿದವರುಗಳ ಹಿಂದೆ ಜನರು ಹೋಗಲು ಅನುಮತಿ ಇರುತ್ತಿರಲಿಲ್ಲ ಎಂಬ ನಿಯಮದ ತಿಳುವಳಿಕೆ ಇಲ್ಲಿ ನಮಗೆ ಅಗತ್ಯ. ಹೊಕ್ರಾಣಿ (ಬಿ) ಬೀದರ ಜಿಲ್ಲೆ, ಹೊಕ್ರಾಣಿ, ಬಿಜಾಪುರ ಜಿಲ್ಲೆ–ಇವೇ ಬಸವಣ್ಣನವರು ಮರುದಿನದ ಬೆಳಗಿನ ಜಾವದೊಳಗೆ ದಾಟಬೇಕಾದ ಮತ್ತು ಎಂದೂ ದಾಟಿ ಪ್ರವೇಶಿಸಲಾರದ ಹದ್ದುಗಳಾಗಿದ್ದವು ಎಂಬುದು ಗಮನಾರ್ಹ.

ಸ್ವಭಾವತಃ ಹೇಡಿಗಳು, ಪಲಾಯನವಾದಿಗಳೂ ಆದವರ ಹೃದಯದಿಂದ ಎಂದೂ ಕ್ರಾಂತಿಯ ಆಲೋಚನೆಗಳು ಸ್ಫುರಿಸವು. ಹೇಡಿತನದ ಗುಣವುಳ್ಳವರು ದಿಟ್ಟ ನಿರ್ಧಾರ, ಹೋರಾಟ ಎಂದೂ ಕೈಗೊಳ್ಳರು. ಬಸವಣ್ಣನವರನ್ನು ಅವಹೇಳನ ಮಾಡಬೇಕು ಎನ್ನುವ ದುರುದ್ದೇಶ ಇದ್ದವರು ಮಾತ್ರ ಈ ರೀತಿ ಚಿತ್ರಿಸುವರು.

೨. ವಿಶ್ವಗುರು ಬಸವಣ್ಣನವರ ಧರ್ಮಪತ್ನಿ ಗಂಗಾಂಬಿಕೆ ಮತ್ತು ಸೋದರಿ ಅಕ್ಕನಾಗಲಾಂಬಿಕೆ ಬಸವಣ್ಣನವರ ಜೊತೆ ಕಪ್ಪಡಿ ಸಂಗಮಕ್ಕೆ ಹೋದರು ಎಂದು ಲೇಖಕರು ಬರೆದಿದ್ದಾರೆ. [ಸೋಮಮ್ಮ ಪುಟ 15]. ಇತಿಹಾಸದ ಸಾಮಾನ್ಯ ಜ್ಞಾನವೂ ಇಲ್ಲದ ಈ ಸಾಹಿತಿಗಳು ಬರೆಯುವ ಸಾಹಸಕ್ಕೆ ಕೈಹಾಕುವುದೇಕೊ ಎಂಬುದೇ ನಿಗೂಢ ಸಂಗತಿಯಾಗಿದೆ.

ಅಕ್ಕನಾಗಲಾಂಬಿಕೆ–ಗಂಗಾಂಬಿಕೆ–ನೀಲಾಂಬಿಕೆಯರು ಮೂವರೂ ಕಲ್ಯಾಣದಲ್ಲೇ ಉಳಿದರು. [ಇಲ್ಲಿ ನನ್ನ ಆಲೋಚನೆ ಪ್ರಸ್ತಾಪಿಸುವುದು ಅಗತ್ಯವಿದೆ. ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ ; ಆಕೆಯ ಹೆಸರು ನೀಲಗಂಗಾ, ಕೆಲವರು ಸಂಕ್ಷಿಪ್ತವಾಗಿ ನೀಲಮ್ಮ ಎಂದು ಮತ್ತೆ ಕೆಲವರು ಗಂಗಮ್ಮನೆಂದು ಕರೆದರು. ಇಬ್ಬರು ಪತ್ನಿಯರು ಇರಲಿಲ್ಲ, ನೀಲಗಂಗಮ್ಮ ಸೋದರಮಾವನ ಮಗಳು ಎಂಬ ದೃಢ ನಿರ್ಧಾರ ನಮ್ಮದಾಗಿದೆ.] ಅವರು ಹೀಗೆ ಉಳಿಯಲು ಒಂದು ಕಾರಣ ಗಡಿಪಾರು ಆದವರ ಹಿಂದೆ ಪರಿವಾರವು ಹೋಗಲು ಅನುಮತಿ ಇಲ್ಲದಾದ್ದರೆ, ಎರಡು–ಶರಣರ ಬದುಕಿನಲ್ಲಿ ವೈಯಕ್ತಿಕ ಸಂಬಂಧಕ್ಕಿಂತಲೂ ತತ್ತ್ವನಿಷ್ಠೆ ಮುಖ್ಯವಾಗಿತ್ತು. ವಚನ ಸಾಹಿತ್ಯವನ್ನು ರಕ್ಷಿಸುವುದು ಪರಮ ಪವಿತ್ರ ಕರ್ತವ್ಯವಾಗಿತ್ತು ಅವರೆಲ್ಲರಿಗೆ. ಅಕ್ಕನಾಗಲಾಂಬಿಕೆ ಸಾಹಿತ್ಯ ರಕ್ಷಣೆಯ ನೇತೃತ್ವ ವಹಿಸಿದಳು. ನೀಲಾಂಬಿಕೆ ಕಲ್ಯಾಣದಲ್ಲೇ ಇದ್ದು ನಂತರ ಕೂಡಲ ಸಂಗಮದತ್ತ ನಡೆದಳು. ಬಸವಣ್ಣನವರ ಜೊತೆಗೆ ಸಾಗಿದವರು ಕೇವಲ ಹಡಪದ ಅಪ್ಪಣ್ಣನವರು ಮಾತ್ರ.

ಲೇಖಕ ಶಿವಪ್ರಕಾಶರು ವಚನ ಸಾಹಿತ್ಯ, ಕಾಲಜ್ಞಾನ, ಜನಪದ ಸಾಹಿತ್ಯ, ಯಾವೊಂದು ಆಧಾರವೂ ಇಲ್ಲದೆ ಮನಸ್ಸಿಗೆ ಬಂದಂತೆ ಬರೆದಿದ್ದಾರೆ. ಹರಳಯ್ಯ–ಮಧುವರಸ–ಶೀಲವಂತರ ವಧೆಯ ನಂತರ ಜಾತಿವಾದಿಗಳಿಂದ ವಚನ ಸಾಹಿತ್ಯವನ್ನು ರಕ್ಷಿಸುವ ಕಾರ್ಯದ ನೇತೃತ್ವ ವಹಿಸಿದ ಅಕ್ಕನಾಗಲಾಂಬಿಕೆ ಮಾರ್ಗಮಧ್ಯದಲ್ಲಿ ಸಶಸ್ತ್ರಳಾಗಿ ಹೋರಾಡಿದ್ದಲ್ಲದೆ, ವೃದ್ಧಳಾಗಿದ್ದರೂ ಧರ್ಮ ಪ್ರಚಾರ ಮಾಡಿ, ತರೀಕೆರೆಯ ಬಳಿ ಲಿಂಗೈಕ್ಯಳಾದಳು. ಆಕೆಯ ಸಮಾಧಿ ತರೀಕೆರೆಯಲ್ಲಿದೆ. ಅಕ್ಕನಾಗಲಾಂಬಿಕೆ ಕಪ್ಪಡಿಗೆ ಹೋಗಲೇ ಇಲ್ಲ. ಮುರಡೀ ನಾಗಲಾಪುರ (ಬೈಲಹೊಂಗಲ), ಲಿಂಗನಮಠ ಮಾರ್ಗವಾಗಿ ಉಳಿವೆಯನ್ನು ಅವರು ಸೇರಿದರು. ಇಂದಿಗೂ ಈ ಸ್ಥಳಗಳಲ್ಲಿ ಅವರ ಕುರುಹುಗಳಿವೆ.

೩. ಚನ್ನಬಸವಣ್ಣನವರಂಥ ಮಹಾಜ್ಞಾನಿ, ದಿಟ್ಟ ಹೋರಾಟಗಾರನನ್ನು ಶಿವಪ್ರಕಾಶ್ ಒಬ್ಬ ಹೇಡಿಯಂತೆ ಚಿತ್ರಿಸಿದ್ದಾರೆ (ಪುಟ ; 14). ಚನ್ನಬಸವಣ್ಣ ಮಹಾ ಜ್ಞಾನಿಯಾದಂತೆ ಒಬ್ಬ ಹೋರಾಟಗಾರನಾಗಿ ರೂಪುಗೊಂಡರು. ಮಾಚಿದೇವರಷ್ಟು ತೀವ್ರವಾದಿಯಲ್ಲ, ಬಸವಣ್ಣನವರಷ್ಟು ಸೌಮ್ಯವಾದಿಯೂ ಅಲ್ಲ ; ಚನ್ನಬಸವಣ್ಣ ಶೂರ. ವಚನ ಸಾಹಿತ್ಯ ಮತ್ತು ಶರಣರನ್ನು ರಕ್ಷಿಸುವಲ್ಲಿ ಅವರ ಪಾತ್ರ ಹಿರಿದಾದುದು.

ಜಾತಿವಾದಿಗಳು ಕ್ರಾಂತಿಯ ಬೀಜ ಹೊತ್ತ ವಚನ ಸಾಹಿತ್ಯದ ಕಣಜವನ್ನು ಸುಟ್ಟು ನಾಶಮಾಡಲೆತ್ನಿಸಿದಾಗ ಅದನ್ನು ರಕ್ಷಿಸಲು ಪಣತೊಟ್ಟ ವೀರಸನ್ಯಾಸಿ ಚನ್ನಬಸವಣ್ಣ. ಅವರು ಸಹ್ಯಾದ್ರಿಯ ದುರ್ಗಮ ಅರಣ್ಯಕ್ಕೆ ಹೋದುದು ಲಿಂಗಾರ್ಚನೆ–ತಪಸ್ಸಿಗಾಗಿ ಅಲ್ಲ; ಚಾಲುಕ್ಯರ ನಾಡಿನ ಗಡಿಯಿಂದ ಹೊರಗೆ ಇದ್ದ ಸಹ್ಯಾದ್ರಿಯ ಗುಡ್ಡಗಳಲ್ಲಿ ಸಾಹಿತ್ಯವನ್ನು ಸಂರಕ್ಷಿಸಲು. ಯಾವ ಒಂದು ತ್ಯಾಗ ಹೋರಾಟದಿಂದ ಅಕ್ಕನಾಗಲಾಂಬಿಕೆ–ಚನ್ನಬಸವಣ್ಣನವರು ಇಂದು ಸ್ಮರಣಾರ್ಹರಾಗಿದ್ದಾರೋ ಅದಕ್ಕೆ ತದ್ವಿರುದ್ಧವಾಗಿ ಹೆಚ್. ಎಸ್. ಶಿವಪ್ರಕಾಶ ಚಿತ್ರಿಸಿ ಇಡೀ ಶರಣರ ಸಾಧನೆಗೇ ಕಲಂಕ ತರುವ ಅಪರಾಧ ಮಾಡಿದ್ದಾರೆ.

೪. ಹೆಚ್. ಎಸ್. ಶಿವಪ್ರಕಾಶರ ಅಕ್ಷಮ್ಯ ಅಪರಾಧದಲ್ಲಿ ಮೊದಲು ಸರತಿ ಹಚ್ಚುವುದು ಮಾಚಿದೇವರ ಚಿತ್ರಣ. ಅತ್ಯಂತ ಆಳವಾದ ದೂರಾಲೋಚನೆ ಮತ್ತು ಧೂರ್ತಾಲೋಚನೆಯ ತಂತ್ರವನ್ನು ಲೇಖಕರು ಮಾಚಿದೇವರ ವಿಷಯದಲ್ಲಿ ಬಳಸಿದ್ದಾರೆ. ಬಸವಣ್ಣ–ಚನ್ನಬಸವಣ್ಣ–ಮಾಚಿದೇವರ ಸಂಬಂಧ ಅದೆಷ್ಟು ಆತ್ಮೀಯವಾದದ್ದೆಂದರೆ ಬಿಚ್ಚಿ ಬೇರೆ ಮಾಡದ್ದಾಗಿದೆ, ಚರಿತ್ರೆಯೂ ತಿಳಿದಿಲ್ಲ ; ಜನಪದ ಸಾಹಿತ್ಯದ ಆಧಾರವೂ ಇಲ್ಲದೆ ಲೇಖಕರು ತಮ್ಮ ಧೂರ್ತ ಕಲ್ಪನಾ ಲಹರಿಯನ್ನು ಹರಿಯಬಿಟ್ಟಿದ್ದಾರೆ. "ಅವರು ನಮ್ಮನ್ನು ನಡುನೀರಿನ ತನಕ ಬಿಟ್ಟು ಹೋಗಿದ್ದಾರೆ" ಎಂಬ ಅಪವಾದವನ್ನು ಮಾಚಿದೇವರ ಬಾಯಿಯಲ್ಲಿ ಹೊರಿಸಿದ್ದಾರೆ. "ನಾವು ಬಸವಣ್ಣನವರ ಬಿಟ್ಟಿ ಆಳುಗಳಲ್ಲ" ಎಂಬ ಕೀಳು ತರಹದ ಮಾತನ್ನಾಡಿಸಿದ್ದಾರೆ. ವಿಶ್ವಗುರು ಬಸವಣ್ಣನವರನ್ನು ತಮ್ಮ ಪ್ರಾಣವನ್ನಾಗಿ ಭಾವಿಸಿ, 'ಬಸವಣ್ಣನ ನೆನೆವುದೇ ಲಿಂಗಾರ್ಚನೆ' ಎಂದ ಮಾಚಿದೇವರು ನೂರಾರು ವಚನಗಳಲ್ಲಿ ಬಸವಣ್ಣನವರನ್ನು ಕೊಂಡಾಡಿದ್ದಾರೆ ಎಂಬುದನ್ನು ಈ ಲೇಖಕರು ತಿಳಿದಂತೆ ಕಾಣದು.

ಮಾಚಿದೇವರ ಹಿರಿಮೆ

ಆ ಮಹಾಪುರುಷರು ಷಟ್‌ಪ್ರಮಥರಲ್ಲಿ ಒಬ್ಬರಾಗಿ, ಲಿಂಗವಂತ ಸಮಾಜದಲ್ಲಿ ಪ್ರಾತಃಸ್ಮರಣೀಯರಾಗಿದ್ದಾರೆ, ರಾಜನು ನೀಡಿದ ಗಡಿಪಾರನ್ನು ನಿರಾಕರಿಸಿ, ವಿರೋ–

ಧಿಸಿ, ಹೋರಾಡೋಣ ಎಂಬ ನಿಲುವು ಮಾಚಿದೇವರದ್ದು. "ಇದರಿಂದ ರಕ್ತಪಾತವಾಗುವುದು. ರಕ್ತಪಾತದಿಂದ ಏನೂ ಸಾಧಿಸಲಾಗದು ; ಹೃದಯಪರಿವರ್ತನೆಯ ದಾರಿ ಹಿಡಿಯೋಣ" ಎಂಬ ವಿಚಾರಧಾರೆ ಬಸವಣ್ಣನವರದು. ಮಾಚಿದೇವರು ಕಡೆಗೆ ಗುರುವಿನ ಆದೇಶ ಒಪ್ಪಿಕೊಂಡರು ಮತ್ತು ಮುಗ್ಧ ಶರಣರ ಸಂರಕ್ಷಣೆ-ವಚನ ಸಾಹಿತ್ಯದ ರಕ್ಷಣೆಯ ಕಾರ್ಯವನ್ನು ಮಾಚಿದೇವರಿಗೇ ಬಸವಣ್ಣನವರು ಒಪ್ಪಿಸಿದರು.

ಬೆನ್ನು ಹತ್ತಿದ ವೈರಿ ತಣ್ಣಗಾಯಿತು ಚೆದುರಿ
ಮಣ್ಣುಗೂಡಿಸಿದ ಮಾಚಯ್ಯ । ಕೈಯೆತ್ತಿ
ಚಿನ್ನವುಳಿಸಿದನು ಲಿಂಗಿಗಳ ॥

ಮಾಚಿದೇವರು ಸಾಹಿತ್ಯದ ಭಂಡಾರವನ್ನು ತೆಗೆದುಕೊಂಡು ಶರಣರನ್ನು ಕರೆದುಕೊಂಡು ಹೋಗುವಲ್ಲಿ ಮಾರ್ಗಮಧ್ಯದಲ್ಲಿ ಕಾದರವಳ್ಳಿ ಬಳಿ ಬಿಜ್ಜಳನ ಸೈನ್ಯದೊಡನೆ ಕಾದಾಡಬೇಕಾಯಿತು. ಮುರಗೋಡ(ಬೆಳಗಾಂ ಜಿಲ್ಲೆ)ದ ಬಳಿ ಮತ್ತೊಂದು ಹೋರಾಟ ಎದುರಿಸಬೇಕಾಯಿತು. ಇಲ್ಲಿ ಶರಣರಿಗೆ ಜಯ ಪ್ರಾಪ್ತವಾಯಿತು. ಬಿಜ್ಜಳನ ಸೈನ್ಯ ಹಿಂತಿರುಗಿತು. ಆದರೆ ಕಾಳಗದಲ್ಲಿ ಪೆಟ್ಟುಬಿದ್ದ ಚನ್ನಬಸವಣ್ಣನವರು ಚೇತರಿಸಿಕೊಳ್ಳಲಾರದೆ ಉಳಿವೆಯಲ್ಲಿ ಲಿಂಗೈಕ್ಯರಾದರು. ಮಾಚಿದೇವರು ಗೊಡಚಿ ಎಂಬಲ್ಲಿ ಲಿಂಗೈಕ್ಯರಾದರು. ಇಂದಿಗೂ ಅವರ ಸಮಾಧಿ ಬೆಳಗಾಂವ ಜಿಲ್ಲೆಯ ಗೊಡಚಿಯಲ್ಲಿದೆ.

ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟಿ ಜೈನರನು । ಮುರುಗೋಡ
ಹಾದಿಯೊಳು ಮುರಿದ ಮಾಚಯ್ಯ ।

ಎಂಬುದು ಮಾಚಿದೇವರ ಹೋರಾಟಕ್ಕೆ ಸಾಕ್ಷಿಯಾಗಿದೆ. ಚನ್ನಬಸವಣ್ಣ ತರುಣ ವಯಸ್ಕರಿದ್ದುದರಿಂದ ಮಡಿವಾಳ ಮಾಚಿದೇವರೇ ಬಹುದೊಡ್ಡ ಜವಾಬ್ದಾರಿ ಹೊತ್ತರಷ್ಟೆ ಅಲ್ಲ ವಚನ ಸಾಹಿತ್ಯವನ್ನು ಉಳಿಸಿದ ಪುಣ್ಯಚೇತನರಾಗಿದ್ದಾರೆ. "ಬಸವಣ್ಣನವರ ಬಿಟ್ಟ ಆಳುಗಳಲ್ಲ" ಎಂದು ಕೀಳು ಮಾತು ಮಾಚಿದೇವರಂಥ ಪ್ರೌಢರ ಬಾಯಿಯಲ್ಲಿ ಬರಲು ಸಾಧ್ಯವೆ ?

೫. ಲೇಖಕರು ಅಧ್ಯಯನದ ಕೊರತೆಯಿಂದ ಬಳಲಿ, ಕೆಲವು ಕಡೆ ಪೇಲವವಾದ ಚಿತ್ರಣ ಕೊಟ್ಟಿದ್ದರೆ, ಮತ್ತೆ ಕೆಲವು ಕಡೆ ವಿಕೃತ ಚಿತ್ರಣ ಕೊಟ್ಟಿದ್ದಾರೆ. ಹಡಪದ ಅಪ್ಪಣ್ಣನವರು ಬಸವಣ್ಣನವರ ಅತ್ಯಂತ ಆತ್ಮೀಯ ಶಿಷ್ಯರು, ಮೃದು ಸ್ವಭಾವಿಗಳು. ಗಡಿಪಾರಾಗ ಬಸವಣ್ಣನವರು ಹೊರಟಾಗ ಜೊತೆಗೆ ಹೊರಟವರು ಅಪ್ಪಣ್ಣನವರು. ಗಡಿಪಾರಿನ ದಂಡ ಹೊಂದಿದವರೊಡನೆ ಸಮುದಾಯವು ಹೊರಡಲು ರಾಜಸೈನ್ಯ ಎಂದೂ ಅವಕಾಶ ನೀಡದು ತಾನೆ ? ಅಪ್ಪಣ್ಣನವರು ಶಾಂತ ಪ್ರವೃತ್ತಿಯವರಿದ್ದುದರಿಂದಲೇನೋ ಅವರು ಜೊತೆಗೆ ಬರಲು ಅವಕಾಶ ದೊರೆಯಿತು. ಕಲ್ಯಾಣದಿಂದ ನೀಲಾಂಬಿಕಾ ತಾಯಿಯನ್ನು ಕರೆತರಲು ಅಪ್ಪಣ್ಣನವರು ಪುನಃ ಕಪ್ಪಡಿಯತ್ತ ಬಂದರು. ನೀಲಾಂಬಿಕೆಯೊಡನೆ ಬಂದು ಕೃಷ್ಣಾ ನದಿಯ ಉತ್ತರಕ್ಕೆ ಬೀಡು ಬಿಟ್ಟು, ಆ ತಾಯಿಯು ಅಲ್ಲೇ ಐಕ್ಯಳಾದಳು. ನಂತರ ಅಪ್ಪಣ್ಣನವರೂ ಐಕ್ಯರಾದರು. ಅವರ ಸಮಾಧಿಗಳು ತಂಗಡಗಿಗೆ ಸನಿಹದ ಧನ್ನೂರು ಎಂಬಲ್ಲಿ ಇರುವುದನ್ನು ಇಂದಿಗೂ ಕಾಣಬಹುದು. ವಚನ ಸಾಹಿತ್ಯ–ಕಾಲಜ್ಞಾನ–ಜನಪದಸಾಹಿತ್ಯ–ಪ್ರಚಲಿತವಿರುವ ದಂತಕಥೆ ಒಂದನ್ನೂ ಸರಿಯಾಗಿ ತಿಳಿಯದ ಲೇಖಕರು ಹಡಪದ ಅಪ್ಪಣ್ಣನವರ ಬಗ್ಗೆಯೂ ಸರಿಯಾದ ಚಿತ್ರಣ ನೀಡಿಲ್ಲ.

ಹಡಪದ ಅಪ್ಪಣ್ಣನವರು ಬಸವಣ್ಣನವರ ಜೊತೆಗೆ ಕಪ್ಪಡಿಗೆ ಹೋಗಿ, ಜೊತೆಗೆ ಇದ್ದು, ನಂತರ ನೀಲಾಂಬಿಕೆಯನ್ನು ಕರೆತರಲು ಹೋಗಿ, ತಂಗಡಗಿ ಬಳಿ ಬೀಡು ಬಿಟ್ಟು ಅಲ್ಲೇ ಐಕ್ಯವಾಗಿರುವುದಕ್ಕೆ ನಿಸ್ಸಂದೇಹಪೂರ್ವಕ ಆಧಾರಗಳು ಇರುವುದು ಗಮನಾರ್ಹವಿದ್ದರೂ ಅಪ್ಪಣ್ಣನವರನ್ನು ಲೇಖಕರು ಕಲ್ಯಾಣದಲ್ಲೇ ಉಳಿಸಿದ್ದಾರೆ.

೬. ಜಂಗಮರು

ಜಂಗಮರನ್ನು ತಿಂಡಿಪೋತರು, ಜಾತಿವಾದಿಗಳು, ಸ್ವಾರ್ಥಿಗಳು ಎಂಬಂತೆ ಚಿತ್ರಿಸಲಾಗಿದೆ. ನೂರೊಂದು ವಿರಕ್ತರ ನಂತರ ಮತ್ತು ಇತ್ತೀಚಿಗೆ ಜಂಗಮದ ಕಲ್ಪನೆಯು ಜಾತಿವಾಚಕವಾಗಿ ವಿಕೃತಗೊಂಡಿದೆಯೇ ವಿನಾ ಬಸವಣ್ಣನವರ ಕಾಲದಲ್ಲಿ ಹಾಗಿರಲಿಲ್ಲ. ಅತ್ಯಂತ ಕ್ರಾಂತಿಕಾರಿ ಪರಿಕಲ್ಪನೆಯ 'ಜಂಗಮ' ತತ್ತ್ವವೇ ಸಮಾಜ ಪರಿವರ್ತನೆಯ ಮಾಧ್ಯಮವಾಯಿತು. ತ್ಯಾಗಿಗಳಾದ ಜಂಗಮರೇ ಜನತೆಯಲ್ಲಿ ಕ್ರಾಂತಿಯ ಬೀಜ ಬಿತ್ತಿದರು ; ಸಮಾನತೆಯ ಚಳುವಳಿಯ ಕಾರ್ಯಕರ್ತರಾದರು. ದಲಿತರ ಕೇರಿಗಳಿಗೆ ಹೋಗಿ ಅಕ್ಷರ ಜ್ಞಾನ ನೀಡಿದವರೇ ಜಂಗಮರು ; ಎಲ್ಲೆಡೆಯಲ್ಲಿ ಬಸವ ಸಂದೇಶವನ್ನು ಕೊಂಡೊಯ್ದವರೇ ಜಂಗಮರು. ಸ್ವಯಂ ಸೇವಕರಾಗಿ ದುಡಿದ ಆ ತ್ಯಾಗಜೀವಿಗಳು ಜನ ಸಮುದಾಯಕ್ಕೆ ಜ್ಞಾನ ನೀಡಿದರು. ಸಹಸ್ರಾರು ಜಂಗಮರ ಮಧ್ಯೆ ಕೆಲವರು ದೋಷಪೂರಿತರಿರಬಹುದು. ಆದರೆ ಅಂದು ಕೆಲಸ ಮಾಡಿದ ತ್ಯಾಗಿಗಳ ದಂಡು ಕೇವಲ 36 ವರ್ಷಗಳ ಅವಧಿಯಲ್ಲಿ ಎಲ್ಲೆಡೆಯಲ್ಲಿ ಸಂಚರಿಸಿ ಬಸವ ಸಂದೇಶ ವಾಹಕರಾಗಿ ಕೆಲಸ ಮಾಡಿದ್ದನ್ನು ಮರೆಯಲಾಗದು.

೭. ಸೈನ್ಯದ ದೌರ್ಜನ್ಯ

ಶಿವಪ್ರಕಾಶರು ಪ್ರಸಂಗದ ಅವಕಾಶದ ಪೂರ್ಣ ಉಪಯೋಗ ತೆಗೆದುಕೊಳ್ಳಲು ಸವರ್ಣೀಯರ ಬಗ್ಗೆ ಅತಿರೇಕದ ಚಿತ್ರಣ ನೀಡಿದ್ದಾರೆ. ಇದು, ಇಂದು ಪರಸ್ಪರ

ರನ್ನು ಎತ್ತಿಕಟ್ಟಲು ಮಾಡಿದ ತಂತ್ರ ಎನಿಸುತ್ತಿದೆ. "ನಮ್ಮ ಹೆಣ್ಣು ಮಕ್ಕಳ ಮಾನ ಭಂಗ ಮಾಡಲಾಗಿದೆ" ಎಂಬ ಮಾತುಗಳನ್ನು ಹಲವಾರು ಪಾತ್ರಗಳ ಬಾಯಿಯಲ್ಲಿ ಹೇಳಿಸಲಾಗಿದೆ. [ಸಿದ್ಧಣ್ಣ : ಪುಟ 43, 46].

ವರ್ಣವ್ಯವಸ್ಥೆ ಈ ದೇಶದಲ್ಲಿ ಇದ್ದುದು, ಇರುವುದು ಸತ್ಯ ; ಅದು ಹುಟ್ಟು ಹಾಕಿದ ಅನಿಷ್ಟಪರಂಪರೆಯೂ ಬಹಳ. ಆದರೆ ಸೈನಿಕರು ಪರಜಾತಿಯ ಮಹಿಳೆಯರ ಮೇಲೆ ಮಾನಭಂಗ ಮಾಡುವ ಪ್ರವೃತ್ತಿ ಭಾರತೀಯರಲ್ಲಿ ಎಂದೂ ಇಲ್ಲ. ಆ ವಿಷಯ ದ ಹಿಂದೂ ಪರಂಪರೆ ತ ನ ಘನತೆಯನ್ನು ಕಾಯ್ದುಗೊಂಡಿದೆ. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಿ ಸೇಡುತೀರಿಸಿಕೊಳ್ಳಬೇಕೆಂಬ ಮನೋಭಾವ ಹಿಂದೂಯೇತರ ಸಂಸ್ಕೃತಿಗಳಿಂದ ಬಂದುದು. ಮಾನವ ದೌರ್ಬಲ್ಯದಿಂದ ಉಚ್ಚ ಜಾತಿಯವರು ಕೀಳು ಜಾತಿಯ ಮಹಿಳೆಯರ ಸಂಗಮಾಡಿರಬಹುದು, ಕೂಡಿಕೆ ಮಾಡಿಕೊಂಡಿರಬಹುದು. ಆದರೆ ಬಲಾತ್ಕಾರದ ಮಾನಭಂಗಗಳು ಈ ಭಾರತೀಯ ಸಂಸ್ಕೃತಿಯಲ್ಲಿ, ಅದೂ ಆಗಿನ ಕಾಲದಲ್ಲಿ ಎಂದೂ ಇರಲಿಲ್ಲ. ಶರಣರನ್ನು ಅಮಾನುಷವಾಗಿ ಕೊಂದಿರುವುದು ಹಿಂಸಿಸಿರುವುದು ಸತ್ಯವಾದರೂ, ಮುಗ್ಧ ಮಹಿಳೆಯರ ಮಾನಭಂಗ ಮಾಡಿದರೆಂಬ ಚಿತ್ರಣ ಧೂರ್ತತನದಿಂದ ಕೂಡಿದೆ.

೮. ಬಸವಣ್ಣನವರ ಲಿಂಗೈಕ್ಯ

ಅಧ್ಯಾತ್ಮ-ಯೋಗ-ಸಾಧನೆ ಈ ಯಾವುದರ ಗಂಧವೇ ಇಲ್ಲದ ಶಿವಪ್ರಕಾಶರು ಬಸವಣ್ಣನವರ ಲಿಂಗೈಕ್ಯದ ಘಟನೆಯನ್ನು ಯಾರದೋ ಬಾಯಿಯಲ್ಲಿ (ಪುಟ 49–50) ಹೇಳಿಸುವ ಮೂಲಕ 'ಕಪಿಚೇಷ್ಟೆ' ಯಂತಹ ಕುಣಿತ ಮಾಡಿಸಿರುವುದೇ ಅಲ್ಲದೆ ಜನರ ಮನಸ್ಸಿನಲ್ಲಿ ಸಂದೇಹವು ಹುಟ್ಟುವಂತೆ ಮಾಡಿದ್ದಾರೆ.

ಪುಟ 56, "ಬಸವರಸರು ಇನ್ನೂ ಧ್ಯಾನಮುದ್ರೆಯಲಿ
ಆ ರಾತ್ರಿ........
ಮಾರನೆಯ ದಿನ ಬೆಳಿಗ್ಗೆ ಬಸವಣ್ಣನವರ ಕಾಯ ಇರಲಿಲ್ಲ,
ಸಂಜೆ ಹೊತ್ತಿಗೆ ಬೆಸ್ತರು ಬಲೆ ಬೀಸಿದಾಗ ಸಿಕ್ಕಿತು.
ನೀರು ಕುಡಿದು ಬಿಟ್ಟಿತ್ತು. ಗುರುತೇ ಸಿಕ್ತಾ ಇರ್ಲಿಲ್ಲ"

ಈ ರೀತಿ ಬರೆದಿದ್ದಾರೆ? ತಾವೇ ಬಿದ್ದರೋ, ಯಾರಾದರೂ ದೂಡಿದರೋ ಎಂದೇನೂ ಇಲ್ಲ. ಆದರೆ ನದಿಯಲ್ಲಿ ಬಿದ್ದರು ಎಂಬ ಸಂದೇಹ ಹುಟ್ಟುವಂತೆ ಘಾತಕತನ ಮಾಡಿದ್ದಾರೆ. ಇದಕ್ಕೆ ಆಧಾರ ಎಲ್ಲಿದೆ? ವಚನ ಸಾಹಿತ್ಯದಲ್ಲೇ, ಕಾವ್ಯದಲ್ಲೇ?

ಅಹಿಂಸಾವಾದಿಗಳಾದ ಬಸವಣ್ಣನವರ ತತ್ತ್ವಗಳನ್ನು ಅನುಸರಿಸುತ್ತಿರುವ ಬಸವ ಧರ್ಮೀಯರು ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮುಂತಾಗಿ ಆಲೋಚಿಸುತ್ತಿರುವುದರಿಂದಲೇ ಇಂಥ ಲೇಖಕರು ತಮ್ಮ ಕುಚೋದ್ಯತನವನ್ನು ಬರಹಗಳಲ್ಲಿ ಬರೆಯಲು ಸಾಧ್ಯವಾಗಿದೆ.

ಒಂದು ವೇಳೆ ತಮಗೆ ಬಸವಾದಿ ಪ್ರಮಥರ ಬಗ್ಗೆ ಗೌರವ, ಅವರ ತತ್ತ್ವಗಳಲ್ಲಿ ವಿಶ್ವಾಸ ಇಲ್ಲವಾದರೆ ಅಂಥವರ ಬಗ್ಗೆ ಬರೆಯಲು ಹೋಗಬಾರದು. ತಮ್ಮ ಸಾಹಿತ್ಯ ಕಲೆಯ ಅಭಿವ್ಯಕ್ತಿಗೆ ಬೇರೆ ಕಾಲ್ಪನಿಕ ಸೃಷ್ಟಿಗಳನ್ನು ಮಾಡಿಕೊಳ್ಳಲಿ. ಶರಣರ ಚಿಂತನೆ, ತತ್ತ್ವಜ್ಞಾನಗಳಿಗೆ, ಬದುಕು–ಬರಹಗಳಿಗೆ ಪ್ರಾಮಾಣಿಕ ಅಭಿವ್ಯಕ್ತಿ ಕೊಡುವುದಾದರೆ ಮಾತ್ರ ಬರೆಯಲು ಪ್ರಯತ್ನಿಸಬೇಕು.

ಯೋಗಿಯೂ, ಇಚ್ಛಾಮರಣಿಯೂ ಆದ ಬಸವಣ್ಣನವರು ಇಚ್ಛಾಮರಣತ್ವದ ವಿಧಾನದಿಂದ ಲಿಂಗೈಕ್ಯರಾದ ಬಗ್ಗೆ ಅವರ ವಚನಗಳೇ ಜ್ವಲಂತವಾದ ಸಾಕ್ಷಿಗಳಾಗಿರುವಾಗ ಇಂಥ ಕೀಳು ಬರಹದ ಸೃಷ್ಟಿ ಸಾಧುವೆ?

೯. ಶರಣೆಯರ ಕುರಿತು

ಅತ್ಯಂತ ಭಯಂಕರ ಪದಗಳಲ್ಲಿ ಅಕ್ಕನಾಗಲಾಂಬಿಕೆಯನ್ನು, ಅಕ್ಕಮಹಾದೇವಿಯನ್ನು ಲೇಖಕರು ಚಿತ್ರಿಸಿದ್ದಾರೆ. ವಿರೋಧಿಗಳು ಆಡಿದ ಮಾತು ಎಂದು ಪಾರಾಗುವ ಧೂರ್ತ ತಂತ್ರವೂ ಲೇಖಕರಲ್ಲಿದೆ. ಕೆಲವು ಮಾದರಿ ನೋಡಿರಿ,

ಆದಿನಾಥಯ್ಯ : * ಅವನ ನೀತಿಗೆಟ್ಟ ಅಕ್ಕ [ಪುಟ 19]
ಆದಿನಾಥಯ್ಯ : * ಒಬ್ಬ ಬತ್ತಲೆ ಹೆಂಗಸು ಕಲ್ಯಾಣದ ಬೀದಿ ಬೀದೀಲಿ ಶಿವನೇ ಗಂಡ, ಶಿವನೇ ಗಂಡ ಅಂತ ಅಡ್ಡಾಡಿದಳು.
ಮುಕುಂದಭಟ್ಟ : ಏನೇ ಹೇಳಿ, ಕೈ ತೊಳೆದು ಮುಟ್ಟಬೇಕು. ಹಾಗಿದ್ದಳು.
ಆದಿನಾಥಯ್ಯ : ಕಲ್ಯಾಣದ ಮರ್ಯಾದಸ್ಥ ಹೆಣ್ಣು ಮಕ್ಕಳು ಸೆರಗಲಿ ಮುಖ ಮುಚ್ಚಿಕೊಳ್ಳೋ ಹಾಗಾಯಿತು. [ಪುಟ 20–21]

ಮುಕುಂದಭಟ್ಟ ಅದೆಷ್ಟೇ ಕಾಮುಕನು, ಸ್ತ್ರೀಲೋಲುಪನು ಇರಲಿ. ಆದರೆ ಕಂಡ ಕಂಡ ಹೆಣ್ಣು ಮಕ್ಕಳು ಅದೂ ವೈರಾಗ್ಯದ ಅಗ್ನಿಕುಂಡವಾದ ಅಕ್ಕಮಹಾದೇವಿಯಂಥವಳ ಹೆಸರು ಹೇಳಿ ಹೀಗೆ ಜೊಲ್ಲು ಸುರಿಸುವುದುಂಟೆ? ಸಭ್ಯತೆಯ ಎಲ್ಲೆ ಮೀರಿ ಲೇಖಕರು ಚಿತ್ರಿಸಿದ್ದಾರೆ.

ವೀರಮಾತೆ ಅಕ್ಕನಾಗಲಾಂಬಿಕೆ ಮತ್ತು ವೀರ ವಿರಾಗಿಣಿ ಅಕ್ಕಮಹಾದೇವಿಯವರ ವ್ಯಕ್ತಿತ್ವ ಏನೆಂದು ಅರಿಯದ ವಿದ್ಯಾರ್ಥಿಗಳು–ಸಾಮಾನ್ಯ ಜನರು ಈ ಮಹಿಮಾನ್ವಿತೆಯರ ಬಗ್ಗೆ ಏನು ಕಲ್ಪನೆ ಮೂಡಿಸಿಕೊಳ್ಳಬಹುದು? ಮತ್ತು ಕಥಾವಸ್ತುವಿಗೆ ಈ ಪಾತ್ರಗಳು ಏನೂ ಅಗತ್ಯವಿಲ್ಲ. ಲೇಖಕರು ತಮ್ಮ ಅಂತರಂಗದ ದ್ವೇಷ–ಮತ್ಸರಗಳನ್ನು ವಿರೋಧಿ ಪಾತ್ರಗಳ ಮೂಲಕ ಕಾರಿದ್ದಾರೆ ಅಷ್ಟೆ. ಶರಣ ಧರ್ಮದ ಪೂಜಾರ್ಹ ಚೇತನಗಳಾಗಿರುವ ಅಕ್ಕನಾಗಲಾಂಬಿಕೆ, ಅಕ್ಕಮಹಾದೇವಿಯ ಬಗ್ಗೆ ವಿಧಾಯಕವಾಗಿ, ಅಭಿಮಾನಿಗಳ ಮಾತಿನಲ್ಲೇ ಹೇಳಿಸಬಹುದಾಗಿತ್ತು. ಈ ಲೇಖಕರಿಗೆ ಬೇಕಾದುದು ಪ್ರಸ್ತುತ ಜ್ಞಾನಿಗಳ ಪರಿಚಯ ಮಾಡಿಸುವುದಲ್ಲ, ಅವರ ಬಗ್ಗೆ ಕುತ್ಸಿತ ಭಾವನೆ ಹುಟ್ಟಿಸುವುದು,

೧೦. ಭಂಡಾರ ದುರುಪಯೋಗದ ಆರೋಪ

ವಿರೋಧಿಗಳ ಬಾಯಲ್ಲಿ ಲೇಖಕರು ಅನ್ನಿಸುತ್ತಾರೆ, ಪುಟ 8. "ಬಸವಣ್ಣನವರು ಬೊಕ್ಕಸದ ಹಣ ದೋಚಿದಾರೆಂತ ಗಣಕರು, ಸುಂಕಿಗರು ಸಾಧಿಸಿ ತೋರಿಸಿದರಂತೆ." ಬಸವಣ್ಣನವರು ಸಮರ್ಥಿಸಿಕೊಳ್ಳಲಿಲ್ಲವೇ ಎಂದು ಇನ್ನೊಬ್ಬನ ಕೈಲಿ ಕೇಳಿಸಿದ್ದಾರೆ. "ಅದೇ ಆಶ್ಚರ್ಯ, ಸಮರ್ಥಿಸಿಕೊಳ್ಳಲೇ ಇಲ್ಲ" ಎಂದು ಪುನಃ ಹೇಳಿಸಿದ್ದಾರೆ. ಇಂಥ ಕಲ್ಪನೆಗೆ ಆಧಾರವೇನು ? ಹರಿಹರನ ಕಾವ್ಯದಲ್ಲಿ, ಆರೋಪ ಬಂದುದನ್ನು ಸೂಕ್ತವಾಗಿ ಬಸವಣ್ಣನವರು ವಿವರಿಸುವ ರೀತಿ, ಬಿಜ್ಜಳನು ಕ್ಷಮೆ ಕೇಳುವುದು ವಿವರಿಸಲ್ಪಟ್ಟಿದೆ. ಕಾವ್ಯ–ಪುರಾಣಗಳು ಏನೇ ಇರಲಿ, ಇದಕ್ಕೆ ವಚನಗಳೇ ಜೀವಂತ ಸಾಕ್ಷಿ:

ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು
ಓರೆಯಾವಿನ ಬೆನ್ನಲ್ಲಿ ಹರಿಯಲೇಕಯ್ಯಾ ?
ಲಜ್ಜೆಗೆಡಲೇಕೆ ? ನಾಣುಗೆಡಲೇಕಯ್ಯ
ಕೂಡಲ ಸಂಗಮ ದೇವರುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ ? (ಬ.ಷ.ವ ೭೫೪)

ರಾಜಕೀಯದಲ್ಲಿ ವಿರೋಧಿಗಳು ದಿನಕ್ಕೊಂದು ಆರೋಪ ಕೊಡುವುದು ಸಹಜ, ಸ್ವಾಭಾವಿಕ. ಆದರೆ ಆ ಆರೋಪವನ್ನು ನಿವಾರಿಸಿಕೊಂಡು ಬಸವಣ್ಣನವರು ನಿಷ್ಕಲಂಕರಾಗಿ ಎದ್ದು ಬಂದರು,

"ಹೊನ್ನಿನೊಳಗೊಂದೊರೆಯು, ವಸ್ತ್ರದೊಳಗೊಂದೆಳೆಯು, ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪುರಾತನರಾಣೆ." ಎಂಬ ಮನೋಭಾವದ, ಪರಧನ–ಪರಸ್ತ್ರೀಯನೊಲ್ಲದ ಛಲವಂತರು ಬಸವಣ್ಣನವರು, ಹರಿವ ಹಾವಿಗೆ ಅಂಜದ, ಉರಿಯ ನಾಲಿಗೆಗಂಜದ ಪರಧನ–ಪರಸ್ತ್ರೀಗೆ ಅಂಜುವ ನೀತಿವಂತರು. ಮಹಾಚೈತ್ರದ ಲೇಖಕರಿಗೆ ಪೂರ್ವಾಗ್ರಹ ಪೀಡಿತ ದ್ವೇಷವಿರದ ಸದುದ್ದೇಶವು ಇದ್ದಿದ್ದರೆ, "ವಿರೋಧಿಗಳು ಮಾಡಿದ ಭಂಡಾರ ದುರುಪಯೋಗದ ಆರೋಪವು ಸುಳ್ಳೆಂದು ಸಾಬೀತು ಮಾಡಿ ತೋರಿಸಿದರು" ಎಂದು ಪಾತ್ರಗಳ ಮೂಲಕ ಹೇಳಿಸುತ್ತಿದ್ದರು.

೧೧. ನೀಲಾಂಬಿಕೆಯ ಪಾತ್ರ

ನೀಲಾಂಬಿಕೆಯನ್ನು ಕಲ್ಯಾಣದಿಂದ ಹೊರಗೇ ಹೊರಡಿಸದ ಲೇಖಕರು ವಿಶ್ವಗುರು ಬಸವಣ್ಣನವರ ಲಿಂಗೈಕ್ಯದ (ಲೇಖಕರ ದೃಷ್ಟಿಯಲ್ಲಿ ಸಾವು) ವಾರ್ತೆಯನ್ನು ಶರಣರ ಮೂಲಕ ಕಲ್ಯಾಣಕ್ಕೆ ತಲುಪಿಸುವರು. ಅಲ್ಲಿ ಕಲಕೇತಯ್ಯ, ಬಹುರೂಪಿ ಚೌಡಯ್ಯ ಮುಂತಾದವರು ಕುಣಿತದ ಮೂಲಕ ಅಂತಹ ಗಂಭೀರ ಪ್ರಸಂಗವನ್ನು

ಹೇಳುವ ಬಗೆಯಂತೂ ಹಾಸ್ಯಾಸ್ಪದವಾಗಿದೆ. ನೀಲಾಂಬಿಕೆಯ ಬಾಯಿಯಲ್ಲಿ ಅತ್ಯಂತ ಅಸಹ್ಯವಾದ ಮಾತುಗಳನ್ನು ಆಡಿಸಿರುವ ಲೇಖಕರ ಅಂತರಂಗದಲ್ಲಿ ಬಸವಣ್ಣನವರ ಬಗ್ಗೆ ಹಾಲಾಹಲವೇ ತುಂಬಿದೆ ಎಂಬುದು ಸ್ಪಷ್ಟವಾಗುವುದು. "ಚಿಂತೆ ಬೇಡ. ನೀವಿಲ್ಲದೆ ಯಾರು ಚಕ್ರವರ್ತಿಗಳಾಗಿದ್ದರೂ ಬಸವರಸರ ಕಥೆ ನೀರಿನಲ್ಲಿಯೇ ಮುಗಿಯುತ್ತಿತ್ತು." ಎಂದು ನೀಲಾಂಬಿಕೆಯ ಕೈಲಿ ಬಿಜ್ಜಳನಿಗೆ ಹೇಳಿಸಿದ್ದಾರೆ. ನೀಲಾಂಬಿಕಾ ತಾಯಿಯ ವಚನಗಳಲ್ಲಿ ತನ್ನ ಪತಿ ಮಾತ್ರವಲ್ಲದೆ ಗುರುವು ಸಹ ಆಗಿದ್ದ ಬಸವಣ್ಣನವರ ಕುರಿತು ಅಪಾರವಾದ ಭಕ್ತಿ–ಗೌರವ–ಮೆಚ್ಚುಗೆ ವ್ಯಕ್ತವಾಗಿದೆ. ನೀಲಾಂಬಿಕಾ ತಾಯಿಯು ಕಲ್ಯಾಣದಿಂದ ಹೊರಟು ಬಂದುದು, ತಂಗಡಗಿಯ ಬಳಿ ಬೀಡುಬಿಟ್ಟುದು, ನದಿ ದಾಟಲೆತ್ನಿಸಿ ಸಾಧ್ಯವಾಗದೆ ಹೋದುದು ತಂಗಡಗಿಯ ಬಳಿ ಆ ತಾಯಿಯ ಸಮಾಧಿ ಮತ್ತು ಕರೆಯಲು ಹೋಗಿದ್ದ ಹಡಪದ ಅಪ್ಪಣ್ಣನವರ ಸಮಾಧಿ ಇರುವುದು. ಈ ಯಾವ ವಿಷಯವೂ ಈ ಲೇಖಕರಿಗೆ ತಿಳಿದೇ ಇಲ್ಲವೆ ? ಕೃಷ್ಣಾನದಿಯ ಒಂದು ಬದಿಗೆ ಬಸವೇಶ್ವರರ ಐಕ್ಯಮಂಟಪ ಇನ್ನೊಂದು ಬದಿಗೆ ನೀಲಾಂಬಿಕೆಯ ಐಕ್ಯಮಂಟಪಗಳು ಇರುವುದು ಇವರ ಗಮನಕ್ಕೆ ಬಂದಿಲ್ಲವೆ ? ವಚನ ಸಾಹಿತ್ಯ ಮತ್ತು ಸ್ಥಾನಿಕ ಕುರುಹುಗಳು ಒಂದನ್ನೂ ಗಣನೆಗೆ ತಂದುಕೊಳ್ಳದೆ ಯಾವುದೇ ಆಳ-ಹರವು ಇಲ್ಲದ ಒಂದು ಕೃತಿಯನ್ನು ರಚಿಸುವ ಇವರ ಉದ್ದೇಶದಲ್ಲಿ ಯಾವ ಸತ್ಯ ಹಾಗೂ ಪ್ರಾಮಾಣಿಕತೆಯನ್ನು ಕಾಣಬಹುದು ?

೧೨. ಸಂಕುಚಿತ ಮನಸ್ಸು

ಹಿಂದುಳಿದ ವರ್ಗಗಳವರನ್ನು ಪ್ರಚೋದಿಸುವ, ಮಾತ್ರವಲ್ಲ ಧರ್ಮ–ದೇವರು–ಸಾಮಾಜಿಕ–ಧಾರ್ಮಿಕ–ಹಕ್ಕುಗಳಿಂದ ವಂಚಿತರಾಗಿದ್ದ ಬೃಹತ್ ಜನಸಮೂಹಕ್ಕೆ ಬಸವಣ್ಣನವರು ಮೇಲ್ಕಂಡ ಹಕ್ಕುಗಳನ್ನು ಕೊಡಿಸಲು ಕೈಗೊಂಡ ಹೋರಾಟವನ್ನು, ಕಳಕಳಿಯನ್ನು ಸಂದೇಹಿಸುವಂತೆ ಮಾಡುವ ಪ್ರಯತ್ನವೇ ಈ ಕೃತಿಯ ಧ್ಯೇಯವಾಗಿದೆ. ಇಂದು ಭುಗಿಲೆದ್ದಿರುವ ಜಾತೀಯ ಮನೋಭಾವದ ದಾವಾನಲದ ಕೆಂಬೆಳಕಿನಲ್ಲಿ ಬಸವಣ್ಣನವರು, ಗಾಂಧೀಜಿಯವರು ಅಪರಾಧಿಗಳೇ ಸರಿ ! ಅಂದು ಸಂಪ್ರದಾಯವಾದಿಗಳಿಂದ ನಲುಗಿ ಹೋದ ಈ ಪುಣ್ಯ ಚೇತನಗಳು ಈಗೊಂದು ಬಗೆಯ ಜಾತಿವಾದಿಗಳ ಕೈಗೆ ಸಿಕ್ಕು ಜರ್ಜರಿತರಾಗುತ್ತಿದ್ದಾರೆ ಎನ್ನುವುದು ವಿಷಾದನೀಯ ಸತ್ಯವಾಗಿದೆ.

"ಮಹಾಚೈತ್ರ" ಕೃತಿಯಲ್ಲಿ ಒಳ್ಳೆಯ ಅಂಶ ಇಲ್ಲವೇ ಇಲ್ಲ ಎಂದೇನೂ ಇಲ್ಲ. ಫ್ರೆಂಚ್ ಕ್ರಾಂತಿಗೂ ಬಹು ಬಹು ಪೂರ್ವದಲ್ಲೇ ಕಲ್ಯಾಣದ ಕ್ರಾಂತಿ ಮೂಡಿಬಂದುದು, ಬಸವಣ್ಣನವರು ನೊಂದವರ ಧ್ವನಿಯಾದುದು, ಕಾಯಕ ಜೀವಿಗಳಿಗೆ ಮಹತ್ವ ನೀಡಿ,

ಸ್ವಾಭಿಮಾನ ತುಂಬಿದುದು, ಈ ಕಲ್ಯಾಣ ಕ್ರಾಂತಿ–ವಚನ ವಾಙ್ಮಯವು ನಂತರದ ಸಮಾಜ-ಸಾಹಿತ್ಯ ಪರಂಪರೆ–ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದ ಅತುಳ ಶಕ್ತಿ ಎಂಬ ಭಾವವು ಈ ಕೃತಿಯನ್ನು ಓದಿದಾಗ ಸ್ವಲ್ಪ ಮಟ್ಟಿಗೆ ಉಂಟಾಗುವುದು. ಬಿಜ್ಜಳನ ಅಂತ್ಯವನ್ನು ಜಡ ಸಂಪ್ರದಾಯದ ಅಂತ್ಯದ ಸಂಕೇತ ಶಿಶಿರವಾಗಿ, ಕಲ್ಯಾಣ ಕ್ರಾಂತಿ ಮುಂದಿನ ಸಮತಾವಾದಿ ಸಮಾಜ ರಚನೆಯ ಮಹಾಚೈತ್ರವಾಗಿ ಪರಿಚಯಿಸಲಾಗಿದೆ. ಆದರೆ "ಎಲ್ಲಾ ಬಣ್ಣವನ್ನು ಮಸಿ ನುಂಗಿತು ಎಂಬಂತೆ" ಈ ಸದುದ್ದೇಶ ಒಟ್ಟಾರೆ ಮರೆಯಾಗಿ, ಚಳುವಳಿಯ ನಾಯಕ ಬಸವಣ್ಣನವರನ್ನು ನಿಂದಿಸುವ, ಅಗೌರವಿಸುವಲ್ಲಿ ಲೇಖಕರು ಆತ್ಯಾತುರ ತೋರುವುದು ವ್ಯಕ್ತವಾಗುತ್ತದೆ. ಇದು ಗ್ರಂಥದ ಅರ್ಪಣೆಯಿಂದ ಹಿಡಿದು ಕೊನೆಯ ಪುಟದವರೆಗೂ ಅವ್ಯಾಹತವಾಗಿ ಸಾಗಿದೆ.

ಅತ್ಯಂತ ಅಜಾಗ್ರತ ಸ್ಥಿತಿಯಲ್ಲಿದ್ದ ಜನಸಮೂಹವನ್ನು ಅನುಕಂಪದಿಂದ ಜಾಗೃತಿಸಿ, ಅವರನ್ನೆಲ್ಲ ತಮ್ಮ ವಿಶಾಲವಾದ "ಮಹಾಮನೆ"ಯಲ್ಲಿ ಇಂಬಿಟ್ಟುಕೊಂಡು, ಅಂಥವರ ಸಮೂಹದಿಂದಲೇ ಮಹಾನ್ ಶರಣರನ್ನು ರೂಪಿಸಿ, ಕ್ರಾಂತಿಕಾರಿ ವಚನ ಸಾಹಿತ್ಯ ನಿಧಿಯನ್ನು ಕನ್ನಡ ಭಾಷೆ, ಭಾರತ ದೇಶಕ್ಕಿತ್ತು, ಇಂಥ ಕ್ರಾಂತಿಕಾರಿ ಚಳುವಳಿಯಿಂದ ಮೇಲ್ವರ್ಣೀಯರ ಅಸಹನೆ, ಕೋಪಗಳಿಗೂ ತುತ್ತಾಗುವ ಬಸವಣ್ಣನವರ ಸಾಧನೆ ಶಿವಪ್ರಕಾಶರ ದೃಷ್ಟಿಯಲ್ಲಿ ಏನೇನೂ ಇಲ್ಲ. ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣನವರಂತೆ ಕೊಂಡಾಡುವುದತ್ತಲಿರಲಿ, ಶಿವಪ್ರಕಾಶರು ಆ ಮಹಾನ್ ಶರಣರ ಬಾಯಿಂದ ಬಸವಣ್ಣನವರ ನಿಂದನೆಯನ್ನೂ ಮಾಡಿಸಿಬಿಟ್ಟು ಮಹಾನ್ ಕಾರ್ಯ ಮಾಡಿದ್ದಾರೆ.

ಲೇಖಕರು ದುರುದ್ದೇಶದಿಂದ, ವಿವಾದಾಸ್ಪದ ಬರಹಗಳಿಂದ ಪ್ರಸಿದ್ಧರಾಗುವ ಹಂಬಲದಿಂದ ಏನೇನನ್ನೋ ಬರೆದು ಬಾಯಿಯ ಮತ್ತು ಕೈಯ ಚಪಲ ತೀರಿಸಿಕೊಳ್ಳಬಹುದು. ಪ್ರಜಾಪ್ರಭುತ್ವ ಎಂಬ ಈ ದೊಡ್ಡಾಟದಲ್ಲಿ ಎಲ್ಲರೂ ಪ್ರಭುಗಳೇ, ಅಭಿವ್ಯಕ್ತಿ ಸ್ವಾತಂತ್ರ್ಯ ಉಳ್ಳವರೆ. ಆದರೆ ಯಾವುದೇ ಕೃತಿಗಳನ್ನು ಪಠ್ಯಪುಸ್ತಕವಾಗಿ ಆಯ್ಕೆ ಮಾಡುವಾಗ ಆಯ್ಕೆ ಸಮಿತಿಯ ಹೊಣೆಗಾರಿಕೆ ಕೂಡ ಇರುವುದಲ್ಲವೆ ? ಅದರಲ್ಲೂ ಮಹಾನ್ ವ್ಯಕ್ತಿಗಳ ದೂಷಣೆಗೆ ಇಂಬು ಕೊಡುವುದು ವಿಶ್ವವಿದ್ಯಾಲಯಗಳಿಗೆ ಸಲ್ಲದು.

ಮಹಾಚೈತ್ರ ನಾಟಕದ ಬಗ್ಗೆ ಪ್ರಜಾವಾಣಿ, ಕನ್ನಡಪ್ರಭ, ಅನ್ವೇಷಣೆ (ಸಾಹಿತ್ಯ ಮಾಸಿಕ), ಡೆಕ್ಕನ್ ಹೆರಾಲ್ಡ್, ಈವನಿಂಗ್ ಹೆರಾಲ್ಡ್, ದಿ ಹಿಂದು ಮುಂತಾದ ಪತ್ರಿಕೆಗಳು, ಡಾ॥ ಕೆ. ಮರುಳುಸಿದ್ದಪ್ಪ ನಂತಹ ಖ್ಯಾತ ಸಂಶೋಧಕರು ಮೆಚ್ಚುಗೆ ಸೂಸಿದ್ದು, ಇದನ್ನು ಪುಸ್ತಕದ ಕಡೆಯಲ್ಲಿ ಕೊಡಲಾಗಿದೆ. ಅವರು ಕೃತಿಯ ಒಳಗಿನ ವಿಷಯಗಳ

ಪ್ರಾಮಾಣಿಕತೆಯನ್ನು ಗಮನದಲ್ಲಿ ಇಟ್ಟುಕೊಳ್ಳದೆ ನಾಟಕವಾಗಿ ಇದು ಯಶಸ್ವಿಯಾಗಿದೆ ಎಂದು ಪ್ರಸ್ತಾಪಿಸಿದ್ದಾರೆ. ಹಿಂದೆ ಶ್ರೀ ಪಿ. ವಿ. ನಾರಾಯಣರವರಿಗೆ ಬಸವ ಸಮಿತಿ ಕೊಟ್ಟ "ಬಸವ ಪ್ರಶಸ್ತಿ" ಯ ರೀತಿಯಲ್ಲೇ ಈ ಹೊಗಳಿಕೆ ಇದೆ. ನಮ್ಮ ದೇಶದಲ್ಲಿ ವಸ್ತುನಿಷ್ಠ ವಿಶ್ಲೇಷಣೆ ಬಹಳ ಕಡಿಮೆ. "ಮುಖ ನೋಡಿ ಮಣೆಹಾಕುವ ಸಂಪ್ರದಾಯ" ಬರೀ ಮದುವೆ ಮನೆ, ಸಂತೋಷ ಕೂಟಗಳಲ್ಲಿ ಮಾತ್ರವಲ್ಲ ಸರ್ಕಾರವು ಕೊಡುವ ಬಹುಮಾನ, ಪ್ರಶಸ್ತಿ ಮುಂತಾದುವುಗಳಿಗೆಲ್ಲ ವ್ಯಾಪಿಸಿಕೊಂಡಿದೆ. ಪಠ್ಯ–ಪುಸ್ತಕಗಳನ್ನು ಆಯ್ಕೆ ಮಾಡುವಲ್ಲಿ ಸಹ ಈ "ಮುಖ ನೋಡಿ ಮಣೆ ಹಾಕುವ ಸಂಪ್ರದಾಯ" ವ್ಯಾಪಿಸುತ್ತಿದ್ದು, ಭ್ರಷ್ಟಾಚಾರವೂ ಶಿಷ್ಟಾಚಾರವಾಗಿರುವ ಈ ದೇಶದಲ್ಲಿ ಅದೂ ಸೇರಿಬಿಟ್ಟರೆ ಮುಗಿದೇಹೋಯಿತು. ಪಠ್ಯಪುಸ್ತಕ ಆಯ್ಕೆ ಸಮಿತಿಗಳು ಯಾವುದೇ ಕೃತಿಯನ್ನು ಆಯ್ಕೆ ಮಾಡುವಲ್ಲಿ ಎಲ್ಲ ದಿಕ್ಕಿನಿಂದಲೂ ಪರಿಶೀಲಿಸಬೇಕು. ಪತ್ರಿಕೆಗಳು ನಾಟಕ ಕಲೆಯ ದೃಷ್ಟಿಯಿಂದ ಈ ಪುಸ್ತಕವನ್ನು ಹೊಗಳಿರುವುದು ನೋಡಿದರೆ ನನಗೊಂದು ಉಪಮೆ ಹೊಳೆಯುತ್ತಿದೆ. ಓರ್ವ ವ್ಯಕ್ತಿ ಒಂದು ವಾಹನ ತಂದು ಜನಸಂದಣಿ ವಿಪರೀತವಾಗಿರುವ ಸ್ಥಳದಿಂದ ಓರ್ವ ಸುಂದರ ತರುಣಿಯನ್ನು ಅತ್ಯಾಚಾರ ಮಾಡಲು ಅಪಹರಿಸಿಕೊಂಡು ಹೋಗಿರುವನು ಎಂದುಕೊಳ್ಳುವಾ. ಆಗ ತ್ವರಿತ ಕ್ರಮ ಕೈಗೊಂಡು ಪೋಲಿಸರಿಗೆ ತಿಳಿಸುವುದನ್ನೊ ಅಥವಾ ಒಂದು ವಾಹನ ತೆಗೆದು–ಕೊಂಡು ಆ ವ್ಯಕ್ತಿಯ ಬೆನ್ನುಹತ್ತುವುದನ್ನೋ ಮಾಡುವುದು ಬಿಟ್ಟು, ಆ ಪ್ರಸಂಗವನ್ನು ನಾಟಕೀಯವಾಗಿ ವರ್ಣಿಸುತ್ತ, ಅಪಹರಣಕಾರರನ್ನು ಒಬ್ಬ ಶೂರ ಫ್ಯಾಂಟಮ್ಮನಂತೆ ಹೊಗಳತೊಡಗಿದರೆ ಹೇಗೆ ?

ಶ್ರೀ ಶಿವಪ್ರಕಾಶರು ಅಂಥ "ಅತ್ಯಾಚಾರವನ್ನು" ಬಸವಣ್ಣ, ಚನ್ನಬಸವಣ್ಣನವರ ಮೇಲೆ ಸಾಹಿತ್ಯಿಕವಾಗಿ ಮಾಡಿದ್ದಾರೆ. ಇವರ ವ್ಯಕ್ತಿತ್ವ ಹನನ ಮಾಡಿದ್ದಾರೆ. ಇಂಥ ದುರುದ್ದೇಶಪೂರಿತ ಕೆಟ್ಟ ಪುಸ್ತಕವನ್ನು ಪಠ್ಯಪುಸ್ತಕವಾಗಿ ಮಾಡುವಲ್ಲಿ ಆಯ್ಕೆ ಸಮಿತಿಯದು ದುರುದ್ದೇಶವಿದೆಯೋ ಅಜ್ಞಾನವಿದೆಯೋ ? ಬೇಜವಾಬ್ದಾರಿತನ–ವಿದೆಯೋ ದಾಕ್ಷಿಣ್ಯವಿದೆಯೊ ? ಅಥವಾ ಭ್ರಷ್ಟಾಚಾರವಿದೆಯೊ ? ಇದು ಹೊರಬರಲು ವಿಚಾರಣೆ ನಡೆಯುವುದು ಅಗತ್ಯವಿದೆ.

ಕಪೋಲ ಕಲ್ಪಿತ ಸುಳ್ಳುಗಳನ್ನು ಹೆಣೆದು ಬಸವಾದಿ ಪ್ರಮಥರ ಚಾರಿತ್ರ್ಯ ಹನನ ಮಾಡಿರುವ ಶಿವಪ್ರಕಾಶರ "ಮಹಾಚೈತ್ರ" ಕೃತಿಯನ್ನು ಕಲಬುರ್ಗಿ ಮತ್ತು ಕುವೆಂಪು ವಿಶ್ವವಿದ್ಯಾಲಯಗಳು ಪಠ್ಯಕ್ರಮದಿಂದ ರದ್ದು ಮಾಡಲು ಸಾರ್ವಜನಿಕರು ಆದಷ್ಟು ತೀವ್ರಗತಿಯಿಂದ ಪ್ರಯತ್ನಿಸುವುದು ಅತ್ಯಗತ್ಯವಾಗಿದೆ. ಈ ಬಗ್ಗೆ ನಾವು ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದ್ದೇವೆ.

★ ★

ಅಮರ ಚೇತನ ಮಹಾತ್ಮಾ ಗಾಂಧೀಜಿ.

ಒಬ್ಬ ಶಿಲ್ಪಿ ಉತ್ತಮವಾದ ಒಂದು ಶಿಲೆಯನ್ನು ತೆಗೆದುಕೊಂಡು ಅದರ ಒಡಲೊಳಗಿನಿಂದ ಮುದ್ದಾದ ಒಂದು ನಂದಿಯ ವಿಗ್ರಹವನ್ನು ಕಟೆಯುತ್ತಲಿರುವಾಗ, ಅದು ಹಂದಿಯಸಾಗಿ ರೂಪು ತಳೆದರೆ ಆ ಶಿಲ್ಪಿಗೆ ಹೇಗಾದೀತು ? ಇಂದು ರೂಪುಗೊಂಡಿರುವ ಭಾರತದ ಪ್ರಜಾಪ್ರಭುತ್ವವೂ ಹೀಗೇ ಆಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಪೂಜ್ಯ ಬಾಪೂಜಿಯವರು ಮತ್ತು ಅವರ ಸಮಕಾಲೀನರು ತನು–ಮನ–ಧನಗಳನ್ನು ಮೀಸಲಿಟ್ಟು, ತಮ್ಮನ್ನು ತಾವು ದೇಶಕ್ಕೆ ಸಮರ್ಪಿಸಿಕೊಂಡು ಭವ್ಯ ಭಾರತದ ರೂಪುರೇಷೆ ಹಾಕಿಕೊಂಡು ಸ್ವತಂತ್ರ ದೇಶಕ್ಕಾಗಿ ಹಂಬಲಿಸಿ, ಹಲುಬಿ ಅಂತೂ ಬ್ರಿಟಿಷರ ಆಳ್ವಿಕೆಯಿಂದ ದೇಶವನ್ನು ಬಿಡುಗಡೆ ಮಾಡಿದರು. ಇದು ನಿಜಕ್ಕೂ ಒಂದು ಪವಾಡವೆ. ಶ್ರೀಯುತ ಸಿ. ಎಫ್. ಆಂಡ್ರೂಸ್ ಹೇಳುವಂತೆ, 'ಬಾಪೂಜಿ ಭಾರತದ ಬೆನ್ನನ್ನು ನೆಟ್ಟಗೆ ಮಾಡಿದರು.' ಸೂರ್ಯ ಮುಳುಗದಷ್ಟು ವಿಸ್ತಾರವಾದ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಜಯ ಹೊಂದಬಹುದೆಂಬ ಆತ್ಮವಿಶ್ವಾಸ, ಭರವಸೆ ಯಾರಿಗೆ ಆರಂಭದಲ್ಲಿ ಇರಲು ಸಾಧ್ಯ ? ಆದರೆ ಅಚಲ ಸಂಕಲ್ಪವಿದ್ದುದರಿಂದ ಬಾಪೂಜಿ ಜನಶಕ್ತಿಯನ್ನು ಕ್ರೋಢೀಕರಿಸಲು ಸಮರ್ಥರಾದರು.

ಅಸಂಖ್ಯಾತ ಜನರು ತಮ್ಮ ಪ್ರಾಣವನ್ನು ತೆತ್ತು, ಪಣಕ್ಕಿಟ್ಟು ತನು–ಮನ–ಧನಗಳನ್ನು ಅರ್ಪಿಸಿ ಸ್ವತಂತ್ರ ಭಾರತದ ಕನಸು ನನಸಾಗುವಲ್ಲಿ ಶ್ರಮಿಸಿದರಲ್ಲ ; ಆದರೆ ಅವರಿಟ್ಟುಕೊಂಡ ಕನಸುಗಳು ನನಸಾದವೆ ? ತಮ್ಮ ಶ್ರಮ ಈ ರೀತಿ ವ್ಯರ್ಥವಾಗುವುದೆಂದು ಅವರು ನಂಬಿದ್ದರೆ ? ಬಹುಶಃ ಯಾವ ದೇಶವೂ ಇಷ್ಟು ಕ್ಷಿಪ್ರಗತಿಯಲ್ಲಿ ತನ್ನನ್ನು ಹುಟ್ಟುಹಾಕಿದ ಪಿತಾಮಹರನ್ನು ಮರೆತಿರಲಿಕ್ಕಿಲ್ಲವೇನೊ ! ಅಷ್ಟು ಕ್ಷಿಪ್ರಗತಿಯಲ್ಲಿ ಭಾರತೀಯರು, ಅದರಲ್ಲೂ ಯುವ ಜನಾಂಗ ತನ್ನ ರಾಷ್ಟ್ರಪಿತರನ್ನು ಮರೆತಿದೆ. 'ರಾಷ್ಟ್ರಪಿತ' ಎಂಬ ಪ್ರಯೋಗವೇ ತಪ್ಪು. ಈ ದೇಶ ಮೊದಲೇ ಇರಲಿಲ್ಲವೆ ? ಗಾಂಧೀಜಿಯಿಂದ ಇದು ಹುಟ್ಟಿತೆ ? ಎಂಬ ವಾದವನ್ನು ಸಹ ಕೆಲವರು ಮಾಡುತ್ತಿದ್ದಾರೆ. ಪ್ರತಿಯೊಂದು ಪರಿಕಲ್ಪನೆ (Concept)ಗೂ ಒಂದು ಸೀಮಿತತೆ ಇರುತ್ತದೆ. ಅತ್ಯಂತ ರುಚಿಕಟ್ಟಾದ ಪಾಯಸವನ್ನು ಮಾಡಿಟ್ಟಾಗ ಮಾಡಿದ ವ್ಯಕ್ತಿಯನ್ನು ಅದರ 'ತಾಯಿ' ಎನ್ನುತ್ತೇವೆ. ಓರ್ವವ್ಯಕ್ತಿ ಒಂದು ಸುಂದರ, ಭವ್ಯ ಮನೆಯನ್ನು ನಿರ್ಮಾಣ ಮಾಡಿದಾಗ ಆತ ಅದರ ಜನಕ ಎನ್ನುತ್ತೇವೆ. ಮೊದಲೇ ರವೆ ಇರಲಿಲ್ಲವೇ ? ಸಕ್ಕರೆ, ದ್ರಾಕ್ಷಿ–ಗೋಡಂಬಿ ಇರಲಿಲ್ಲವೆ ? ಅದು ಹೇಗೆ ಆಕೆ ಆ ಪಾಯಸಕ್ಕೆ ತಾಯಿ ಆಗುತ್ತಾಳೆ.

ಸಿಮೆಂಟ್, ಕಲ್ಲು, ಇಟ್ಟಿಗೆ, ನೀರು ಮೊದಲೇ ಇರಲಿಲ್ಲವೆ ? ಅದೆಂತು ಈತ ಆ ಮನೆಯ ಜನಕನಾಗುತ್ತಾನೆ ? ಎನ್ನುವುದು ಅಸಂಬದ್ಧ ಪ್ರಶ್ನೆ. ಅನೇಕ ಸಂಸ್ಥಾನಗಳು–ಸಂಸ್ಥಾನಿಕರು ; ಹಲವಾರು ಭಿನ್ನತೆಗಳಿಂದ ಕೂಡಿದ ಭಾಷೆ-ವೇಷ-ಸಂಸ್ಕೃತಿ–ಮತ ಸಂಪ್ರದಾಯಗಳ ಜನರು ; ಇದು ಸ್ವತಂತ್ರಪೂರ್ವದ ಭಾರತವಾಗಿತ್ತು.

ಇಂಥ ಪರಿಸ್ಥಿತಿಯಲ್ಲಿ ಯಾವುದೋ ಕೂಗು ಕೇಳಿ ಜನರು ಎದ್ದರಲ್ಲ, ಮೈಕೊಡವಿಕೊಂಡು ಎದ್ದರಲ್ಲ ; ಅದೇನು ಸಾಮಾನ್ಯ ಧ್ವನಿಯೇ ? ಜನಪದ ಕವಿಗಳು ವಿಶ್ವಗುರು ಬಸವಣ್ಣನವರು ಮಾಡಿದ ಒಂದು ಜಾಗೃತಿಯನ್ನು ಹೀಗೆ ಸಶಕ್ತ ಪದಗಳಲ್ಲಿ ಬಣ್ಣಿಸುತ್ತಾರೆ.

ಸಾಗಿ ಬಸವನು ಬಂದು ಸೇರಿದನು ಕಲ್ಯಾಣ
ಹಾಗಿನಲಿ ಕಟ್ಟಿ ಅನುಭಾವ ! ಮಂಟಪವ
ಕೂಗು ಕೇಳುತಲಿ ಜನವೆದ್ದು ||

ಜನರನ್ನು ಎಬ್ಬಿಸುವ ಆ ಕೂಗು ಸಾಮಾನ್ಯವೆನ್ನಲಾಗದು. ಯಾವುದೋ ಮಾಂತ್ರಿಕ ಶಕ್ತಿ ಆ ಕೂಗಿನಲ್ಲಿ ಇರುವುದೆಂದೇ ಅವರ ಮಾತನ್ನು ಜನತೆ ಪಾಲಿಸುತ್ತದೆ. ಬ್ರಿಟಿಷರು ತಮ್ಮ ಪ್ರಭಾವದ ಬಗ್ಗೆ ಆಗಾಗ ಜನಾಭಿಪ್ರಾಯ ಸಂಗ್ರಹಿಸುತ್ತಿದ್ದರಂತೆ. ಅಲ್ಲಲ್ಲೇ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದಿದ್ದುವು ಬಿಡಿಬಿಡಿಯಾಗಿ. ಪೂಜ್ಯ ಗಾಂಧೀಜಿಯೂ ಆಗಲೇ ರಂಗಪ್ರವೇಶ ಮಾಡಿದ್ದರು. ಅಂಥ ಸಮಯದಲ್ಲಿ ಒಂದು ಜನಾಭಿಪ್ರಾಯ ಸಂಗ್ರಹಣೆ, ಸಮೀಕ್ಷೆ ನಡೆಸಿದಾಗ "ಗಾಂಧೀಜಿ ಯಾರು ಗೊತ್ತೆ ?" ಎಂದು ಕೇಳಿದಾಗ ಬಹುಪಾಲು ಜನ ಗ್ರಾಮಸ್ಥರು ಗೊತ್ತಿಲ್ಲವೆಂದರು. ಆಗ ಬ್ರಿಟಿಷ್ ಅಧಿಕಾರಿ, "ಇನ್ನೂ ಬ್ರಿಟಿಷರು ಭಯಪಡಬೇಕಾಗಿಲ್ಲ ; ಈ ಜನಕ್ಕೆ ತಮ್ಮ ನಾಯಕ ಯಾರೆಂಬುದೇ ಗೊತ್ತಿಲ್ಲ." ಎಂಬ ವರದಿಯನ್ನು ಇಂಗ್ಲೆಂಡಿಗೆ ಕಳಿಸಿದನಂತೆ. ಈ ಗಾಂಧಿಯ 'ಕೂಗು' ಕೆಲವೇ ದಿನಗಳಲ್ಲಿ ಕಾಡ್ಗಿಚ್ಚಿನಂತೆ ವ್ಯಾಪಿಸಿತು. ಭಾಷೆ-ವೇಷ ಮತ–ಧರ್ಮಗಳ ಸೀಮೆ ಮೀರಿ ಇಡೀ ದೇಶವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಆಗೊಮ್ಮೆ ಬ್ರಿಟಿಷ್ ಅಧಿಕಾರಿಗಳು ಜನಾಭಿಪ್ರಾಯ ಸಂಗ್ರಹಿಸಿದರು. ಗಾಂಧೀಜಿಯವರ ಹೆಸರು ಹೇಳಿದರೆ ಸಾಕು ದಿಲ್ಲಿಯಿಂದ ಹಳ್ಳಿಯವರೆಗಿನ ಜನ ಪುಳಕಿತರಾಗುತ್ತಿದ್ದರು. "ಗಾಂಧಿ ಯಾರು ಗೊತ್ತೇ"? ಎಂದು ಗುಪ್ತವೇಷದ ಬ್ರಿಟಿಷ್ ಅನುಯಾಯಿಗಳು ಕೇಳುತ್ತಲೇ "ಏಕೆ ಗೊತ್ತಿಲ್ಲ ; ಬಾಪೂಜಿ ನಮ್ಮ ನಾಯಕರು ; ಅವರು ಹೇಳಿದ್ದನ್ನು ನಾವು ಮಾಡಲು ಎಂದೂ ಸಿದ್ಧ." ಎಂದು ಜನಸಾಮಾನ್ಯರು ಸಹ ಪ್ರತಿಕ್ರಿಯೆ ನೀಡತೊಡಗಿದರು. ಆಗ ಬ್ರಿಟಿಷ್ ಅಧಿಕಾರಿಗಳು ಗುಪ್ತ ವರದಿಯನ್ನು ಸಿದ್ಧಪಡಿಸಿ ಕಳಿಸಿದರಂತೆ. "ಇನ್ನು ನಾವು ಬಹಳ ದಿವಸ ಈ ದೇಶವನ್ನಾಳಲು ಸಾಧ್ಯ–

ವಿಲ್ಲ. ಏಕೆಂದರೆ ಇಲ್ಲಿಯ ಜನರು ತಮ್ಮ ನೇತಾರನನ್ನು ಗುರುತಿಸಿಕೊಂಡಿದ್ದಾರೆ," ನೇತಾರನನ್ನು ಗುರುತಿಸಿಕೊಂಡ ಬಳಿಕ ಧ್ಯೇಯವನ್ನು ಸ್ಪಷ್ಟಪಡಿಸಿಕೊಳ್ಳುವುದು ಸುಲಭ ಯಾವಾಗಲೂ ಬಾಪೂಜಿಯಂತಹ ವ್ಯಕ್ತಿಗಳನ್ನು ವ್ಯಕ್ತಿ ಎನ್ನಲಾಗದೆ ಶಕ್ತಿ ಎನ್ನಬೇಕಾಗುತ್ತದೆ.

ಓರ್ವ ಪಾಶ್ಚಿಮಾತ್ಯ ತತ್ತ್ವಜ್ಞಾನಿ ಹೇಳುವನು. ಭಾರತದಲ್ಲಿ ನಾನು ಇಷ್ಟಪಡುವ ಎರಡು ಸಂಗತಿಗಳೆಂದರೆ ಒಂದು ಹಿಮಾಲಯ, ಇನ್ನೊಂದು ಗಾಂಧೀಜಿ. ಅಮೆರಿಕಾಕ್ಕೆ ಹೋದಾಗ ಒಂದು ದಿನ ನಮ್ಮನ್ನು ನಮ್ಮ ಅತಿಥೇಯ ಸದ್ಭಕ್ತರು ಫೋರ್ಡ್ ಕಾರು ತಯಾರಿಕಾ ಕಂಪೆನಿಗೆ ಕರೆದುಕೊಂಡು ಹೋದರು. ಕಂಪೆನಿಯನ್ನು ಪ್ರವೇಶಿಸುವಾಗ ಬಾಗಿಲ ಬಳಿ ಇರುವ ಭದ್ರತಾ ಕೋಣೆಯ ಬಳಿ ನಿಂತಿದ್ದ ಸಿಪಾಯಿ ನನ್ನ ವೇಷಭೂಷಣ ನೋಡಿ ಯಾವ ದೇಶದವರು ? ಎಂದು ಕೇಳಿದ "ಇಂಡಿಯಾ, ನಿಮಗೆ ಗೊತ್ತೆ ? " ಎಂದು ನಕ್ಕು ಕೇಳಿದೆ. "ಓಹೋ ಗಾಂಧೀಜಿಯ ಇಂಡಿಯಾ ಅಲ್ಲವೆ ?" ಎಂದ. ನನಗೆ ಹೃದಯ ತುಂಬಿ ಬಂತು, ಹೆಮ್ಮೆಯಿಂದ ಬೀಗಿದೆ. ಒಂದು ಫ್ಯಾಕ್ಟರಿಯ ಬಾಗಿಲು ಕಾಯುವ ಸಾಮಾನ್ಯ ಮನುಷ್ಯ ಭಾರತವನ್ನು ಗುರುತಿಸುವುದು ಪೂಜ್ಯ ಗಾಂಧೀಜಿಯ ಮೂಲಕ. ಇಂದು ಪೃಥ್ವಿಯ ಭೂಖಂಡದಲ್ಲಿ ಅಸಂಖ್ಯಾತ ರಾಷ್ಟ್ರಗಳಿವೆ. ಆದರೆ ಭಾರತವು ಎಲ್ಲರ ನೆನಪಿನಲ್ಲಿ ಉಳಿಯುವ ಅಸಾಮಾನ್ಯ ಸ್ಥಾನ ಗಳಿಸಿಕೊಂಡಿದೆ, ಮುಖ್ಯ ಕಾರಣವೆಂದರೆ ಈ ದೇಶ ಜನ್ಮ ನೀಡಿರುವ ಮಹಾನ್ ವ್ಯಕ್ತಿಗಳು, ಮಹಾತ್ಮಾ ಗಾಂಧೀಜಿಯವರು ಅಹಿಂಸಾತ್ಮಕ ಚಳುವಳಿಯ ಸೂತ್ರವಾದ ಸತ್ಯಾಗ್ರಹದ ಮೂಲಕ ವಿಶ್ವವಿಖ್ಯಾತರಾದರು. ಮಾತ್ರವಲ್ಲ ನಂತರ ಆಗಿಹೋದ ಅನೇಕ ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆಯಾದರು, ಮಾರ್ಗ ದರ್ಶಕರಾದರು. ಒಬ್ಬ ಸಾಮಾನ್ಯ ಮನುಷ್ಯನೂ ಹೇಗೆ ಅತ್ಯುನ್ನತ ನಿಲುವನ್ನು ಹೊಂದಬಹುದೆಂಬುದಕ್ಕೆ ಮಹಾತ್ಮಾಜಿಯವರ ಜೀವನ ಒಂದು ಮಾದರಿಯಾಗಿ ನಿಲ್ಲುತ್ತದೆ.

ಹೀಗೆ ಅನೇಕ ವಿದೇಶೀಯರ ಕಣ್ಣಿನಲ್ಲಿ ಗೌರವಾನ್ವಿತ ವ್ಯಕ್ತಿಯಾದ ಮಹಾತ್ಮ ಗಾಂಧೀಜಿ ಭಾರತೀಯರಿಗೆ ಬೇಡವಾಗುತ್ತಿದ್ದಾರೆಯೆ ? ಅವರು ಬೋಧಿಸಿದ ಮೌಲ್ಯಗಳು ಇಂದಿನ ಜನರಿಗೆ ಬೇಡವಾಗುತ್ತಿವೆಯೆ ? ಎಲ್ಲರ ದೃಷ್ಟಿಯಲ್ಲಿ ಬೇಡವಾಗುತ್ತಿಲ್ಲ ; ಕೆಲವರ ದೃಷ್ಟಿಯಲ್ಲಿ ಮಾತ್ರ. ಕೇವಲ ಅಧಿಕಾರ ಮೋಹಿಗಳಾಗಿ ಗದ್ದುಗೆಯ ಪ್ರಿಯರಾಗಿರುವ ರಾಜಕಾರಣಿಗಳಿಗೆ ಮಹಾತ್ಮಾ ಗಾಂಧೀಜಿ ಬೇಕಾಗಿಲ್ಲ ; ತಮ್ಮ ಆಶ್ರಯದಾತರಾದ ಅಧಿಕಾರ ಹಿಡಿದವರು ಮಾತ್ರ ಬೇಕು. ಮುಖಸ್ತುತಿಯ ರಾಜಕಾರಣ ಮಾಡುತ್ತ ದಿಲ್ಲಿದೊರೆಗಳನ್ನು ಖುಷಿ ಪಡಿಸಬೇಕೆಂಬ ಆದರ್ಶ ರಾಜಕಾರಣಿಗಳು ಕೊಡುವ ಜಾಹಿರಾತುಗಳಲ್ಲಿ ಗಾಂಧಿತಾತನಿಗೆ ಒಂದಿಂಚೂ ಕೂಡ ಸ್ಥಳವಿರದು. 'ಅರಸನ ಕಂಡು ಪುರುಷನ (ಅಂದರೆ ಗಂಡನನ್ನು) ಮರೆಯುವ ಹೆಣ್ಣಿನಂತೆ,' ಎಂದು ಬಸವಣ್ಣನವರು ಹೋಲಿಕೆ ಕೊಡುವಂತೆ ಇಂತಹ ಜನರು. ಇನ್ನು ಯಾವ ಮೌಲ್ಯ ಆದರ್ಶ

ಗಳಿಗೂ ಬದ್ಧರಾಗದ ಯುವ ಜನಾಂಗಕ್ಕೆ ಗಾಂಧೀಜಿ 'ಔಟ್ ಡೇಟೆಡ್,' ನೀತಿ-ನ್ಯಾಯ, ಸಂಯಮ–ಸತ್ಯ ಪ್ರಿಯತೆ, ಅಹಿಂಸೆ–ಆತ್ಮ ನಿರೀಕ್ಷಣೆ ಇಂಥ ಒಳ್ಳೆಯ ಗಾಂಧಿ-ಮೌಲ್ಯಗಳು ಅವರಿಗೇಕೆ ಬೇಕು ? ಯುವ ಜನಾಂಗ ಬೆನ್ನುಹತ್ತಿರುವುದು ಪಂಚತಾರಾ ಸಂಸ್ಕೃತಿಯನ್ನು. ಇವರಿಗೆ, ಸ್ವಾತಂತ್ರ್ಯ ಗಳಿಕೆಗೆ ಅಂದಿನ ಜನರು ಮಾಡಿರುವ ತ್ಯಾಗವಾದರೂ ಏನು ಗೊತ್ತು ?

ಇನ್ನು ಕೆಲವು ಸಂಕುಚಿತ ಮತಿಯ ಜನರಿಗೆ ಗಾಂಧೀಜಿ ಈಗ ಜಾತಿವಾದಿಯಾಗಿ ತೋರುತ್ತಿರುವರು. ಹಿಂದುಳಿದ ವರ್ಗದವರ ಶತ್ರುವಾಗಿ ತೋರುತ್ತಿರುವರು. ಮತ್ತೆ ಕೆಲವರಿಗೆ ಗೋಡ್ಸೆಯೇ ನಾಯಕನಾಗಿ ಮಹಾತ್ಮಾಜಿಯವರೇ ಖಳನಾಯಕರಾಗಿ ತೋರುತ್ತಿರುವರು. ಇದನ್ನು ಕಂಡಾಗ ಅತೀವ ದುಃಖವಾಗುವುದು. It is far more dangercus to be a saint than being a conquerror ಎಂಬ ಕವಿವಾಣಿ ನೆನಪಿಗೆ ಬರುವುದು. ಸ್ವಾರ್ಥಿಗಳಾಗಿ, ತಮಗಾಗಿ ತಾವು ಬಾಳಿ ಹೋದವರು ಯಾರ ಟೀಕೆಗೂ ಆಹಾರವಾಗರು, ಮಹಾತ್ಮಾಜಿಯವರು ಪರಿಪೂರ್ಣರೇನಲ್ಲ, ಈ ಸೃಷ್ಟಿಯಲ್ಲಿ ಪರಮಾತ್ಮನೊಬ್ಬನೇ ಪರಿಪೂರ್ಣ. ಆದರೆ ಅವರು ಉಳಿದ ಅನೇಕರಿಗಿಂತಲೂ ಆದರ್ಶ ವ್ಯಕ್ತಿ ; ತಾನು ತನ್ನದೆಂಬ ಮಮಕಾರವನ್ನು ಅಳಿದು ಸಮಷ್ಟಿಯ ಹಿತಕ್ಕಾಗಿ ಬಾಳಿದವರು, ಅವರ ಚಿಂತನೆಯ ಶೈಲಿಯಲ್ಲಿ ಎರಡು ಮೂರು ಲೋಪದೋಷಗಳಿರಬಹುದು. ಉದಾಹರಣೆಗೆ, ದೇವರ ಕಲ್ಪನೆ, ಈಶ್ವರ–ಅಲ್ಲಾಹ ಮುಂತಾದುವು ಒಂದೇ ಮಹಾನ್‌ಶಕ್ತಿಯ ಬೇರೆ ಹೆಸರುಗಳು ಮಾತ್ರ ಎಂದು ಭಜಿಸುವಲ್ಲಿ ಅವರು ತಾತ್ತ್ವಿಕವಾಗಿ ಸರಿ ಇದ್ದರೂ ರಘುಪತಿ ರಾಘವ, ರಾಜಾರಾಮ, ಸೀತಾಪತಿಯಾದ ರಾಮನನ್ನೇ ದೇವರು ಎನ್ನುವಲ್ಲಿ ತಪ್ಪು ಮಾಡಿದರು. 'ಈಶ್ವರ ಅಂದರೆ ಸೃಷ್ಟಿಕರ್ತ' ಎಂಬ ಕಲ್ಪನೆ ಇಟ್ಟುಕೊಂಡಾಗ ಅದೇ ಕರ್ತನೆ ಅಲ್ಲಾಹ ಹೌದು. ಒಂದು ವೇಳೆ ಬರೀ 'ರಾಮ' ಅಂದಿದ್ದರೆ ಮಂಗಲ ಸ್ವರೂಪ ಎಂದು ಅರ್ಥವಾಗಿ ಕರ್ತನಿಗೆ ಅನ್ವಯಿಸುತ್ತಿತ್ತು. ರಘುಪತಿ, ರಾಜ, ಸೀತಾಪತಿ ಎಂದು ಬಣ್ಣಿಸುವಾಗ ತಾತ್ತ್ವಿಕ ದೋಷ ಪ್ರಾಪ್ತವಾಗುತ್ತದೆ ; ಗಾಂಧೀಜಿಯವರಿಗೆ ನಿರಾಕಾರನು, ನಿರ್ಗುಣನೂ ಆದ ದೇವರ ಸ್ವರೂಪ ತಿಳಿದಿರಲಿಲ್ಲ ಎನ್ನಿಸುತ್ತದೆ. ಈ ಬಗ್ಗೆ ಓರ್ವರು ಪ್ರಶ್ನಿಸಿದಾಗ ಗಾಂಧೀಜಿ ತಮ್ಮ ದೋಷವನ್ನರಿತು ದೇವರಿಗೇ ತಾವು ರಾಮ ಎನ್ನುವುದಾಗಿ ಹೇಳಿರುವರು. ತಾತ್ತ್ವಿಕ ದೋಷವು ಗಾಂಧೀಜಿಯಲ್ಲಿ ಇರಬಹುದಾದರೂ ನಾವು ಗಾಂಧೀಜಿಯವರನ್ನು ಗುರುತಿಸುವುದು ಶ್ರೇಷ್ಠ ತತ್ತ್ವಜ್ಞಾನಿ ಎಂದಲ್ಲ ; ಓರ್ವ ಆದರ್ಶ ನೇತಾರ, ಮುತ್ಸದ್ದಿ, ಸಮಾಜ ಸುಧಾರಕ, ರಾಜಕೀಯ ತತ್ತ್ವಜ್ಞಾನಿ, ಮುಂತಾಗಿ. ಕೋಗಿಲೆಯು ತನ್ನ ರೂಪಕ್ಕಾಗಿ ಕೀರ್ತಿಶಾಲಿಯಾಗಿಲ್ಲ, ಕಂಠಕ್ಕಾಗಿ ಆಗಿದೆ. ನವಿಲು ತನ್ನ ರೂಪಕ್ಕಾಗಿ ಕೀರ್ತಿಶಾಲಿಯಾಗಿದೆ, ಕಂಠಕ್ಕಾಗಿ ಅಲ್ಲ. ಮಹಾಪುರುಷರು ತಮ್ಮ

ಯಾವ ಗುಣಕ್ಕಾಗಿ ವಿಶೇಷ ವ್ಯಕ್ತಿಗಳಾಗಿದ್ದಾರೋ ಅದನ್ನು ನಾವು ಗಣನೆಗೆ ತಂದು ಕೊಳ್ಳಬೇಕು.

ಮಹಾತ್ಮಾಜಿಯವರನ್ನು ಟೀಕಿಸುವವರು ಅವರು ವರ್ಣಾಶ್ರಮ ವ್ಯವಸ್ಥೆಯ ಪಾಲಕರು, ಅವರ ಜಾತ್ಯತೀತತೆ ಢೋಂಗಿತನದ್ದು ಎನ್ನುವರು. ಮಹಾತ್ಮಾಜಿಯವರು ವಿಶ್ವಗುರು ಬಸವಣ್ಣನವರಷ್ಟು ಧೈರ್ಯವಾಗಿ ಜಾತಿಪದ್ಧತಿಯನ್ನು ಟೀಕಿಸಲಿಲ್ಲ ಮತ್ತು ವಿರೋಧಿಸಲಿಲ್ಲ ಎಂಬುದು ಸತ್ಯವಾದರೂ ನಾವು ಈ ಪ್ರಸಂಗವನ್ನು ಬೇರೊಂದು ರೀತಿಯಿಂದ ವಿಶ್ಲೇಷಿಸಬೇಕಾಗುತ್ತದೆ. ಶ್ರೀಯುತ ಡಾ॥ ಬಿ. ಆರ್. ಅಂಬೆಡ್ಕರ್ ಮತ್ತು ಮಹಾತ್ಮಾಜಿಯವರ ನಡುವೆ ಈ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ನಾವೊಂದು ಕೆಲಸದ ನಿಮಿತ್ತ ಒಂದು ಊರಿಗೆ ಹೊರಟಿರುತ್ತೇವೆ. ಮಾರ್ಗಮಧ್ಯದಲ್ಲಿ ಸುಂದರ ಗಿರಿಶ್ರೇಣಿ ಸಿಗುತ್ತದೆ. ಗಿರಿಶ್ರೇಣಿಯ ಸೌಂದರ್ಯ ಆಸ್ವಾದಿಸುತ್ತೇವಾದರೂ ಪ್ರಯಾಣದ ಗುರಿ ಕೆಲಸವು ಆಗಿರುವುದರಿಂದ, ಅತ್ತ ಕಡೆಗೆ ಹೆಚ್ಚು ಗಮನ ಕೊಡುತ್ತೇವೆ. ಗಿರಿಶ್ರೇಣಿಯ ಸೌಂದರ್ಯವನ್ನು ಆಸ್ವಾದಿಸುವುದೇ ಉದ್ದೇಶವಾದಾಗ ಅದಕ್ಕೆ ಹೆಚ್ಚು ಗಮನಕೊಡುತ್ತೇವೆ. ಅದೇ ರೀತಿ ಗಾಂಧೀಜಿಯವರ ಗುರಿ ಮೊಟ್ಟ ಮೊದಲು ಬ್ರಿಟಿಷರ ದಾಸ್ಯದಿಂದ ದೇಶವನ್ನು ಪಾರು ಮಾಡಿ, ಸ್ವಾತಂತ್ರ್ಯವನ್ನು ಗಳಿಸುವುದಾಗಿತ್ತು. 'ಮೊದಲು ಮನೆ ಕಬ್ಜಾಕ್ಕೆ ಬಂದರೆ ನಂತರ ಒಳಗೆ ಸ್ವಚ್ಛ ಮಾಡಿಕೊಳ್ಳೋಣ, ಕೌಂಪೌಂಡಿನಲ್ಲಿ ಹೂದೋಟ ಬೆಳೆಸೋಣ.' ಎಂಬುದಾಗಿರಬಹುದು. ಆದಕ್ಕಾಗಿಯೇ ಗಾಂಧೀಜಿ ವರ್ಣಾಶ್ರಮಾಧಾರಿತ ಸಮಾಜ ವ್ಯವಸ್ಥೆ ಎಂಬ ನಿದ್ರಿಸುವ ಹಾವನ್ನು ಬಡಿದೆಬ್ಬಿಸಲು ಹೋಗಲಿಲ್ಲ ಎನ್ನಿಸುತ್ತದೆ. ಆ ವಿಷಯವನ್ನು ಅವರು ಕೆದಕಿದ್ದರೆ ಆಗ ಮೇಲ್ಜಾತಿಯವರಿಗೂ ಹಿಂದುಳಿದವರಿಗೂ ಘರ್ಷಣೆ ಆರಂಭವಾಗಿ, ಇವರು ಉಭಯತರೂ ಸ್ವಾತಂತ್ರ್ಯದ ಹೋರಾಟ ಮರೆತು ಈ ಸದ್ಯ ತಿಕ್ಕಾಡುತ್ತಿರುವಂತೆ, ಜಾತೀಯ ತಿಕ್ಕಾಟಕ್ಕೆ ಇಳಿದು ಬಿಡುತ್ತಿದ್ದರು ; ಸ್ವಾತಂತ್ರ್ಯವು ಆಗ ಕನಸಿನ ಮಾತಾಗುತ್ತಿತ್ತೇನೊ ! ವೈಯಕ್ತಿಕವಾಗಿ ಬಾಪೂಜಿಯವರಲ್ಲಿ ಮತಾಂಧತೆ, ಜಾತಿ ಪ್ರಜ್ಞೆ ಇರಲಿಲ್ಲವಾಗಿ ಅವರು ಎಲ್ಲರನ್ನೂ ಇಂಬಿಟ್ಟುಕೊಂಡರು, ಗೌರವಿಸಿದರು. ಅವಿಶ್ರಾಂತವಾಗಿ ಅಸ್ಪೃಶ್ಯತಾ ನಿವಾರಣೆಗಾಗಿ ಶ್ರಮಿಸಿದರು. ಜಾತಿ ಪದ್ಧತಿಯ ವಿರುದ್ಧ ವಿಶ್ವಗುರು ಬಸವಣ್ಣ ಮತ್ತು ಶ್ರೀ ಡಾ॥ ಅಂಬೇಡ್ಕರರಂತೆ ನೇರ ಹೋರಾಟಕ್ಕೆ ನಿಲ್ಲಲಿಲ್ಲ. ಆದರೆ ಸನ್ನಿವೇಶದ ಹಿನ್ನೆಲೆಯಲ್ಲಿ, ಇದನ್ನು ಗಾಂಧೀಜಿಯವರ ದೌರ್ಬಲ್ಯವೆಂದು ನಾವು ಭಾವಿಸದೆ ಮುತ್ಸದ್ದಿತನದ ಜಾಣ್ಮೆ ಎಂದು ತಿಳಿಯಬೇಕಾಗುತ್ತದೆ. ಹಾಗೆ ಮಾಡದೆ ಗಾಂಧೀಜಿ ಜಾತಿಪದ್ಧತಿ ವಿರುದ್ಧ ನೇರ ಹೋರಾಟಕ್ಕೆ ನಿಂತಿದ್ದರೆ ಬ್ರಿಟಿಷರು ಹಿಂದು-ಮುಸ್ಲೀಮ್ ದ್ವೇಷ ಪ್ರಚೋದಿಸಿ ದೇಶವನ್ನು

ವಿಭಜಿಸಿದಂತೆ, ಜಾತಿ ಗುಂಪುಗಳನ್ನು ಪ್ರಚೋದಿಸಿ ಒಡೆದು ತಮ್ಮ ಆಳ್ವಿಕೆಯನ್ನು ಇನ್ನಷ್ಟು ವಿಸ್ತರಿಸುತ್ತಿದ್ದರೇನೊ !

ಭಾರತದ ಶ್ರೇಷ್ಠ ಸಮಾಜ ಸುಧಾರಕರು ಬಸವಣ್ಣ ಮತ್ತು ಬಾಪೂಜಿ. ಇಂಥ ಮಹೋನ್ನತ ಚಿಂತನಶೀಲ ಸಮಾಜ ಸುಧಾರಕರು ಇಂದು ಕೆಲವರ ಕಣ್ಣಿಗೆ ಜಾತಿವಾದಿಗಳಾಗಿ ಕಾಣುತ್ತಾರೆ, ಅಹಿಂಸೆಯಂಥ ಸಾಧನಾ ಮಾರ್ಗ ಬೋಧಿಸಿ ಹೇಡಿಗಳಾಗಿ ತೋರುತ್ತಾರೆ. ಸತ್ಯವನ್ನು ಎತ್ತಿಹಿಡಿದು ಅವ್ಯವಹಾರಿಕರಾಗಿ ಕಾಣಬರುತ್ತಾರೆ. ಜನತೆಯ ಚಿಂತನೆಯ ಶೈಲಿ ಈ ದೇಶದಲ್ಲಿ ಬದಲಾಗಿದೆ, ಭ್ರಷ್ಟಾಚಾರವೇ ಶಿಷ್ಟಾಚಾರವಾಗಿರುವ ಇಲ್ಲಿ ಭಯಂಕರವಾದ ಮೌಲ್ಯಗಳು ಬೇರುಬಿಡುತ್ತಿವೆ. ಅಸುರೀ ವಿಚಾರಗಳ ಅಟ್ಟಹಾಸದ ನಗೆಯ ಸದ್ದಿನ ನಡುವೆ ಬಸವಣ್ಣ-ಗಾಂಧೀಜಿಯ ಸಂದೇಶಗಳು ಕ್ಷೀಣಧ್ವನಿಯ ಅರಣ್ಯರೋದನದಂತಾಗಿವೆ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ,
ಕಕ್ಕಯ್ಯ ಒಕ್ಕುದ ಇಕ್ಕ ನೋಡಯ್ಯಾ.
ದಾಸಯ್ಯ ಶಿವದಾನವನೆರೆಯ ನೋಡಯ್ಯಾ
ಮನ್ನಣೆಯ ಚನ್ನಯ್ಯ ಎನ್ನುವನು ಮನ್ನಿಸ
ಶಿವಧೋ! ಶಿವಧೋ! ಉನ್ನತ ಮಹಿಮ ಕೂಡಲ ಸಂಗಮದೇವಾ.

ವಿಶ್ವಗುರು ಬಸವಣ್ಣನವರು ಹುಟ್ಟಿದ್ದು ಕಮ್ಮೆಕುಲದ ಬ್ರಾಹ್ಮಣ ದಂಪತಿಗಳಲ್ಲಿ, ಬಾಪೂಜಿ ಜನಿಸಿದ್ದು ಸಂಪ್ರದಾಯ ನಿಷ್ಠ ವೈಶ್ಯ ಮನೆತನದಲ್ಲಿ. ಎರಡೂ ಮನೆಯವರು ವರ್ಣಾಶ್ರಮ ವ್ಯವಸ್ಥೆಯ ದೃಢಪಾಲಕರು. ಬ್ರಾಹ್ಮಣ ವರ್ಣದಲ್ಲಿ, ವಿಪ್ರೋತ್ತಮರಾದ ದಂಪತಿಗಳ ಉದರದಲ್ಲಿ, ಅದೂ ಅಧಿಕೃತ ವಿವಾಹ ಸಂಬಂಧದಿಂದ ಹುಟ್ಟಿದ ಓರ್ವ ವ್ಯಕ್ತಿ ಬಸವಣ್ಣನವರು. ಕೇವಲ ಹುಟ್ಟಿನ ಕಾರಣದಿಂದಲೇ ಅವರಿಗೆ ಸಾಮಾಜಿಕ ಸ್ಥಾನಮಾನ, ಶೈಕ್ಷಣಿಕ ಸಂಪತ್ತು ಎಲ್ಲವೂ ಪ್ರಾಪ್ತಿಯಾಗಿದ್ದಿತು. ಆದರೆ ಆ ಪವಿತ್ರ ಜೀವಕ್ಕೆ, ಸಮಾಧಾನವಿರಲಿಲ್ಲ. ಕೇವಲ ಹುಟ್ಟಿನ ಕಾರಣದಿಂದಲೇ ತಮಗೆ ಅನಾಯಾಸವಾಗಿ ಸಿಕ್ಕ ಸುಖ-ಸೌಲಭ್ಯ-ಹಕ್ಕುಗಳು ಈ ದೇಶದ ಪ್ರತಿಯೊಂದು ವ್ಯಕ್ತಿಗೂ ವರ್ಣಜಾತಿ ಮತಪಂಥ ಭೇದವಿಲ್ಲದೆ, ಎಲ್ಲರಿಗೂ ಸಿಗುವಂತೆ ಆಗಬೇಕು ಎಂಬುದೇ ಅವರ ಕಳಕಳಿಯಾಗಿ, ಅವರ ಹೋರಾಟದ ಧ್ಯೇಯವಾಯಿತು. ಶೂದ್ರ-ದಲಿತರ ನೋವು ಏನೆಂಬುದು ಅವರ ಪ್ರತ್ಯಕ್ಷ ಅನುಭವಕ್ಕೆ ಬರಲು ಆಸ್ಪದವಿರದಿದ್ದರೂ, ಭಾವನಾತ್ಮಕವಾಗಿ ಅವರು ಅನುಭವಿಸಿ ಕಣ್ಣೀರು ಸುರಿಸಿದರು. ನೊಂದವರ, ತುಳಿತಕ್ಕೆ ಒಳಗಾದವರ ಪರವಾಗಿ ಹೋರಾಟಕ್ಕೆ ನಿಂತರು. ಈ ಸಮಸ್ಯೆಯನ್ನು ಕೈಗೆ

ಎತ್ತಿಕೊಳ್ಳದೆ ಇದ್ದರೆ ಪ್ರಚಂಡಮತಿಯಾದ ಬಸವಣ್ಣನವರು ಸುದೀರ್ಘಕಾಲ ಪ್ರಧಾನಿಯಾಗಿ, ಕುಟುಂಬ ಪರಿವಾರದೊಡನೆ, ಬಿಜ್ಜಳ ಮಹಾರಾಜನೊಡನೆ ಸುಖವಾಗಿ ಆಮೋದ-ಸರಸ ಸಲ್ಲಾಪಗಳಲ್ಲಿ ಕಾಲಕಳೆಯಬಹುದಿತ್ತು. ಆದರೆ ಇಂಥ ಸ್ವಾರ್ಥಪರ ನಿರ್ಜೀವ ಸುಖ ಅವರಿಗೆ ಬೇಡವಾಯಿತು. ಅದಕ್ಕಾಗಿ ಜಡಸಂಪ್ರದಾಯದ ಕೆಂಜಗದ ಗೂಡಿನಂತಿದ್ದ ಜಾತಿ ವ್ಯವಸ್ಥೆಯ ವಿರುದ್ಧವಾಗಿ ಕೈಹಾಕಿದರು. ಮೇಲ್ವರ್ಣೀಯರಾಗಿ ಅವರು ಹುಟ್ಟಿ ಸಮಾಜ ಸುಧಾರಣೆಗೆ ಕೈಹಾಕಿದರೆ ಯಾರೇ ಆಗಲಿ ಎರಡು ರೀತಿಯ ಬಾಧೆಯನ್ನು ಅನುಭವಿಸಬೇಕಾಗುತ್ತದೆ. ಒಂದು ತಾವು ಹುಟ್ಟಿದ ವ್ಯವಸ್ಥೆಯ ಕಡು ಕೋಪಕ್ಕೆ ಈಡಾಗಬೇಕಾಗುತ್ತದೆ. ಇನ್ನೊಂದು, ಯಾರ ಪರವಾಗಿ ಹೋರಾಡುವರೋ ಅವರಲ್ಲಿ ತಿಳುವಳಿಕೆ, ಜಾಗೃತಿ ಮೂಡಿಸುವಲ್ಲಿ ಅಪಾರಶ್ರಮ ಪಡುವುದಲ್ಲದೆ ಆರಂಭದಲ್ಲಿ ಅಪನಂಬಿಕೆ ಎದುರಿಸಬೇಕಾಗುತ್ತದೆ. ಅದನ್ನೇ ಮೇಲಿನ ವಚನದಲ್ಲಿ ಹೃದಯಂಗಮವಾಗಿ ಅವರು ತೋಡಿಕೊಳ್ಳುತ್ತಾರೆ.

"ದೇವಾ, ನಾನು ಉತ್ತಮ ಕುಲದಲ್ಲಿ ಹುಟ್ಟಿದುದೇ ಒಂದು ಆತಂಕವಾಯಿತಲ್ಲ ಇದು ನನಗೆ ಕಷ್ಟತನದ ಹೊರೆ. ಏಕೆಂದರೆ ನಾನಾಗಿ ಅವರ (ನೊಂದವರು–ತುಳಿತಕ್ಕೊಳಗಾದವರು) ಬಳಿಗೆ ಹೋದರೂ ಅವರು ನನ್ನನ್ನು ನಂಬಲಿಕ್ಕಿಲ್ಲ; ಆದರಿಸಲಿಕ್ಕಿಲ್ಲ. ಕಕ್ಕಯ್ಯ ನನಗೆ ಉಣಲಿಕ್ಕಲಿಕ್ಕಿಲ್ಲ, ದಾಸಯ್ಯ ಮಜ್ಜಿಗೆ ಕೊಡಲು ಇಷ್ಟಪಡಲಿಕ್ಕಿಲ್ಲ. ಚನ್ನಯ್ಯನು 'ಈ ದೊಡ್ಡವರ ಸಹವಾಸ ಸಾಕಪ್ಪಾ! ಇವರು ನಮ್ಮ ಬಳಿ ಬಂದು ಏನಾದರೊಂದು ಸಮಸ್ಯೆ ಉಂಟು ಮಾಡುವರು. ನಮ್ಮ ಪಾಡಿಗೆ ನಾವು ಹೇಗೋ ಇರುತ್ತೇವೆ. ಇರಲು ಬಿಟ್ಟರೆ ಸಾಕು.' ಎಂದು ಸಂದೇಹಿಸಬಹುದು. ದೇವಾ, ಎಂಥಾ ಸಂಕಟವಿದು!" ಈ ವಚನದಲ್ಲಿ ಅಂತರಂಗದ ನೋವು ಮಾರ್ಮಿಕವಾಗಿ ಹರಿದಿದೆ.

ಈ ತ್ಯಾಗವನ್ನು, ಕಳಕಳಿಯನ್ನು ಅರ್ಥಮಾಡಿಕೊಂಡರೆಂದೇ ಅಂದು ಮಡಿವಾಳ ಮಾಚಯ್ಯ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ ಮುಂತಾದವರು ಬಸವಣ್ಣನವರ ಸುತ್ತಲೂ ನೆರೆದರು, ಯಾವ ತ್ಯಾಗಕ್ಕೂ ಅಣಿಯಾದರು. ಮಧುವರಸರಂತಹ ಬ್ರಾಹ್ಮಣರೂ ಹೆಗಲು ಕೊಡಲು ಮುಂದಾದರು. ಆದರೆ ಇಂದು ಕೆಲವರ ದೃಷ್ಟಿಯಲ್ಲಿ ಬಸವಣ್ಣನವರ ಕಳಕಳಿ ತ್ಯಾಗಕ್ಕೆ ಯಾವ ಬೆಲೆಯೂ ಇಲ್ಲ, ಪುರೋಹಿತಶಾಹಿ ಜನರು ವಿರೋಧಿಸುವುದು ಸ್ವಾಭಾವಿಕ. ಆದರೆ ಯಾರ ಸಲುವಾಗಿ ಬಸವಣ್ಣನವರು ಶ್ರಮಿಸಿದರೋ ಅವರು ಸಹಿತ ಅರ್ಥಮಾಡಿಕೊಳ್ಳದೆ, ನಿಂದಿಸುವುದನ್ನು, ದೂಷಿಸುವುದನ್ನು, ಅವರ ಪ್ರಾಮಾಣಿಕ ಪ್ರಯತ್ನವನ್ನು ಸಂದೇಹಿಸುವುದನ್ನು ಕಾಣಬಹುದಾಗಿದೆ. ಇದೀಗ ಗಾಂಧೀಜಿಯವರ ಸರತಿ. ಅವರ ಅವಹೇಳನ, ದೂಷಣೆ ಆರಂಭವಾಗಿದೆ. ಒಂದು ಕಡೆ ಮತಾಂಧ ಹಿಂದುಗಳ ಗುಂಡಿನ ದಾಳಿಗೆ ತುತ್ತಾದರೆ,

ಬಾಪೂಜಿ ತೀವ್ರವಾದಿ ಜಾತ್ಯತೀತರ ಗುಂಡಿನ ದಾಳಿಗೆ ಇನ್ನೊಂದು ಕಡೆಯಿಂದ ತುತ್ತಾಗುತ್ತಿದ್ದಾರೆ. ಇದು ಈ ದೇಶಕ್ಕೆ–ಈ ದೇಶದ ಪರಂಪರೆಗೆ ಗೌರವ ತರುವ ಸಂಗತಿಯೆ?

ತಾಯಿತಂದೆ ಅತ್ಯಂತ ಪ್ರೀತಿ–ವಾತ್ಸಲ್ಯ, ತ್ಯಾಗ–ಪರಿಶ್ರಮಗಳಿಂದ ಬಡತನ ಸೋಸಿಯೂ ಮಕ್ಕಳನ್ನು ಮುಂದೆ ತಂದು ದೊಡ್ಡ ಅಧಿಕಾರಿಗಳನ್ನಾಗಿ ಮಾಡುವರೆಂದುಕೊಳ್ಳೋಣ, ಆಗ ಮುಪ್ಪಾದ ಹೆತ್ತವರನ್ನು ಮಕ್ಕಳು ಉದಾಸೀನ ಮಾಡುವರೆಂದುಕೊಳ್ಳೋಣ. ಯಾರಾದರು, "ಹೀಗೆ ಮಾಡಬಾರದಪ್ಪಾ, ಅವರು ಅದೆಷ್ಟು ಕಷ್ಟಪಟ್ಟು ನಿಮ್ಮನ್ನು ಸಾಕಿದರೆಂಬುದು ನಮಗೆ ಗೊತ್ತು." ಎಂದು ಬುದ್ಧಿ ಹೇಳಿದರೆ ಆಗ ಮಕ್ಕಳು, "ಯಾರ ಇಚ್ಛೆಗೆ ಮಾಡಿದರು. ಮಕ್ಕಳನ್ನು ಹೆತ್ತ ತಪ್ಪಿಗೆ ಮಾಡಿದ್ದಾರೆ. ಅದಕ್ಕೆ ನಾವು ಕೃತಜ್ಞರಾಗಿರುವುದೇನು ಅಗತ್ಯ?" ಎಂದರೆ ಯಾರೇನು ಉತ್ತರಿಸಬಲ್ಲರು? ಕೃತಜ್ಞತೆ ಎಂಬುದು ಉದಾತ್ತ ದೈವೀಗುಣ.

ಗುರು ಬಸವಣ್ಣನವರನ್ನಾಗಲೀ, ಮಹಾತ್ಮಾ ಗಾಂಧೀಜಿಯವರನ್ನಾಗಲೀ ದ್ವೇಷಿಸುವವರು ಈ ವಿಚಾರವನ್ನು ಅರಿತುಕೊಳ್ಳಬೇಕು. ಅಂದು ತ್ಯಾಗ–ಸೇವೆಗಳ ಪ್ರತೀಕವಾಗಿ ನಿಂತ ಇಂಥ ಮಹಾನುಭಾವರನ್ನು ಖಳನಾಯಕರೆಂಬಂತೆ ದೂಷಿಸಬಾರದು. ಇಂದು ಹಿಂದೂಸ್ಥಾನ ಎನ್ನಿಸಿಕೊಂಡ ಭಾರತವು ಕ್ಷುಲ್ಲಕ ಮನಸ್ಸಿನ ಅಲ್ಪಾಕಾಂಕ್ಷೆಯ ರಾಜಕಾರಣಿಗಳಿಂದಾಗಿ ಹೊತ್ತಿ ಉರಿಯುವ ಮನೆಯಾಗುತ್ತಿದೆ. 'ಕೂಡಿ ಬಾಳೋಣ' ಎಂಬ ಸೂತ್ರವನ್ನು ಬಿಟ್ಟು, 'ಒಡೆದು ಆಳೋಣ' ಎಂಬ ಸೂತ್ರಕ್ಕೆ ಬದ್ಧರಾಗುತ್ತಿದ್ದಾರೆ. ಬ್ರಿಟಿಷರ ಒಡೆದು ಆಳುವ ನೀತಿಯನ್ನು ಚೆನ್ನಾಗಿ ಪೋಷಿಸುತ್ತಿದ್ದಾರೆ. ಇವರಿಗೆ ದೇಶದ ಸಮಗ್ರತೆ, ಸಮೃದ್ಧಿಯ ಕಡೆಗೆ ಲಕ್ಷ್ಯವಿಲ್ಲ. ಮನೆ ಹೊತ್ತಿ ಉರಿಯುವಾಗ ತಾವು ಎಷ್ಟೆಷ್ಟು ಗಳು ಹಿರಿದುಕೊಳ್ಳಬಹುದು, ಯಾವಾವ ಸಾಮಾನು ಲೂಟಿ ಮಾಡಬಹುದು ಎಂಬ ಘಾತಕನಂತೆ ವಿಚಾರಮಾಡುತ್ತಿದ್ದಾರೆ. "ಹೇಗಾದರೂ ಅಧಿಕಾರ ಪಡೆಯೋಣ, ಪಡೆದ ಅಧಿಕಾರಕ್ಕೆ ಕಚ್ಚಿಕೊಳ್ಳೋಣ; ಅಧಿಕಾರ ಕೈ ಬಿಡದಂತೆ ಮಾಡಲು ಯಾವ ಕೀಳುಮಟ್ಟದ ತಂತ್ರ ಬೇಕಾದರೂ ಅನುಸರಿಸೋಣ" ಎಂಬುದೇ ಅನೇಕರ ರಾಜಕಾರಣದ ಸೂತ್ರವಾಗುತ್ತಿದೆ. ಬಹುಪಾಲು ಜನರಿಗೆ ಸಮಗ್ರತೆ, ಸರ್ವೋದಯಗಳ ಬಗ್ಗೆ ಕಳಕಳಿಯೇ ಇಲ್ಲ.

ಈ ದಿಶೆಯಲ್ಲಿ ಇಂದು ಪ್ರತಿಯೊಬ್ಬ ಪ್ರಜೆಯೂ ಚಿಂತನಶೀಲನಾಗಬೇಕಾಗಿದೆ. ಗುರಿಯನ್ನು ಗುರುತಿಸಿಕೊಳ್ಳಬೇಕಾಗಿದೆ. ನಿಶೆ ಎಂಬ ತತ್ತ್ವಜ್ಞಾನಿ ಹೇಳುವಂತೆ A person who knows about why of life also knows how of life. ಗುರಿಯನ್ನು ಗುರುತಿಸಿ ಕೊಳ್ಳಲಾರದವನಿಗೆ ಮಾರ್ಗವು ಎಂದೂ ನಿಚ್ಚಳವಾಗದು. ಸಮುದ್ರವನ್ನು ಸೇರುವ ಗುರಿಯನ್ನು ಹೊತ್ತ ನದಿ ಹರಿಯತೊಡಗಿದಂತೆ ಅದಕ್ಕೊಂದು ದಾರಿ ತನ್ನಿಂದ ತಾನೇ ನಿರ್ಮಾಣವಾಗುತ್ತದೆ. ಸ್ವರಾಜ್ಯವೇನೋ ಸಿಕ್ಕಿದೆ; ಇದು ಸುರಾಜ್ಯವಾಗಬೇಕಾದರೆ ಪೂಜ್ಯ ಬಾಪೂಜಿಯವರು ಮಾರ್ಗದರ್ಶಕರಾಗಿ, ಅವರ ಬದುಕೊಂದು ಮಾದರಿಯಾಗಿ, ಅವರ ಸಂದೇಶಗಳು ದಾರಿದೀಪಗಳಾಗುವವೆಂಬುದರಲ್ಲಿ ಸಂದೇಹವಿಲ್ಲ.

★ ★



ನಾನು ಶಿಖರವನ್ನೇರಿದಾಗ

[ಪ್ರತ್ಯಕ್ಷಾನುಭವ]

ಲೇಖನ : ಅನ್ನಪೂರ್ಣ ವೀರಪ್ಪ
ಕುರುವಿನಕೊಪ್ಪ, ಮೈಸೂರು.

ಭಾರತ ಯೂತ ಹಾಸ್ಟೆಲ್ ಸಂಸ್ಥೆ (ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ) ಪ್ರತಿ ವರ್ಷದ ಮೇ–ಜೂನ್ ತಿಂಗಳಲ್ಲಿ ಹಿಮಾಚಲ ಪ್ರದೇಶದ ಕುಲು–ಮನಾಲಿ ಕಣವೆಯಲ್ಲಿ ರಾಷ್ಟ್ರೀಯ ಹಿಮಾಲಯ ಪರ್ವತಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ಈ ಕಾರ್ಯಕ್ರಮದ ಉದ್ದೇಶ ಕೆಳಕಂಡಂತಿದೆ.

1) ಪ್ರಕೃತಿಯ ಸುಂದರ ತಾಣ ಎನಿಸಿರುವ ಹಿಮಾಲಯ ಪರ್ವತಗಳ ಬಗ್ಗೆ ಯುವಕ ಯುವತಿಯರಲ್ಲಿ ಪವಿತ್ರ ಪ್ರೇಮ ಮೂಡಿಸುವುದು,
2) ಹಿಮಾಲಯದ ಹೊಸ ಹೊಸ ಮಾರ್ಗಗಳಲ್ಲಿ ಯುವಕ, ಯುವತಿಯರು ಪರ್ವತಾರೋಹಣದಲ್ಲಿ ಭಾಗವಹಿಸುವಂತೆ ಮಾಡುವುದು,
3) ಶಿಬಿರಗಳನ್ನು ವ್ಯವಸ್ಥೆಗೊಳಿಸುವ ವಿಧಿ ವಿಧಾನಗಳ ಬಗ್ಗೆ ಅರಿವು ಮೂಡಿ-ಸುವುದು,
4) ಉತ್ತಮ ನಾಯಕತ್ವದ ಲಕ್ಷಣಗಳನ್ನು ಯುವಕ–ಯುವತಿಯರಲ್ಲಿ ಬೆಳೆಸುವುದು.
5) ಪರಿಸರ ಪ್ರಜ್ಞೆ ಮೂಡಿಸುವುದು.
6) ಸಾಹಸ ಪ್ರವೃತ್ತಿ ಬೆಳೆಸುವುದು.
7) ಮುಖ್ಯವಾಗಿ ದೇಶದ ನಾನಾ ಭಾಗಗಳಿಂದ ಬರುವ ಶಿಬಿರಾರ್ಥಿಗಳನ್ನು ಒಂದೆಡೆ ಸೇರಿಸಿ ರಾಷ್ಟ್ರೀಯ ಸಮಗ್ರತಾ ಭಾವನೆ ಮೂಡಿಸುವುದು.

ಯೂತ್ ಹಾಸ್ಟೆಲನ ಸದಸ್ಯತ್ವ ಪಡೆದಿರುವ ಎಲ್ಲರೂ ಈ ಪರ್ವತಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು. ಮೈಸೂರಿನ ಗಂಗೋತ್ರಿ ಘಟಕದ ಯೂತ್ ಹಾಸ್ಟೆಲ್ ಸದಸ್ಯತ್ವ ಹೊಂದಿರುವ (ಕಾರ್ಯಕಾರಿ ಸಮಿತಿಯ ಸದಸ್ಯ ನಾನು) ಕಳೆದ ಮೇನಲ್ಲಿ 1994 ರಲ್ಲಿ ಹಿಮಾಲಯ ಪರ್ವತಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಪರ್ವತಾರೋಹಣವನ್ನು ಯಶಸ್ವಿಯಾಗಿ ಪೂರೈಸಿದೆ,

ನಾನು ಪರ್ವತಾರೋಹಣಕ್ಕೆ ಹೋಗುವ ಮೊದಲು ಪ್ರತಿ ಭಾನುವಾರ ಸ್ಥಳೀಯ ಬಸವ ಮಂದಿರಕ್ಕೆ ಹೋಗಿ ಅಲ್ಲಿ ಭಕ್ತಿ ಭಂಡಾರಿ ಬಸವಣ್ಣನವರಿಗೆ ನಮಸ್ಕರಿಸಿ ಅಲ್ಲಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅಭ್ಯಾಸ ಹೊಂದಿಕೊಂಡಿರುತ್ತೇನೆ. ಹಿಮಾಲಯ ಪರ್ವತಾರೋಹಣ ಮಾಡುವ ಹಾಗೂ ಹಿಮಾಲಯ ಪರ್ವತದ 13,800–00 ಅಡಿ ಸರಪಾರ್ಪಸ ಮಾರ್ಗ ಎಂಬ ಹಿಮದ ಬೆಟ್ಟದ ಮೇಲೆ ಜಾತಿ, ವರ್ಗ, ವರ್ಣ, ರಹಿತವಾದ ಹಾಗೂ ಶಾಂತಿಯ ಸಂಕೇತವಾದ ಪೂಜ್ಯ ತಂದೆಯವರ ಧ್ವಜವನ್ನು ಹಾರಿಸುವ ನನ್ನ ಮಹಾದಾಶೆಯನ್ನು ಬಸವ ಮಂದಿರದ ಬಸವಣ್ಣನವರ ಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಶ್ರೀ ಪೂಜ್ಯ ಶಿವಶರಣೆ ಶ್ರೀಮತಿ ಸರೋಜಮ್ಮ ನಾಗರಾಜರವರಿಗೆ ಕೇಳಿದಾಗ ಅವರು ಬಹಳ ಸಂತೋಷಪಟ್ಟು, ಹೆಮ್ಮೆಯಿಂದ ನನಗೆ ಬಸವಣ್ಣನವರ ಧ್ವಜವನ್ನು ಮತ್ತು ಬಸವಣ್ಣನವರ ಫೋಟೋವನ್ನು ನೀಡಿ ನನ್ನ ಪರ್ವತಾರೋಹಣವು ಸುಗಮವಾಗಿ ಮುಗಿಸಿ ಬಸವಣ್ಣನವರ ಕೀರ್ತಿ ಬೆಳಗಿಸಿ ಧ್ವಜ ಹಾರಿಸಿ ಬರಲೆಂದು ಹಾರೈಸಿದ್ದರು ಹಾಗೂ ಅಲ್ಲಿಂದ ಶರಣ ಶರಣೆಯರು ಕೂಡಾ ಪ್ರೋತ್ಸಾಹ ಕೊಟ್ಟು ಹಾರೈಸಿದ್ದರು. ಬಸವಣ್ಣನವರ ಆಶೀರ್ವಾದವೇ ನನ್ನ ಈ 43ನೇ ವಯಸ್ಸಿನ ಪರ್ವತಾರೋಹಣಕ್ಕೆ ಪ್ರೇರಣವಾಯಿತು ಎಂದು ಹೇಳಿದರೆ ಅತಿಶಯುಕ್ತಿ ಎನಿಸುವುದಿಲ್ಲ.

ನಾನು ರೂಪಿಸಿಕೊಂಡ ಕಾರ್ಯಕ್ರಮದಂತೆ ಸರಪಾಸ ಪಾಸನ (ಸರಪಾಸ್ ಶಿಖರಾರೋಹಣ ಮಾರ್ಗ) ಭೂಂತರ ಮತ್ತು ಮಣೀಕರಣ ಮತ್ತು ಮಧ್ಯದಲ್ಲಿರುವ ಪಾರ್ವತಿ ನದಿ ದಡದಲ್ಲಿ ಇರುವ ಕಸೋಲ ಎಂಬ ಪುಟ್ಟ ಗ್ರಾಮದಲ್ಲಿ (5000 ಅಡಿ ಮೇಲೆ) ವ್ಯವಸ್ಥೆಗೊಳಿಸಿದ್ದ ಮೂಲ ಶಿಬಿರಕ್ಕೆ (ಬೇಸ್ ಕ್ಯಾಂಪ್) ದಿನಾಂಕ : 15–5–1994 ರಂದು ತೆರಳಿ ನಾನು ಹಾಗೂ ನನ್ನ ಗೆಳತಿ ಗೋಪಮ್ಮ ಇಬ್ಬರು ವರದಿ ಮಾಡಿಕೊಂಡೆವು. ಆ ದಿನ ಪೂರ್ಣ ವಿಶ್ರಾಂತಿ ಇತ್ತು. ಶಿಬಿರದ ವ್ಯವಸ್ಥೆ ದೈನಂದಿನ ಕಾರ್ಯಕ್ರಮ ಹಾಗೂ ಉನ್ನತ ಪರ್ವತಾರೋಹಣದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ದೇಶದ ನಾನಾ ಭಾಗಗಳಿಂದ ಬಂದಿದ್ದ ಮೂಲ ಶಿಬಿರದಲ್ಲಿನ ಶಿಬಿರಾರ್ಥಿಗಳ ಪರಿಚಯ ಮಾಡಿಕೊಂಡೇ ಆಗಷ್ಟೆ ತಾನೇ ಆರಂಭವಾಗಿದ್ದ ಶಿಬಿರದ ವ್ಯವಸ್ಥೆಗಳು ಅಚ್ಚುಕಟ್ಟಾಗಿದ್ದವು.

ವರದಿ ಮಾಡಿಕೊಂಡ ಮರುದಿನ (15–5–1994) 16 ಮತ್ತು 17 ತಾರೀಖಿನಂದು ಮೂಲ ಶಿಬಿರದ ಅಕ್ಕಪಕ್ಕದಲ್ಲಿ ಪರ್ವತಾರೋಹಣ ಹಾಗೂ ನದಿ ದಾಟುವಿಕೆ ಮೊದಲಾದ ಸಾಹಸ ಕಾರ್ಯಕ್ರಮಗಳ ತರಬೇತಿಯಲ್ಲಿ ಪಾಲ್ಗೊಂಡೆ. ಈ ತರಬೇತಿಯು ಉನ್ನತ ಪರ್ವತಾರೋಹಣಕ್ಕೆ ಸಹಾಯಕವಾಗಿತ್ತು. ನಮ್ಮದೆ ಮೊದಲನೆ ಬ್ಯಾಚ್ ಆದುದರಿಂದ ನಮ್ಮಲ್ಲಿ ಒಟ್ಟು 67 ಜನರು ಇದ್ದೆವು. 16 ಜನ ಕರ್ನಾಟಕದವರು, 14

ಮಹಿಳೆಯರು, ನಾವೇ ಆರಿಸಿಕೊಂಡದ್ದು ಸರಪಾಸ ಶಿಖರಾರೋಹಣ. ಮಾರ್ಗದಲ್ಲಿ ಒಟ್ಟು ನೂರ ನಾಲ್ಕು ಕಿ. ಮೀ. ಅಂತರವನ್ನು 9 ದಿನದಲ್ಲಿ ಕ್ಷಮಿಸುವ ಹಾಗೂ 13, 800 ಅಡಿ ಎತ್ತರದಲ್ಲಿರುವ ಸರಪಾಸ ಶಿಖರವನ್ನು ಏರುವ ಗುರಿ ನಮ್ಮ ಪರ್ವತಾರೋಹಣದ ಕಾರ್ಯಕ್ರಮವಾಗಿತ್ತು. ಪರ್ವತಾರೋಹಣದ ಅವಧಿಯ 9 ದಿನಗಳಿಗೆ ಅವಶ್ಯವಿರುವ ಬಟ್ಟೆ ಹಾಗೂ ನಿತ್ಯಉಪಯೋಗಿ ವಸ್ತುಗಳನ್ನು ಶಿಬಿರದಲ್ಲಿ ನೀಡಿದ ಪರ್ವತಾರೋಹಣದ ಚೀಲ (ರಕ್ಷಾಸ್ನಾತ) ದಲ್ಲಿ ತುಂಬಿಕೊಂಡು ದಿ : : 18–5–94 ರಂದು ನಮ್ಮದೇ ಮೊದಲನೆ ಬ್ಯಾಚ್ ಹಾಗಿರುವುದರಿಂದ ಎಲ್ಲರೂ ತುಂಬಾ ಉತ್ಸಾಹದಿಂದ ಬೀಳ್ಕೊಟ್ಟರು. ಪೂಜ್ಯ ಬಸವ ತಂದೆಯುವರನ್ನು ಸ್ಮರಿಸಿ ಧೈರ್ಯಉತ್ಸಾಹದಿಂದ ನಮ್ಮ ಉನ್ನತ ಪರ್ವತಾರೋಹಣ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದನ್ನು ಪರ್ವತಾರೋಹಣದ ಅವಧಿಯಲ್ಲಿ ತಂಗಿದ್ದ ಶಿಬಿರಗಳ ವಿವರ ಕ್ರಮಿಸಿದ ಅಂತರ ಹಾಗೂ ಏರಿದ ಎತ್ತರ ಈ ಕೆಳಕಂಡಂತಿದೆ.

1.	18–5–1994	ಕಸೋಲ–ಗ್ರಹಣ ಶಿಬಿರ 10. ಕಿ. ಮೀ. 7, 500 ಎತ್ತರ.
2.	19–5.94	ಗ್ರಹಣ–ಮಿಂದಾಜ ಶಿಬಿರ 9, ಕಿ. ಮೀ 9, 000 ಅಡಿ ಎತ್ತರ.
3.	20–5–94	ಮಿಂದಾಜ–ನಗರು ಶಿಬಿರ 7 ಕಿ. ಮೀ. 11, 000 ಅಡಿ ಎತ್ತರ.
4.	21–5–94	ನಗರು–ಬೇಸಕರಿ ಶಿಬಿರ 9, 000 ಅಡಿ ಎತ್ತರ. ಇಲ್ಲಿ ನಾಲ್ಕು ಅಡಿ ಬರ್ಫ್ ಅಗೆದು ತೆಗೆದು ನಮಗೆಲ್ಲಾ ಇಳಿದುಕೊಳ್ಳಲು ಟೆಂಟ್ ಹಾಕಿದ್ದರು. ಇದಕ್ಕಿಂತ ಮೊದಲೇ ಒಂದುವರೆ ಕಿ. ಮೀ. ಬರ್ಫ್‌ನಲ್ಲಿ ಬಂದು ಬೇಸಕರಿ ಶಿಬಿರವನ್ನು ತಲುಪಿದ್ದೇವೆ.
5.	22–5–94	ಬೇಸಕರಿ ಪಾಸ್ ಮತ್ತು ಸರಪಾಸ 16 ಕಿ. ಮೀ, 13, 800 ಅಡಿ.

ಎತ್ತರ ಮಾರ್ಗಮಧ್ಯೆ ಸುಮಾರು 16, ಕಿ. ಮೀ, ಅಂತರವನ್ನು ಹಿಮ ಪರ್ವತದಲ್ಲಿ ಕ್ರಮಿಸಿದ್ದೆವು.

ಎರಡೂ ಹಿಮ ಪರ್ವತಗಳನ್ನು ಹತ್ತಿ ಇಳಿಯುವಾಗ ಜಾರು ಬಂಡೆಯ ಮೇಲೆ ಜಾರಿ ಕೆಳಗೆ ಜಾರಿದೆವು. ನಮ್ಮ ಪರ್ವತರೋಹಣದ ಕಾರ್ಯಕ್ರಮದ ಅಂತಿಮ ಗುರಿಯಾದ 13, 800 ಅಡಿ ಎತ್ತರದ ಸರಪಾಸ ಹಿಮಶಿಖರವನ್ನು ಇಂದು ಏರಿದೆವು.

(22–5–95) ಪರ್ವತಾರೋಹಣದ ಕಾರ್ಯಕ್ರಮದಲ್ಲೇ ಅಲ್ಲದೇ ತಮ್ಮ ಜೀವನದಲ್ಲೇ ಮಹತ್ ಸಾಧನೆಯ ದಿನ ಇದಾಗಿತ್ತು. ಸರಪಾಸ್ ಶಿಖರದಲ್ಲಿ ಶ್ರೀ ಜಗದ್ಗುರು ಹಾಗೂ ನನ್ನ ಪೂಜ್ಯ ಕ್ರಾಂತಿಪುರುಷ ಬಸವಣ್ಣನವರ ಜಾತಿವರ್ಗ, ವರ್ಣರಹಿತವಾದ ಹಾಗೂ ಶಾಂತಿಯ ಸಂಕೇತವಾದ ವಿಶ್ವಮಾನವ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಸಾರ್ಥಕಪಡಿಸಿಕೊಂಡಂತಹ ಬಸವಣ್ಣನವರ ಧ್ವಜವನ್ನು ಹಾರಿಸಿದೆ. ಆಗ ನನಗೆ ನನ್ನ ಜನ್ಮ ಸಾರ್ಥಕವಾದಂತೆನಿಸಿ, ಇನ್ನೂ ಎತ್ತರ, ಎತ್ತರಕ್ಕೆ ಈ ಧ್ವಜವನ್ನು ಹಾರಿಸಿ ಬರುವ ಶಕ್ತಿ ಸಾಹಸವನ್ನು ಕೊಡಲಿ ಎಂದು ಮನಸ್‌ಪೂರ್ತಿ ಕೈ ಮುಗಿದು ಬೇಡಿಕೊಂಡೆ. ಎಲ್ಲಾ ಧರ್ಮಗಳು ಒಂದೇ ವಿಶ್ವ ಮಾನವ ಕಲ್ಯಾಣಕ್ಕೆ ಶ್ರಮಿಸಿದ ಬಸವಣ್ಣನವರ ಕೀರ್ತಿ ಅಜರಾಮರವಾಗಲಿ ಎಂದು ಪ್ರಾರ್ಥಿಸಿ ಛಾಯಾ ಚಿತ್ರ ತೆಗೆಸಿಕೊಂಡೆನು. ನಂತರ ನನ್ನ ಜೊತೆಗೆ ಬಂದ ನನ್ನ ಗೆಳತಿ ಗೋಪಮ್ಮ ನಾನೂ ಇಬ್ಬರೂ ಸೇರಿ ಮತ್ತೊಂದು ಬಸವಣ್ಣನವರ ಧ್ವಜ ಹಾಗೂ ಫೋಟೋ ಹಿಡಿದು ಛಾಯಾಚಿತ್ರ ತೆಗೆಸಿಕೊಂಡೆವು, ಹಿಮದಲ್ಲಿ ಜಾರುತ್ತಾ ಕುಣಿಯುತ್ತಾ ಕುಪ್ಪಳಿಸಿದೆವು. ತುಂಬಾ ಆನಂದದಿಂದ ಪುಲ್ಗಾ ಶಿಬಿರಕ್ಕೆ ಬಂದು ಸೇರಿದೆವು.

6.	22–5–94	ಸರಪಾಸ– ಪುಲ್ಗಾ ಶಿಬಿರ 12 ಕಿ. ಮೀ 7, 000 ಅಡಿ ಎತ್ತರ
7.	23–5–94 24–5–94	ಪುಲ್ಗಾ–ಕಿರಗಂಗಾ ಶಿಬಿರ 14 ಕಿ. ಮೀ 9, 000 ಅಡಿ ಎತ್ತರ

ಕೀರಗಂಗಾ ಒಂದು ಪುಣ್ಯಕ್ಷೇತ್ರ. ಇಲ್ಲಿ ನಮಗೆ ಇಂದು ಸಂಪೂರ್ಣ ವಿಶ್ರಾಂತಿ ದಿನ ಕೀರಗಂಗಾದ **ವಿಶೇಷ.** ಈ ಜಾಗದಲ್ಲಿ ಒಮ್ಮೆ ಪರಶುರಾಮನು ಬಂದಾಗ ಪಾರ್ವತಿಯು ಇಲ್ಲಿ ಹರಿಯುತ್ತಿದ್ದ ಹಾಲ್ಗಂಗೆಯನ್ನು ಉಪಯೋಗಿಸಿ ಕೀರನ್ನು ಮಾಡಿಕೊಟ್ಟಳಂತೆ. ಆದು ಅಕಸ್ಮಾತ್ ಆಗಿ ಕೈ ಜಾರಿ ಕೆಳಗೆ ಬಿದ್ದಾಗ ಅವರು ಕೋಪದಿಂದ ಗಂಗೆಗೆ ಶಾಪಕೊಟ್ಟರಂತೆ "ನೀನು ಕಲಿಯುಗದಲ್ಲಿಯೂ ಇಲ್ಲಿಯೇ ಬಿಸಿನೀರಿನಿಂದ ಕೂಡಿ ಹರಿಯುವಂತಾಗಲಿ ಎಂದು". ಆದ್ದರಿಂದ ಈ ಜಾಗವನ್ನು ಕೀರಿನಿಂದ ಬಂದ ಶಾಪದಿಂದ ಕೀರಗಂಗ ಎಂದೇ ಹೆಸರು. ಇಲ್ಲಿ ಬಿಸಿನೀರಿನಲ್ಲಿ ಸ್ನಾನಮಾಡಲು ಗಂಡಸರಿಗೆ ಹಾಗೂ ಹೆಂಗಸರಿಗೆ ಬೇರೆ ಬೇರೆ ಕೊಳಗಳಿವೆ. ಪರಶುರಾಮರ ದೇವಸ್ಥಾನವಿದೆ.

8.	25–5–94	ಕಿರಗಂಗಾ–ಟಾಂಕ ಶಿಬಿರ 15 ಕಿ, ಮೀ–6,000 ಅಡಿ ಎತ್ತರ.
9.	26–5–94	ಟಾಂಕ–ಮಣಿಕರಣ ಬೇಸಕ್ಯಾಂಪಕಸೂಬ ಶಿಬಿರ 12 ಕಿ, ಮೀ 5,200 ಅಡಿ ಎತ್ತರ.

ಟಾಂಕದಿಂದ 12 ಕಿ. ಮೀ ಕ್ರಮಿಸುವಾಗ ಮಧ್ಯದಲ್ಲಿ ಮಣಿಕರದಲ್ಲಿ ದೇವರ ಸೃಷ್ಟಿಯಿಂದ ಬಿಸಿನೀರಿನ ಬುಗ್ಗೆಗಳನ್ನು ನೋಡಿದೆವು. ಇಲ್ಲಿ ಪಾರ್ವತಿ ನದಿ ರಭಸದಿಂದ ಹರಿಯುತ್ತಿದೆ. ಇದರ ದಡದಲ್ಲಿ ಗುರುನಾನಕರ ದೇವಸ್ಥಾನವಿದೆ. ಇಲ್ಲಿ ಬಂದ ಯಾತ್ರಿಕರಿಗೆ ಊಟ ಹಾಗೂ ಟೀಯನ್ನು ಉಚಿತವಾಗಿ ಬೇಸರವಿಲ್ಲದೇ ನಗುಮುಖದಿಂದ ಕೊಡುತ್ತಾರೆ. ಇಲ್ಲಿ ಬಿಸಿನೀರಿನ ಬುಗ್ಗೆಯಿಂದ ಸಂಪರ್ಕ ತೆಗೆದುಕೊಂಡು ಅಡಿಗೆ ಮಾಡುತ್ತಾರೆ. ಸೀಮೆಎಣ್ಣೆ ಸೌದೆ, ಸೌದೆ ಒಲೆ, ಹಾಗೂ ಗ್ಯಾಸ್ ಯಾವುದು ಉಪಯೋಗಿಸುವುದಿಲ್ಲ. ದೇವರ ಸೃಷ್ಟಿಯಾದ ಬಿಸಿನೀರಿನಲ್ಲಿ ಮಡಿಕೆಯಲ್ಲಿ ನೀರು ಅಕ್ಕಿಹಾಕಿ ಬಾಯಿ ಕಟ್ಟಿ (ಬಟ್ಟೆಯಿಂದ) ಅನ್ನ ಮಾಡುವುದನ್ನು ನೋಡಿದೆವು, ಅಲ್ಲಿ ಊಟ ಮಾಡಿದೆವು. ಪಾರ್ವತಿ ಹೋಟೇಲಿನಲ್ಲಿ ಬಿಸಿನೀರಿನ ಬುಗ್ಗೆಯಿಂದ ಸಂಪರ್ಕ ತೆಗೆದುಕೊಂಡು ಪೈಪನಲ್ಲಿ ಸ್ನಾನಮಾಡಿದೆವು. ಒಬ್ಬರಿಗೆ 15-00 ರೂ. ಛಾರ್ಜ್ ಮಾಡಿದರು. ಅಲ್ಲಿಯೇ ಇದ್ದ ರಾಮದೇವರ ದೇವಸ್ಥಾನಕ್ಕೆ ಭೇಟಿಕೊಟ್ಟು ನಾಲ್ಕು ಕಿ. ಮೀ ನಡೆದುಕೊಂಡು ಮೂಲ ಶಿಬಿರವಾದ ಕಸೂಲಿ ಶಿಬಿರಕ್ಕೆ ನಮ್ಮ ಪರ್ವತಾರೋಹಣದ ಕಾರ್ಯಕ್ರಮಗಳನ್ನು ಸಂಪೂರ್ಣ ಯಶಸ್ವಿಗೊಳಿಸಿ ಬಂದು ತಲುಪಿದೆವು.

ಪ್ರತಿಯೊಂದು ಶಿಬಿರಗಳಲ್ಲಿ ಶಿಬಿರ ಸ್ಥಾನ ತಲುಪುತ್ತಿದ್ದಂತೆ ಆತ್ಮೀಯ ಸ್ವಾಗತದಿಂದ ಬರಮಾಡಿಕೊಳ್ಳುತ್ತಿದ್ದರು, ಹಣ್ಣಿನ ರಸ, ಸೂಪ್, ಚಹಾ ಮುಂತಾದ ಪಾನೀಯ ಹಾಗೂ ಪಕೋಡ ಬಿಸ್ಕತ್, ಮೊದಲಾದ ತಿನಿಸುಗಳನ್ನು ಕೊಡುತ್ತಿದ್ದರು. ರಾತ್ರಿ ಊಟದ ನಂತರ ಎಲ್ಲಾ ಶಿಬಿರಗಳಲ್ಲಿಯೂ ಶಿಬಿರಾಗ್ನಿ (ಕ್ಯಾಂಪ್‌ಫೈರ) ಮನರಂಜನಾ ಕಾರ್ಯಕ್ರಮ ಏರ್ಪಡಿಸುತ್ತಿದ್ದರು ಮತ್ತು ಕುಡಿಯಲು ಬೋರ್ನ್‌ವೀಟಾ ಕೊಡುತ್ತಿದ್ದರು. ವೈಯಕ್ತಿಕ ಪ್ರತಿಭಾ ಪ್ರದರ್ಶನಕ್ಕೆ ಅವಕಾಶವಿರುತ್ತಿತ್ತು. ಒಂದು ಶಿಬಿರದಿಂದ ಮತ್ತೊಂದು ಶಿಬಿರಕ್ಕೆ ಪರ್ವತಾರೋಹಣ ಪ್ರಾರಂಭಿಸುವ ಮುನ್ನ ನಾವು ತಂಗಿದ್ದ ಶಿಬಿರದ ಆವರಣ ಹಾಗೂ ಗುಡಾರಗಳನ್ನು ನಾವೇ ಸ್ವಚ್ಛಗೊಳಿಸುತ್ತಿದ್ದವು, ಪರ್ವತರೋಹಣದ ಮಾರ್ಗದಲ್ಲಿ ಪಾರ್ವತಿ ಹಾಗೂ ಬಿಯಾಸ ನದಿ ಕಣಿವೆಗಳು ಹಾಗೂ ತರತರದ ಹೂವಿನ ಗಿಡಗಳು ಮುಗಿಲೆತ್ತರಕ್ಕೆ ಇದ್ದಂತೆ ಪೈನಟ್ರಿ ಹಾಗೂ ಹಿಮಪರ್ವತಗಳಿಂದ ಕಂಗೊಳಿಸುವ ರಮ್ಯ ಮನೋಹರ ದೃಶ್ಯಗಳನ್ನು ನೋಡುತ್ತಾ ಸಾಗುತ್ತಿದ್ದೆವು ಹಾಗೂ ಅಲ್ಲಿನ ಗ್ರಾಮೀಣ ಪ್ರದೇಶದ ಜನಜೀವನದ ಬಗ್ಗೆ ಪುಟ್ಟ ಮಾಹಿತಿ ಪಡೆದೆವು. ಗ್ರಹಣ ಎಂಬಲ್ಲಿ ಪುಷ್ಪಾ ಬಹೆನ್ ಎಂಬ ಮಹಿಳೆಯ ಮನೆಗೆ ಹೋಗಿ ಅವರು ಕೊಟ್ಟ ರೊಟ್ಟಿ ತಿಂದು ನನ್ನ ಹೊರತು ನನ್ನ ಗೆಳತಿಯರು ಟೀ ಕುಡಿದರು. ಪುಷ್ಪಾ ಮತ್ತು ಅವರ ಮಕ್ಕಳ ಜೊತೆ ಸೇರಿ ನಾವೆಲ್ಲಾ ಫೋಟೋ ತೆಗೆಸಿಕೊಂಡೆವು. ಅಲ್ಲಿ ಸ್ವಲ್ಪ ಜನ ಒಕ್ಕಲುತನವನ್ನು ಅವಲಂಬಿಸಿದ್ದರೆ ಇನ್ನು ಕೆಲವರು ಸಣ್ಣಪುಟ್ಟ ವ್ಯಾಪಾರವನ್ನು ಮಾಡುತ್ತಿದ್ದರು. ಹೆಚ್ಚಿನ ಜನ ಕೂಲಿಯನ್ನು ಅವಲಂಬಿಸಿರುವುದಾಗಿ ತಿಳಿದುಬಂತು. ಅಲ್ಲಿನ ಮಹಿಳೆಯರು ಶ್ರಮಜೀವಿಗಳು, ಅಲ್ಲಿಯ ಮಹಿಳೆಯರು ಯಾವುದೇ ಕೃತಕ ಅಲಂಕಾರದ ಸಾಮಾಗ್ರಿಗಳ ನೆರವಿಲ್ಲದೇ ಸ್ವಾಭಾವಿಕವಾಗಿಯೇ ಅತ್ಯಂತ ಸುಂದರಿಯರಾಗಿರುವುದು ಕಂಡುಬಂದಿತು.

ಈ ಪರ್ವತಾರೋಹಣ ಕಾರ್ಯಕ್ರಮವು ನಮ್ಮ ಜೀವನದಲ್ಲೇ ಶಿಸ್ತು, ಸಮಯ ಪಾಲನೆ, ಸ್ವಚ್ಛತೆ, ಪರಿಸರದ ಪ್ರಜ್ಞೆ ಹಾಗೂ ನಾವೆಲ್ಲರೂ ಒಂದೇ ಎಂಬ ಸಮಗ್ರತ ಭಾವನೆ ಮಿಗಿಲಾಗಿ ಸಾಹಸ ಪ್ರವೃತ್ತಿಗಳನ್ನು ಮತ್ತಷ್ಟು ಬೆಳೆಸಿಕೊಳ್ಳಲು ಸಹಾಯಕವಾಯಿತು. ನಮ್ಮ ಪರ್ವತಾರೋಹಣದ ಅಂತಿಮ ದಿನ (ಕೊನೆಯ ದಿನ) ಮೂಲ ಶಿಬಿರದಲ್ಲೇ ರಾತ್ರಿ ನಡೆದ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ನಮಗೆಲ್ಲರಿಗೂ ಪರ್ವತರೋಹಣದ ಕಾರ್ಯಕ್ರಮ ಯಶಸ್ವಿಯಾಗಿ ಪೂರೈಸಿದ ಕುರುಹಾಗಿ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ಪರ್ವತರೋಹಣದ ಮಧುರ ಹಾಗೂ ಸಾಹಸದ ನೆನಪುಗಳನ್ನು ಮೆಲಕು ಹಾಕುತ್ತಾ ಜಮ್ಮು ಶ್ರೀ ವೈಷ್ಣವಿ ದೇವಾಸ್ಥಾನಕ್ಕೆ ಭೇಟಿಕೊಟ್ಟು ಮನಾಲಿಯಲ್ಲಿ ಭೀಮನ ಹೆಂಡತಿ ಹಿಡಂಬಿ ದೇವಸ್ಥಾನ ನೋಡಿಕೊಂಡು ನವದೆಹಲಿ ಮೂಲಕ ನಮ್ಮ ಸ್ವಂತ ಸ್ಥಳಕ್ಕೆ (ಮೈಸೂರಿಗೆ) ಬಂದು ಸೇರಿದೆನು. ★ ★

ಸಮಸ್ಯೆ? -- ಸಮಾಧಾನ!

—ಮಾತಾಜಿ

—**ಬಸವರಾಜಪ್ಪ ಗೌಡನ ಭಾವಿ,** ಮುಕ್ಕಾಂ—ಬಸಾಪುರ, ಅಂಚೆ—ಕವಿತಾಳ, ತಾ—ಮಾನ್ವಿ, ಜಿಲ್ಲೆ—ರಾಯಚೂರು.

● ಪೂಜ್ಯರೇ ಸಾಮಾನ್ಯವಾಗಿ ಎಲ್ಲಾ ಕಡೆ ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆಯಾದರೂ ಒಂದೇ ದಿವಸ ಎಲ್ಲರೂ ಆಚರಿಸುವುದಿಲ್ಲ ; ಒಂದೇ ದಿವಸ ಆಚರಿಸುವಂತೆ ಆಗಬೇಕು. ಈ ಸಲ ಕೆಲವರು ನಕ್ಷತ್ರದ ಆಧಾರದ ಮೇಲೆ 12 ನೆಯ ತಾರೀಖು ಆಚರಿಸಿದರು, ಮತ್ತೆ ಕೆಲವರು ಅಕ್ಷಯ ತೃತೀಯಾದ ಆಧಾರದ ಮೇಲೆ 13 ನೆಯ ತಾರೀಖು ಆಚರಿಸಿದರು. ಯಾವುದು ಸೂಕ್ತ ? ಮತ್ತು ನಾವು ಹೇಗೆ ಮಾಡಬೇಕು ?

○ ವಿಶ್ವಗುರು ಬಸವಣ್ಣನವರು ಜನಿಸಿದ್ದು ರೋಹಿಣಿ ನಕ್ಷತ್ರದಲ್ಲಿ. ಅವರು ಹುಟ್ಟಿದಾಗ ಅದು ಅಕ್ಷಯ ತೃತೀಯಕ್ಕೆ ಇತ್ತು. ಈ ನಕ್ಷತ್ರವು ಒಂದೊಂದು ಸರಿ ದ್ವಿತೀಯಾದಂದು, ಮತ್ತೊಮ್ಮೆ ಅಕ್ಷಯ ತೃತೀಯಾದಂದು ಬರುವುದಂತೆ. ಕರ್ನಾಟಕ ಸರ್ಕಾರವು ರಜೆ ಕೊಡುತ್ತಿರುವುದು ನಕ್ಷತ್ರದ ಆಧಾರದ ಮೇಲೆ. ಈ

ಸಲ ನಕ್ಷತ್ರವು 12–5–94 ಕ್ಕೆ ಬಂದಿದೆ. ಅಕ್ಷಯ ತೃತೀಯ ಮರುದಿವಸ ಬಂದಿದೆ. ಬಸವಣ್ಣನವರ ತತ್ತ್ವ–ಸಿದ್ಧಾಂತದ ಪ್ರಕಾರ ಜನ್ಮ ನಕ್ಷತ್ರ, ಜನ್ಮದಿನ ಮುಖ್ಯವೇ ಅಲ್ಲ; ಜಯಂತಿ ಆಚರಣೆಗೆ ಎಂದು ಸರ್ಕಾರ ಸಾರ್ವಜನಿಕ ರಜೆ ಕೊಡುತ್ತಿದೆ. ಆದ್ದರಿಂದ ನಕ್ಷತ್ರವನ್ನು ಅನುಸರಿಸಿಕೊಡುವ ಸಾರ್ವಜನಿಕ ರಜೆ ಇರುವ ದಿನವೇ ಬಸವ ಜಯಂತಿ ಆಚರಿಸುವುದು ಒಳ್ಳೆಯದು. ಹೆಚ್ಚು ಜನರೂ ಭಾಗವಹಿಸಲು ಸಾಧ್ಯವಾಗುತ್ತದೆ.

ಇಷ್ಟಲಿಂಗ ಜನಕ ?

—ರವೀಂದ್ರ, ರಾಯಚೂರು.

● ತಾನೆಲ್ಲಕ್ಕೂ ಅಪ್ಪನಾಗಿ ತನಗೆ ಅಪ್ಪನಿಲ್ಲದ್ದೇ ದೇವರು ಎಂದು ಹೇಳುವ ಮಾತಾಜಿಯವರು ಬಸವಣ್ಣನವರನ್ನು ಇಷ್ಟಲಿಂಗ ಜನಕ ಎನ್ನುವುದು ವಿರುದ್ಧಾಭಾಸ ಹಲ್ಲವೆ ?

○ ನಿರಾಕಾರ, ನಿರ್ಗುಣನು. ಸೃಷ್ಟಿಕರ್ತನೂ ಆದ ದೇವರಿಗೆ ಅಪ್ಪನಿಲ್ಲ. ಆದರೆ ಇಷ್ಟಲಿಂಗವು ನಿರಾಕಾರ ದೇವರ ಕುರುಹು, ಚಿನ್ಹೆ. ಇದಕ್ಕೆ ಆದಿಯುಂಟು. ಇದರ ಜನಕ ಬಸವಣ್ಣ. ರಾಷ್ಟ್ರಪಿತ ಮಹಾತ್ಮಾಗಾಂಧಿ ಎನ್ನುತ್ತೇವೆ. ಅವರಿಗೆ ಮೊದಲು ಭಾರತವು ಇರಲಿಲ್ಲವೆ ? ಇತ್ತು, ಬೇರೊಂದು ರೂಪದಲ್ಲಿ. ಸ್ವಾತಂತ್ರ್ಯ ಚಳುವಳಿಯ ನಾಯಕರಾಗಿ ತುಂಡು ತುಂಡಾದ ಭಾಗಗಳೆಲ್ಲ ಸೇರಿ ಭಾರತದ ಗಣರಾಜ್ಯ ಆದುದು ಪೂಜ್ಯ ಬಾಪೂಜಿಯವರ ನೇತೃತ್ವದಲ್ಲಿ ನಡೆದ ಹೋರಾಟದಿಂದ ತಾನೆ ? ಹಾಗೆ ಸೃಷ್ಟಿಕರ್ತನ ಕುರುಹಾಗಿ ರೂಪು ತಳೆದ ಇಷ್ಟಲಿಂಗದ ಪರಿಕಲ್ಪನೆ ಕೊಟ್ಟವರೇ ಬಸವಣ್ಣನವರು. ಅದಕ್ಕೆ ಅವರು ಧರ್ಮಪಿತರು, ಇಷ್ಟಲಿಂಗ ಜನಕ.

—ಕೆ. ಆರ್, ಐರಸಂಗ, ಬೆಳಗಾಂವ.

● ಕಲ್ಲು ದೇವರು ದೇವರಲ್ಲ, ಮಣ್ಣುದೇವರು ದೇವರಲ್ಲ ಎಂದ ಬಸವಣ್ಣನವರು ಇಷ್ಟಲಿಂಗ ಎಂಬ ಕಲ್ಲು ಕೊಟ್ಟುದೇಕೆ ?

○ ಇಷ್ಟಲಿಂಗವು ಕಲ್ಲಿನಷ್ಟು ಗಟ್ಟಿ ಇದ್ದರೂ ಅದು ಕಲ್ಲು ಅಲ್ಲ. ಕೇರೆಣ್ಣೆ, ತುಪ್ಪದ ಕಾಡಿಗೆ ಇತ್ಯಾದಿ ಮಿಶ್ರಣದಿಂದ ವೈಜ್ಞಾನಿಕವಾಗಿ ತ್ರಾಟಕ (ದೃಷ್ಟಿ) ಯೋಗಕ್ಕಾಗಿಯೇ ಸಿದ್ಧಪಡಿಸಿದ ಕಾಂತಿಯುಕ್ತ ವಸ್ತುವಿದು. ಇಷ್ಟಲಿಂಗವನ್ನೇ ದೇವರು ಎಂದು ನಾವು ಅನ್ನುವುದಿಲ್ಲ; ವಿಶ್ವದಾಕಾರದಲ್ಲಿ ವಿಶ್ವಾತ್ಮನ ಕುರುಹು ಎನ್ನುತ್ತೇವೆ. ಸೃಷ್ಟಿಕರ್ತನನ್ನು ಕಾಣಲು ಇದೊಂದು ಸಾಧನ ಮಾತ್ರ.

—ಓರ್ವ ವಿದ್ಯಾರ್ಥಿ, ಊರು ಬೇಡ.

● ನಾನು ಓರ್ವ ವಿದ್ಯಾರ್ಥಿ ; 2–3 ವರ್ಷಗಳಿಂದ ಬಸವಣ್ಣನವರ ಬಗ್ಗೆ ಓದುತ್ತ ಪೂಜ್ಯಭಾವ ಹೊಂದಿದ್ದೇನೆ, ಅವರ ಜೀವನ–ಸಂದೇಶ ನನಗೆ ಸ್ಫೂರ್ತಿ ನೀಡುತ್ತವೆ. ನಾವು ಬಹಳ ಜನ ಮಕ್ಕಳು. ಈ ಕಾಲದಲ್ಲಿ ಲಿಂಗವಂತರಿಗೆ ನೌಕರಿ ಗುವುದು ದುಸ್ತರವಾಗಿದೆ. ವಯಸ್ಸಾದ ತಂದೆ, ನಮ್ಮ ಬಗ್ಗೆ ಬಹಳ ಚಿಂತೆ ಮಾಡುತ್ತಾರೆ. ನಾನು ಯಾವುದಾದರೂ ಉದ್ಯೋಗಾವಲಂಬಿಯಾಗಿ ಮದುವೆಯಾಗದೆ ಇದ್ದು ತಂದೆ–ತಂಗಿಯರಿಗೆ ನೆರವಾಗಬೇಕೆಂದಿರುವೆ. ಆದರೆ ಹಿರಿಯರು–ಸುತ್ತಲಿನವರು ಮದುವೆ ಅನಿವಾರ್ಯ ಎಂದು ಸದಾ ಮಾತಾಡುತ್ತಾರೆ. ಮದುವೆ ಅವಶ್ಯವೆ ? ಮದುವೆಯಾಗದೆ ಪ್ರಾಣಬಿಟ್ಟರೆ ಏನಾಗುತ್ತದೆ ? ಮದುವೆಯಾಗದೆ ಇದ್ದು ನಮ್ಮ ಮನೆಯ ಜವಾಬ್ದಾರಿ ನಾನು ಹೊತ್ತರೆ ವಿಶ್ವಗುರು ಬಸವಣ್ಣನವರ ಕೃಪೆ ನನಗೆ ದೊರೆಯುತ್ತದೆಯೆ ?

○ ನಮ್ಮ ದೇಶದಲ್ಲಿರುವ ವಿಪುಲ ಮೂಢನಂಬಿಕೆಗಳಲ್ಲಿ ಮದುವೆಯಾಗದೆ ಸತ್ತರೆ ಸ್ವರ್ಗವಿಲ್ಲ ಎಂಬುದೂ ಒಂದು ಬಲವಾದ ಮೂಢನಂಬಿಕೆ. ಮದುವೆ, ಮಾನವನಲ್ಲಿರುವ ಕೆಲವೊಂದು ಆಕಾಂಕ್ಷೆಗಳನ್ನು ತೃಪ್ತಿ ಮಾಡುವ ಸಾಧನವೇ ವಿನಾ ಅದೇ ಸಿದ್ಧಿಯಲ್ಲ. ಸ್ವಭಾವತಃ ದುರ್ಬಲ ಮನಸ್ಸಿಲ್ಲದವರು, ಉದಾತ್ತ ಧ್ಯೇಯವಿದ್ದವರು ಮದುವೆಯಾಗದೆ ಇರುವುದೇ ಲೇಸು. ದುರ್ಬಲ ಮನಸ್ಸಿನವರನ್ನು ನೈತಿಕವಾಗಿ ಹಾದಿ ತಪ್ಪಬಾರದೆಂದು ಮದುವೆಯ ಚೌಕಟ್ಟಿಗೆ ಒಳಪಡಿಸಲಾಗುವುದು. ಸಬಲ ಮನಸ್ಸಿನವರು ಏಕೆ ಆ ಬಂಧನಕ್ಕೆ ಸಿಕ್ಕಬೇಕು ?
ವಯಸ್ಸಾದಾಗ ಹೇಗೆ ? ಮುಪ್ಪಿನಲ್ಲಿ ಯಾರು ನೋಡುವರು ? ಎಂದು ಕೆಲವರು ವೈರಾಗ್ಯ ಜೀವನ ಬಯಸುವವರನ್ನು ಪ್ರಶ್ನಿಸಿ, ನಿರುತ್ಸಾಹಗೊಳಿಸುವುದುಂಟು. ಇದಲ್ಲ ಭ್ರಮೆ ಮಾತ್ರ. ಎಂಟು ಹತ್ತು ಮಕ್ಕಳಿದ್ದವರು ಸಹ ನಿರ್ಲಕ್ಷಿಸಲ್ಪಟ್ಟು ಅನಾಥರಾಗಿರುವುದನ್ನು ಕಾಣುತ್ತೇವೆ ಮತ್ತು ನಿಸ್ವಾರ್ಥಿಯೂ ಆದವನನ್ನು ಅವನಿಂದ ಸಹಾಯ ಪಡೆದ ಬಂಧುಗಳೇ ಆದರಿಸುವರು. ಒಂದು ವೇಳೆ ಆದರಿಸದಿದ್ದರೆ ಒಳ್ಳೆಯ ಕಾರ್ಯಮಾಡಿದ ತೃಪ್ತಿ ಇವನಿಗೆ ಇರುವುದಷ್ಟೆ. ಒಂದು ವೇಳೆ ಅಂಥ ವ್ಯಕ್ತಿ ತ್ಯಾಗ–ವೈರಾಗ್ಯ ಜೀವನ ಸ್ವೀಕರಿಸಿದರಂತೂ ಅವನನ್ನು ನೋಡಿಕೊಳ್ಳಲು, ಉಪಚರಿಸಲು ಜನರು ಸದಾ ಸಿದ್ಧರಿರುವರು. ಯಾರೂ ನೋಡಿಕೊಳ್ಳಲಿಲ್ಲವಾದರೆ, ಇರುವಷ್ಟು ಕಾಲ ದೇವರು–ಧರ್ಮಗುರುವಿನಲ್ಲಿ ಅನನ್ಯ ಶರಣಾಗತಿ ಹೊಂದಿ ಆಯುಷ್ಯ ಇರುವಷ್ಟು ಬದುಕಿದರಾಯಿತು ಎಂದೋ ಬರಬಹುದಾದ ವಿಪತ್ತಿನ ಬಗ್ಗೆ ಈಗಲೇ ಏಕೆ ಚಿಂತೆ ?

ಧರ್ಮಗುರು ಬಸವಣ್ಣನವರ ಕೃಪೆ ಕರ್ತವ್ಯನಿಷ್ಠರು, ದೇವಭಕ್ತರು ಆದ ಎಲ್ಲರ ಮೇಲೆ ಇರುತ್ತದೆ ಮತ್ತು ಉದಾತ್ತ ಧ್ಯೇಯಕ್ಕಾಗಿ ವೈಯಕ್ತಿಕ ಕಾಮನೆ, ಸುಖ–ದುಃಖ ತ್ಯಾಗ ಮಾಡಿದವರ ಬಗ್ಗೆ ಇನ್ನೂ ಹೆಚ್ಚು ಇರುತ್ತದೆ.

—ಹೂವಿನ ಹಡಗಲಿ, ಮಹಾಲಿಂಗಯ್ಯ.

● ನಮ್ಮೂರಲ್ಲಿ ನಮ್ಮ ಜಾತಿ ಮುಖಂಡರಾದ ಗುರುಲಿಂಗಯ್ಯ ಎನ್ನುವವರಿದ್ದಾರೆ. ಅವರು ಕೇಳುತ್ತಾರೆ ಬಸವಣ್ಣನವರೇ ಗುರುವಲ್ಲ ಇನ್ನು ಬಸವಣ್ಣನವರ ಹೆಸರಲ್ಲಿ ಜಗದ್ಗುರು ಪೀಠ ಮಾಡಲು ಹೇಗೆ ಸಾಧ್ಯ? ಮತ್ತು ಇವರಿಗೆ ಮಹಾ ಜಗದ್ಗುರು ಎಂದು ಬರೆದುಕೊಳ್ಳಲು ಯಾರು ಹಕ್ಕು ಕೊಟ್ಟರು? ಎಂದು. ಇದಕ್ಕೇನು ಉತ್ತರಿಸುವಿರಿ?

○ ಒಂದು ಕಮಲವು ಅರಳಿದಾಗ ಎಲ್ಲಿಂದಲೋ ಹಾರಿ ಬರುವ ದುಂಬಿ ಮಕರಂದ ಪಾನ ಮಾಡಿ, ಝೇಂಕಾರ ಹಾಡುತ್ತದೆ. ಕಮಲದ ಬುಡದಲ್ಲಿರುವ ಕಪ್ಪೆ ಕೆಸರು ನೀರು ಕುಡಿದು ವಟಗುಟ್ಟುತ್ತದೆ. ಇಂದು ಜಾತಿವಾದಿ ವೀರಶೈವರ ವಟಗುಟ್ಟುವಿಕೆ ಹೀಗೆ ಇದೆ. ಬಸವ ಧರ್ಮದ ಕಮಲ ಅರಳಿರುವಾಗ ಅಧ್ಯಾತ್ಮಿಕ ಆಸಕ್ತಿಯ ಲಿಂಗವಂತರು, ಇನ್ನಿತರರು ಬಸವ ಸಂದೇಶದ ಮಕರಂದ ಪಾನ ಮಾಡಿ, ಆನಂದ ವಿಸ್ಮಿತರಾಗಿರುವರು. ಪವಿತ್ರ ಹುಟ್ಟಿನ ಭ್ರಾಂತಿಯಲ್ಲಿರುವ ವೀರಶೈವವಾದಿ ಕಪ್ಪೆಗಳು ಲಿಂಗಾಯತ ಧರ್ಮದ ಅಧ್ಯಾತ್ಮಿಕ ಅನುಭಾವದ ಮಕರಂದ ಪಾನಮಾಡಲು ಅಸಮರ್ಥರಾಗಿ ಜಾತಿವಾದದ ವಟಗುಟ್ಟುವಿಕೆಯನ್ನೂ ನಡೆಸಿಯೇ ಇದ್ದಾರೆ. **"ಸಂಗನ ಬಸವಣ್ಣನು ಎನಗೆಯೂ ಗುರು ನಿನಗೆಯೂ, ಜಗವೆಲ್ಲಕ್ಕೂ ಗುರು ಕಾಣಾ ಗುಹೇಶ್ವರ"** ಎಂದು ಶಿವಯೋಗ ಸಾಮ್ರಾಟ ಬಯಲು ಕಾಯುಸಿದ್ಧ ಅಲ್ಲಮ ಪ್ರಭುಗಳೇ ಹೇಳಿದ ಮೇಲೆ ಇನ್ನಾವ ಆಧಾರ ನಮಗೆ ಬೇಕು? **"ಶ್ರೀ ಗುರು ಬಸವಲಿಂಗಾಯ ನಮಃ"** ಎಂಬ ಮಂತ್ರದಲ್ಲೇ ಬಸವಣ್ಣನವರು ಮಹಾಗುರು ಎಂಬುದು ಅಡಕವಾಗಿದೆ.

ಲಿಂಗವಂತ ಧರ್ಮ-ಸಮಾಜಗಳಿಗೆ ಉಳಿದವರೆಲ್ಲ ಧರ್ಮದ ಗುರುಗಳು; ಬಸವಣ್ಣನವರು ಧರ್ಮಗುರು. ಉಳಿದವರೆಲ್ಲರು ಜಗದ್ಗುರುಗಳಾದರೆ ಬಸವಣ್ಣನವರೊಬ್ಬರೇ **"ಮಹಾಜಗದ್ಗುರು"**. ಸಾಮಾನ್ಯವಾಗಿ ಎಲ್ಲ ಮಠ-ಸಿಂಹಾಸನಗಳು ಒಂದೊಂದು ಜಾತಿಗೆ ಸೀಮಿತವಾಗಿವೆ ಬ್ರಾಹ್ಮಣರು, ಸಾದರು, ನೊಳಂಬರು, ಅಯ್ಯನವರು, ಕುರುಹಿನ ಶೆಟ್ಟರು, ಕುರುಬರು, ದೇವಾಂಗದವರು, ಒಕ್ಕಲಿಗರು, ಗಾಣಿಗರು- ಹೀಗೆ ವಿವಿಧ ಜಾತಿಗಳಿಗೆ ಅನೇಕರು, ಗುರುಗಳಾಗಿದ್ದಾರೆ. ಕೇವಲ ಲಿಂಗವಂತರು ಮಾತ್ರವಲ್ಲ, ಕೇವಲ ಹಿಂದುಗಳು ಮಾತ್ರವಲ್ಲ ಇಡೀ ಮಾನವ ಕುಲಕೋಟಿಯ ಉದ್ಧಾರಕ್ಕಾಗಿ ಶ್ರಮಿಸುತ್ತಿರುವ ಬಸವ ತತ್ತ್ವದ ಆಧಾರದ ಮೇಲೆ ಕಟ್ಟಲ್ಪಟ್ಟ ನಮ್ಮ ಪೀಠವೊಂದು ನಿಜವಾದ ಮಹಾಜಗದ್ಗುರು ಪೀಠ, ಹೌದೋ ಅಲ್ಲವೋ ಚಿಂತಿಸಲಿ, ಉತ್ತರಿಸಲಿ!

ಹೀಗೆ ಬರೆದುಕೊಳ್ಳಲು ಯಾವ ದೊಣ್ಣೆನಾಯಕನ ಒಪ್ಪಿಗೆಯೂ ಬೇಕಾಗಿಲ್ಲ. ಅಪ್ಪನ ಅಡ್ಡಹೆಸರು ಆತನಿಗೆ ಹುಟ್ಟಿದ ಯಾವುದೇ ಮಗನಿಗೆ ಬರುವಂತೆ ಬಸವ ಮಹಾಜಗದ್ಗುರುವನ್ನು ಧರ್ಮಪಿತ ಎಂದು ಭಾವಿಸುವ ಈ ನಮ್ಮ ಧರ್ಮಪೀಠಕ್ಕೆ ಈ ಹೆಕ್ಕು ಸಹಜವಾಗಿ ಪ್ರಾಪ್ತಿಯಾಗುತ್ತದೆ. ತಮ್ಮ ಕೋಳಿ ಕೂಗದೆ ಇದ್ದರೆ ಬೆಳಕು ಹರಿಯುವುದಿಲ್ಲ ಎಂಬ ಭ್ರಾಂತ ಕಲ್ಪನೆಯನ್ನು ಗುರುಲಿಂಗಯ್ಯನವರು, ಅವರ ಗುರುಗಳು ಎಷ್ಟು ಬೇಗ ಬಿಟ್ಟರೆ ಅಷ್ಟು ಒಳ್ಳೆಯದು. ಶಿವಯೋಗ ಮಂದಿರ ಹುಟ್ಟುಹಾಕಿರುವ ಸಂಪ್ರದಾಯ ಕೇವಲ ಅಯ್ಯನವರನ್ನು ಪುರಸ್ಕರಿಸುತ್ತದೆ; ಇದಕ್ಕೆ ಪ್ರತಿಸ್ಪರ್ಧಿಗಳಾಗಿ ಹುಟ್ಟಿದ ಭಕ್ತವರ್ಗಗಳವರ ಮಠಗಳು ತಮ್ಮ ತಮ್ಮ ಒಳಜಾತಿಯ ವಟುಗಳನ್ನೇ ಆಯ್ಕೆ ಮಾಡುತ್ತವೆ. ಬಸವ ಧರ್ಮದ ಮಹಾಜಗದ್ಗುರು ಪೀಠ ಒಂದೇ ಯಾವ ಭೇದವನ್ನೆಣಿಸದೆ ಮುಮುಕ್ಷುಗಳನ್ನು ಆಯ್ಕೆ ಮಾಡುತ್ತಿದೆ, ಅವಕಾಶ ನೀಡುತ್ತಿದೆ ಎಂಬುದು ಅತೀವ ಹೆಮ್ಮೆಯ ವಿಷಯವಲ್ಲವೆ? ಬಸವ ಧರ್ಮವನ್ನು ಪೂರ್ಣ ರೂಪದಲ್ಲಿ ಆಚರಣೆಗೆ ತರುತ್ತಿರುವ ಮತ್ತು ಎಲ್ಲ ಮಾನವ ಕುಲಕೋಟಿಯ ಹಿತ ಚಿಂತನೆ ಮಾಡುವ ಕಾರಣ ನಮ್ಮ ಪೀಠಕ್ಕೆ ಮಾತ್ರ ಬಸವ ಧರ್ಮದ ಮಹಾಜಗದ್ಗುರು ಪೀಠ ಎಂದು ಬರೆದುಕೊಳ್ಳಲು ಪೂರ್ಣ ಹಕ್ಕು ಇರುವುದು. ★

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಶರಣ ಮೇಳ ಪ್ರಚಾರ ಪ್ರವಾಸ

ಶರಣ ಬಂಧುಗಳೇ,

ಬಸವ ಧರ್ಮೀಯರ ವಾರ್ಷಿಕ ಮಹಾಗಣ ಸಮಾವೇಶವಾದ ಎಂಟನೆಯ ಶರಣ ಮೇಳವು ಧಾವಿಸಿ ಬರುತ್ತಿದೆಯಷ್ಟೆ. ಇದರ ಪ್ರಚಾರಾರ್ಥ ಅಂದರೆ ಇದರ ಮಹತ್ವವನ್ನು ತಿಳಿಸಿಕೊಟ್ಟು ಹೆಚ್ಚು ಜನರನ್ನು ಆಕರ್ಷಿಸುವಂತೆ ಮಾಡಲು, ಧರ್ಮ-ತತ್ತ್ವಗಳನ್ನು ಬೋಧಿಸಲು, ದೀಕ್ಷಾವಿಧಿ ಮುಂತಾದ ನೆರವೇರಿಸಲು ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ** ಯವರ ಪ್ರವಾಸವನ್ನು ಈ ರೀತಿಯಲ್ಲಿ ಯೋಜಿಸಲು ಪ್ರಾಯೋಗಿಕವಾಗಿ ರೂಪುರೇಷೆ ಹಾಕಲಾಗಿದೆ.

ಕ್ರ. ಸಂ.	ಊರಿನ ಹೆಸರು	ವಾರ ಮತ್ತು ದಿನಾಂಕಗಳು	
1	ವಿಜಯಪುರ	ಮಂಗಳವಾರ	8-11-94
2	ಕೋಲಾರ	ಬುಧವಾರ	9-11-94
3	ಹೊಸಕೋಟೆ	ಗುರುವಾರ	10-11-94
4	ಬನಹಳ್ಳಿ (ಹೊಸಕೋಟೆ)	ಶುಕ್ರವಾರ	11-11-94
5	ಶಿವನಾಪುರ (")	ಶನಿವಾರ	12-11-94
6	ಜಂಗಮ ಕೋಟೆ (ಶಿಡ್ಲಘಟ್ಟ)	ಭಾನುವಾರ	13-11-94
7	ಚಿಂತಾಮಣಿ	ಸೋಮವಾರ	14-11-94
8	ಗುಂಡ್ಲಹಳ್ಳಿ	ಮಂಗಳವಾರ	15-11-94
9	ಬಾಗೇಪಲ್ಲಿ	ಬುಧವಾರ	16-11-94
10	ಬೀಚಗಾನಹಳ್ಳಿ (ಗುಡಿಬಂಡೆ)	ಗುರುವಾರ	17-11-94
11	ಮಂಚೇನಹಳ್ಳಿ-ಹಳೇಹಳ್ಳಿ	ಶುಕ್ರವಾರ	18-11-94
12	ಗೌರಿಬಿದನೂರು	ಶನಿವಾರ	19-11-94
13	ಹೊಸೂರು (ಗೌರಿಬಿದನೂರು)	ಭಾನುವಾರ	20-11-94
14	ಹಿಂದೂಪುರ	ಸೋಮವಾರ	21-11-94
15	ತುಮಕೂರು	ಮಂಗಳವಾರ	22-11-94
16	ತಿಪಟೂರು	ಬುಧವಾರ	23-11-94
17	ಹಳೇಬೀಡು	ಗುರುವಾರ	24-11-94
18	ಹಾಸನ	ಶುಕ್ರವಾರ	25-11-94
	"	ಶನಿವಾರ	26-11-94
19	ಗೋಣಿಸೋಮನಹಳ್ಳಿ	ಭಾನುವಾರ	27-11-94
20	ಚಿಕ್ಕಮಗಳೂರು	ಸೋಮವಾರ	28-11-94
21	ಶಿವಮೊಗ್ಗ	ಮಂಗಳವಾರ	29-11-94
		ಬುಧವಾರ	30-11-94
		ಗುರುವಾರ	1-12-94
		ಶುಕ್ರವಾರ	2-12-94
22	ಭದ್ರಾವತಿ	ಶನಿವಾರ	3-12-94
		ಭಾನುವಾರ	4-12-94
23	ಗನ್ನಾಯಕನಹಳ್ಳಿ	ಸೋಮವಾರ	5-12-94

ಕ್ರ. ಸಂ.	ಊರಿನ ಹೆಸರು	ವಾರ ಮತ್ತು ದಿನಾಂಕಗಳು	
24	ಚಳ್ಳಕೆರೆ	ಮಂಗಳವಾರ	6-12-94
		ಬುಧವಾರ	7-12-94
25	ಚಿತ್ರದುರ್ಗ	ಗುರುವಾರ	8-12-94
		ಶುಕ್ರವಾರ	9-12-94
26	ರಾಣೇಬೆನ್ನೂರು	ಶನಿವಾರ	10-12-94
		ಭಾನುವಾರ	11-12-94
27	ಗದಗ	ಸೋಮವಾರ	12-12-94
		ಮಂಗಳವಾರ	13-12-94
28	ಬೈಲಹೊಂಗಲ	ಬುಧವಾರ	14-12-94
29	ಬೆಳಗಾಂವ	ಗುರುವಾರ	15-12-94
		ಶುಕ್ರವಾರ	16-12-94
30	ಸಂಕೇಶ್ವರ	ಶನಿವಾರ	17-12-94
31	ಗಡಹಿಂಗ್ಲಾಜ್ (ಮಹಾರಾಷ್ಟ್ರ)	ಭಾನುವಾರ	18-12-94
		ಸೋಮವಾರ	19-12-94
32	ನಿಪ್ಪಾಣಿ	ಮಂಗಳವಾರ	20-12-94
33	ಈಚಲಕರಂಜಿ (ಮಹಾರಾಷ್ಟ್ರ)	ಬುಧವಾರ	21-12-94
		ಗುರುವಾರ	22-12-94
34	ಶಿರಡೋಣ "	ಶುಕ್ರವಾರ	23-12-94
35	ತಾಕವಾಡೆ "	ಶನಿವಾರ	24-12-94
36	ಜಮಖಂಡಿ	ಭಾನುವಾರ	25-12-94
		ಸೋಮವಾರ	26-12-94
		ಮಂಗಳವಾರ	27-12-94
37	ಐಗಳಿ	ಬುಧವಾರ	28-12-94
38	ಮಂಥೋಳ	ಗುರುವಾರ	29-12-94
39	ನದಿ ಇಂಗಳಗಾಂವ	ಶುಕ್ರವಾರ	30-12-94
40	ಶೇಗುಣಸಿ,	ಶನಿವಾರ	31-12-94
41	ಖವಟಕೊಪ್ಪ	ಭಾನುವಾರ	1-1-95
42	ಸೊಲ್ಲಾಪೂರ (ಮಹಾರಾಷ್ಟ್ರ)	ಸೋಮವಾರ	2-1-95
	" "	ಮಂಗಳವಾರ	3-1-95
	ಪ್ರಯಾಣ (ಗಣಜಲಿ ಕ್ಯಾಂಪ್) ಗಣಜಲಿ	ಬುಧವಾರ	4-1-95

ಕ್ರ. ಸಂ.	ಊರಿನ ಹೆಸರು	ವಾರ ಮತ್ತು ದಿನಾಂಕಗಳು	
44	ದೇವದುರ್ಗ	ಗುರುವಾರ	5–1–95
45	ರಾಯಚೂರು	ಶುಕ್ರವಾರ	6–1–95
		ಶನಿವಾರ	7–1–95
46	ಶಿರಗುಪ್ಪ (ಬಳ್ಳಾರಿ ಜಿಲ್ಲೆ)	ಭಾನುವಾರ	8–1–95
		ಸೋಮವಾರ	9–1–95
	ಕೂಡಲ ಸಂಗಮಕ್ಕೆ ಪ್ರಯಾಣ	ಮಂಗಳವಾರ	10–1–95

ವಿಶೇಷ ಸೂಚನೆಗಳು

೧. ಬಸವ ಗಂಗೋತ್ರಿಯಲ್ಲಿ ನಡೆದ ಬಸವ ತತ್ತ್ವ ತರಬೇತಿ ಮತ್ತು ಭಕ್ತಿಪಕ್ಷ ಸಮ್ಮೇಳನದಲ್ಲಿ ಹಲವಾರು ಶರಣರ ಬೇಡಿಕೆ, ಸಲಹೆಗಳ ಪ್ರಕಾರ ಈ ಪಟ್ಟಿಯನ್ನು ಖಚಿತಪಡಿಸಲಾಗಿದೆ. ಆಯಾ ಊರುಗಳ ಶರಣ ಕಾರ್ಯಕರ್ತರು ಈ ದಿನಾಂಕಗಳಿಗೆ ಅನುಗುಣವಾಗಿ ಕಾರ್ಯಕ್ರಮವನ್ನು ಯೋಜಿಸಬೇಕು.

೨. ಕೆಲವು ಊರುಗಳಲ್ಲಿ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳೇ ದೇಣಿಗೆ ಸಂಗ್ರಹಿಸಲು ಸಮರ್ಥರಿದ್ದರೂ ಸಹ, ಪ್ರಸ್ತುತ ಕಾರ್ಯಕ್ರಮವನ್ನು, ಶ್ರಮ ದಾಯಕವಾದರೂ ಪ್ರವಾಸವನ್ನು ಏರ್ಪಡಿಸುವ ಉದ್ದೇಶವೆಂದರೆ, ಹೊಸದಾಗಿ ತಯಾರಾಗುವ ಸಾಹಿತ್ಯ ಕೃತಿಗಳು, ಕೆಸೆಟ್ಟುಗಳು ಜನರಿಗೆ ಲಭ್ಯವಾಗುತ್ತವೆ. ದೀಕ್ಷಾ ಕಾರ್ಯಕ್ರಮ ಏರ್ಪಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು, ಆದ್ದರಿಂದ ಮೊದಲೇ ಉತ್ತಮ ಪ್ರಚಾರಕೊಟ್ಟು ರಾಷ್ಟ್ರೀಯ ಬಸವ ದಳಗಳವರು **ಪೂಜ್ಯ ಗಂಗಾ ಮಾತಾಜಿಯವರ** ಬರುವಿಕೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು.

೩. ಒಂದು, ಎರಡು ದಿವಸಗಳ ವಾಸ್ತವ್ಯ ಇರುವುದರಿಂದ ಮೊದಲೇ ಸ್ಥಳೀಯವಾಗಿ ಕರಪತ್ರ ಮುದ್ರಿಸಿ, ಹೆಚ್ಚಿನ ಪ್ರಚಾರ ಮಾಡಿರಬೇಕು.

೪. ಎರಡು ದಿವಸಗಳ ವಾಸ್ತವ್ಯವಿದ್ದಲ್ಲಿ ಆಗಮಿಸಿದ ಮರುದಿನ ಬೆಳಿಗ್ಗೆ ದೀಕ್ಷಾ ಕಾರ್ಯಕ್ರಮ ಇಡಬೇಕು. ಮೊದಲೇ ಆ ಬಗ್ಗೆ ಹೆಚ್ಚಿನ ಪ್ರಚಾರ ಮಾಡಿದ್ದರೆ ಆಸಕ್ತ ಜನರು ದೀಕ್ಷೆಯನ್ನು ಪಡೆದುಕೊಳ್ಳುವರು.

೫. ಅ. ರಾಷ್ಟ್ರೀಯ ಬಸವ ದಳಗಳ ಸಂಘಟನೆ, ಪುನಶ್ಚೇತನಕ್ಕೆ ಈ ಕಾರ್ಯಕ್ರಮವನ್ನು ಸದುಪಯೋಗ ಮಾಡಿಕೊಳ್ಳಬೇಕು.

ಆ. ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳ ಬದಲಾವಣೆಯಿದ್ದರೆ ಅದನ್ನು ಪ್ರಧಾನ ಸಂಚಾಲಕರ ಗಮನಕ್ಕೆ ತಂದು, ಅನುಮತಿ ಪಡೆಯಬೇಕು.

ಇ. **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು** ಕೇಂದ್ರ ಸಮಿತಿಯ ಕೋಶಾಧ್ಯಕ್ಷೆ ಇರುವುದರಿಂದ, ಆಯಾ ರಾ. ಬ. ದಳಗಳ ವಾರ್ಷಿಕ ಲೆಕ್ಕವನ್ನು ಅವರಿಗೆ ತೋರಿಸಬೇಕು. ವಿವಿಧ ಶಾಖೆಗಳು ಸಾಧಿಸಿದ ಪ್ರಗತಿಯ ವರದಿ ನೀಡಬೇಕು.

ಶರಣ ಮೇಳ ಉತ್ಸವ ಸಮಿತಿಯ ಕೋಶಾಧ್ಯಕ್ಷೆಯಾಗಿರುವ **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ**, ಪ್ರಧಾನ ಸಂಚಾಲಕರಾಗಿರುವ **ಶ್ರೀ ನಿಜಗುಣಾನಂದ ಸ್ವಾಮಿಗಳು**, ಬಸವ ಧರ್ಮಪೀಠದ ಮೇನೇಜರ್ ಆಗಿರುವ **ಸೋದರಿ ನಾಗರತ್ನಮ್ಮ** ಇವರುಗಳೊಡನೆ ಪೂರ್ಣ ಸಹಕಾರದೊಡನೆ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣವಾಗುವಿರಾಗಿಯೂ, ಸೃಷ್ಟಿಕರ್ತ ಪರಮಾತ್ಮ ಮತ್ತು ಧರ್ಮಕರ್ತ ಬಸವಣ್ಣನವರ ದಿವ್ಯ ಕೃಪೆಗೆ ಪಾತ್ರರಾಗುವಿರಾಗಿಯೂ ನಂಬುತ್ತೇವೆ.

ಕ್ಯಾಂಪ್–ಬೆಂಗಳೂರು
25–10–94

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ–587115

ಬಸವ [ಲಿಂಗಾಯತ] ಧರ್ಮದ ಆರು ಸೂತ್ರಗಳು

1. ಧರ್ಮ ಗುರು– ವಿಶ್ವಗುರು ಬಸವಣ್ಣನವರು
2. ಧರ್ಮ ಸಂಹಿತೆ– ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮಲಾಂಛನ– ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4. ಧರ್ಮಕ್ಷೇತ್ರ– ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮ
5. ಧರ್ಮಧ್ವಜ– ಬಸವ ಮಂತ್ರ ಸಹಿತ ಷಟ್ಕೋನ ಧ್ವಜ
6. ಧರ್ಮದ ಧ್ಯೇಯ– ಜಾತಿವರ್ಣವರ್ಗ ರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥



ವಿಜಾಪೂರ ಜಿಲ್ಲಾ ರಾಷ್ಟ್ರೀಯ ಬಸವ ದಳ ಕೇಂದ್ರ ಕಾರ್ಯಾಲಯ, ಅಡವಿಸ್ವಾಮಿ ಮಠ ಬಸವ ಮಂಟಪ ಅವರಿಂದ ೫-೯-೯೪ ರಂದು ಪೂಜ್ಯ ಶ್ರೀ ಪ್ರಪ್ರಥಮ ಮಹಿಳಾ ಜಗದ್ಗುರು ಮಾತೆ ಮಹಾದೇವಿ, ಬಸವ ಧರ್ಮ ಪೀಠ ಕೂಡಲ ಸಂಗಮ ಅವರಿಗೆ ಸಲ್ಲಿಸಿದ

— ಸನ್ಮಾನ ಪತ್ರ —

ಚಿನ್ಮೂಲಾದ್ರಿಯ ಚಿನ್ಮಣಿ :

ಕಲ್ಲಿನಕೋಟೆಯ ಚಿತ್ರದುರ್ಗಮಾತೆ ಅಂದು ರಾಷ್ಟ್ರರಕ್ಷಣೆಗೆಂದು ವೀರರಮಣಿ ಒನಕೆಯ ಓಬವ್ವನನ್ನು ಕರುಣಿಸಿ ಕೊಟ್ಟಂತೆ ಇಂದು ಬಸವ ಧರ್ಮ ರಕ್ಷಣೆಗೆಂದು ವೀರ–ವಿರಾಗಿಣಿ, ಅನುಭಾವ ಚಿಂತಾಮಣಿ, ಶರಣ ಸಾಹಿತ್ಯ ರತ್ನ ಪ್ರಾಯರಾದ ನಿಮ್ಮನ್ನು ದಯಪಾಲಿಸಿದ್ದಾಳೆ; ನಿಮ್ಮನ್ನು ಹಡೆದು ಕೊಟ್ಟ ಆ ತಾಯಿಯ ಪುಣ್ಯ–ಗರ್ಭಕ್ಕೆ ಧನ್ಯತಾಭಾವದಿಂದ ನಾವೆಲ್ಲರೂ ನತಮಸ್ತಕರಾಗುತ್ತೇವೆ.

ಶಿವಾದ್ವೈತದ ವಿಶಿಷ್ಟಶಕ್ತಿ :

ಷಟ್‌ಸ್ಥಲ ಧರ್ಮದಲ್ಲಿ ಜಗಚ್ಚಾಲನಕ್ಕೆ ಮೂಲವಾಗಿರುವುದು 'ಶಕ್ತಿ' ಎಂದು ಹೇಳುವಂತೆ **ಪೂಜ್ಯ ಮಹಾಜಗದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳ** ಕಾರ್ಯ–ಕಲಾಪ, ಸಾಧನೆ–ಸಿದ್ಧಿಗಳಿಗೆಲ್ಲ ಮೂಲ ಚೈತನ್ಯವೇ ನೀವಾಗಿದ್ದೀರಿ. ಬೆಂಗಳೂರಿನ ಬಸವ ಮಂಟಪ, ಕುಂಬಳಗೋಡಿನ ಬಸವ ಗಂಗೋತ್ರಿ, ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಕೂಡಲಸಂಗಮದ ಬಸವ–ಧರ್ಮಪೀಠ–ಇವುಗಳಲ್ಲಿ ಜೀವ ತುಂಬಿದವರು ನೀವೇ ಆಗಿದ್ದೀರಿ. **ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು** ಬಸವ ಧರ್ಮದ ಬಂಧುರವಾದ ಬೃಹತ್ ಹಂದರ ಹಾಕಿದ್ದರೆ ನೀವು ಸುಂದರವಾದ ಬಳ್ಳಿಯಾಗಿ ಬಂದು ಹಬ್ಬಿ ಹಸರಿಸಿದಿರಿ. ದೆಸೆದೆಸೆಗೆ ಕುಡಿವರಿದು ಕೊನರಿದಿರಿ, ತೊಂಗಲು ತೊಂಗಲು ಹೂವಾದಿರಿ; ಗೊಂಚಲು ಗೊಂಚಲು ಕಾಯಾದಿರಿ. ಹೀಗೆ ನಾಡಿನ ಜನಕ್ಕೆಲ್ಲ ಬಸವ ಬಳ್ಳಿಯ ರಸವತ್ಫಲಗಳನ್ನು ಉಣ್ಣಿಸಿದಿರಿ.

ಪ್ರಪ್ರಥಮ ಮಹಿಳಾ ಜಗದ್ಗುರು :

ಬಸವಾದಿ ಶರಣರಿಂದಾಗಿ ಮಹಿಳೆ ಸರಿಸಮಾನತೆಯನ್ನೇನೋ ಪಡೆದಳೆಂದರೂ ಅವಳು ತುಳಿತದಿಂದ ಎದ್ದು ಬಂದಿಲ್ಲ. ಇಂಥ ಪ್ರತಿರೋಧ ಪರಿಸ್ಥಿತಿಯಲ್ಲಿಯೂ ಪ್ರತ್ಯೇಕ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸಿದಿರಿ. ಈ ಕಲ್ಪನೆ ಕೊಚ್ಚ ಹೊಸದು. ಜಗತ್ತಿನ ಯಾವ ದೇಶವೂ ಯಾವ ಜನಾಂಗವೂ ಯಾವ ಧರ್ಮವೂ ಯಾವ ಕಾಲವೂ ಕಾಣದ ಅಘಟಿತ ಘಟನೆ. ಈ ಪೀಠಸ್ಥಾಪನೆ. ಸನಾತನ ಸಂಪ್ರದಾಯವಾದಿ ಮಠ ಪೀಠಗಳ ಘಟಾನುಘಟಿಗಳ ಉಗ್ರಪ್ರತಿಭಟನೆಯ ಎದುರಿನಲ್ಲಿಯೇ ಅಸಂಖ್ಯಾತರ ಬೆಂಬಲದೊಂದಿಗೆ ಯಶಸ್ವಿಯಾಗಿ ಪೀಠಾರೋಹಣ ಮಾಡಿದಿರಿ. ಈ ವರೆಗೆ ಯಾರೂ ಕಾಣದ ಯಾರೂ ಕೇಳದ ಕೇಳರಿಯದ ಈ ಗದ್ದುಗೆಗೇರಿ ಪ್ರಪ್ರಥಮ ಮಹಿಳಾ ಜಗದ್ಗುರುಗಳಾಗಿರುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ.

ಭವ್ಯ ಕೃತಿಗಳ ದಿವ್ಯ ಸಾಹಿತಿ :

ಸುಯಿಧಾನ ಸುಗ್ರಂಥ ಮಾಲೆಯ ಬಹುಸಂಖ್ಯೆಯ ಸುಗ್ರಂಥಗಳು ನಿಮ್ಮವೇ ಇವೆ ಎಂಬುದನ್ನು ಹೇಳಲು ಹೆಮ್ಮೆ ಎನಿಸುತ್ತದೆ. ಅವುಗಳ ಪದರು ಬಿಚ್ಚಿ ನೋಡಿದರೆ ಒಳಹೂರಣವೆಲ್ಲ ಶರಣರು, ವಚನಗಳ ನವನೀತ, ಲಿಂಗವಂತಧರ್ಮ- ಮುಂತಾದ ಮೌಲಿಕ ವಿಷಯಗಳಿಂದ ತುಂಬಿ ತುಳುಕುತ್ತಿವೆ. ನೂರಕ್ಕೂ ಮಿಕ್ಕಿರುವ ಅವುಗಳಲ್ಲಿ–ಹೆಪ್ಪಿಟ್ಟ ಹಾಲು, ವಿಶ್ವಧರ್ಮಿ ಬಸವಣ್ಣ, ಮಾತೃಹರಕೆ, Who is a Hindu ? ವಿಶ್ವಧರ್ಮ ಪ್ರವಚನ, ತರಂಗಿಣಿ, ಚುಳುಕಾದ ಚೇತನ, ಚಿಂತನಧಾರೆ, ಕ್ರಾಂತಿಯೋಗಿ ಬಸವಣ್ಣ [ಚಲನಚಿತ್ರ], ಕೆಳದಿಯ ಚನ್ನಮ್ಮಾಜಿ–ಇವು ನಿಮ್ಮನ್ನು ಶ್ರೇಷ್ಠ ಸಾಹಿತಿಗಳ ಸಾಲಿನಲ್ಲ ನಿಲ್ಲಿಸುವ ಉತ್ಕೃಷ್ಟಕೃತಿಗಳು.

ಧರ್ಮಗ್ರಂಥ ರಚನಾ ವಲ್ಮೀಕವಾಸಿಗಳು :

ವಿಶ್ವಧರ್ಮವಾಗಿರುವ ಲಿಂಗಾಯತ ಧರ್ಮಕ್ಕೆ ವಚನ ಸಾಹಿತ್ಯವು ಧರ್ಮ ಸಂಹಿತೆಯಂತಿದ್ದರೂ ಸರ್ವಗ್ರಾಹಿಯಾದ ಸರ್ವಮಾನ್ಯವಾದ ಒಂದು ಗ್ರಂಥದ ಅವಶ್ಯಕತೆ ವಿಶೇಷವಾಗಿತ್ತು. ಆ ಕೊರತೆಯನ್ನು ತುಂಬುವುದರಲ್ಲಿ ತತ್ಪರರಾಗಿದ್ದೀರೆಂದೂ ರಾಮಾಯಣದ ಋಷಿ ವಾಲ್ಮೀಕಿಯಂತೆ ವಲ್ಮೀಕ ವಾಸಿಗಳಾಗಿದ್ದೀರೆಂದೂ ಕೇಳಿ ತಿಳಿದವರಾಗಿದ್ದೇವೆ. ನಿಮ್ಮ ಮಾನಸ ಗಂಗೋತ್ರಿಯಲ್ಲಿ ರೂಪಗೊಳ್ಳುತ್ತಿರುವ ಆ 'ಶರಣ ಸಿದ್ಧಾಂತ ಚಿಂತಾಮಣಿ' ಬೈಬಲ್, ಕುರಾನ್, ತ್ರಿಪೀಟಕ, ಗ್ರಂಥ ಸಾಹೇಬಾಗಳಿಗೆ ಮಿಕ್ಕಿಮೀರಿದ ಮಹತಿಯೊಂದಿಗೆ ಹೊರಬರಲಿ ಎಂದು ಹಾರ್ದಿಕವಾಗಿ ಹಾರೈಸುತ್ತೇವೆ.

ಶರಣರ ಉತ್ಕಟ ಅಭಿಮಾನಿಗಳು :

ವಿಕೃತ ವಿಮರ್ಶಕರು, ಸಂದೇಹಿ ಸಂಶೋಧಕರು, ಅರೆಬೆಂದವರು, ಅಪಕ್ವ ಮತಿಗಳು, ಕುತ್ಸಿತ ಕುಹಕಿಗಳು ಬಸವಾದಿ ಶರಣರ ಬಗೆಗೆ ಆಡಿದ ಅಸಂಗತ

ಮಾತುಗಳನ್ನು, ಬರೆದ ಅವಹೇಳನಕರ ಲೇಖನಗಳನ್ನು ಕೇಳಿ, ಓದಿ, ಕೆರಳಿ ಕೆಂಡ-ವಾಗುತ್ತೀರಿ. ಕೂಡಲೇ ಅಂಥವರನ್ನು ಸುಮ್ಮನೆ ಬಿಡದೆ ಅವರ ಮೇಲೆ ನಿಮ್ಮ ಗಾರುಡಿಯನ್ನು ಪ್ರಯೋಗಿಸಿ ಅವರ ಹೆಡೆ ಮುದುಡುವಂತೆ, ಅವರ ಜೋಡುನಾಲಿಗೆ ಒಳಗೆಳೆದುಕೊಳ್ಳುವಂತೆ ಮಾಡುತ್ತೀರಿ.

ಅವತರಿಸಿದ ಅಕ್ಕಮಹಾದೇವಿ :

ಅಂದು ಆತ್ಮೋನ್ನತಿ, ವಚನ ನಿರ್ಮಿತಿಗಳೆರಡನ್ನೇ ಮಾಡಿಕೊಂಡು ಗಿರಿಯ-ನವಿಲಾಗಿ, ಕದಳಿಯಕರ್ಪೂರವಾಗಿ, ತರಂಗಿಣಿಯಾಗಿ ಲಿಂಗಸಾಗರವನ್ನು ಸೇರಿದ ಆ ಅಕ್ಕನೇ ಈ ಮಾತೆಯಾಗಿ ಇಂದು ಭೂಮಿಗಿಳಿದು ಬಂದಿದ್ದಾರೆಂದು ಬಹುಜನರ ಭಾವನೆಯಾಗಿದೆ. ಆಗ ಉಳಿದು ಹೋದ ಧರ್ಮಜಾಗ್ರುತಿಯನ್ನು ಈಗ ಕೈಕೊಂಡಂತಿದೆ. ಅದಕ್ಕಾಗಿ ಹಲವು ಹತ್ತು ಕಾರ್ಯ-ಕಲಾಪಗಳನ್ನು ಹಮ್ಮಿಕೊಂಡು ಕಾರ್ಯನಿರತರಾಗಿದ್ದೀರಿ: ಶರಣ ಮೇಳ, ವಿಶ್ವಧರ್ಮ ಪ್ರವಚನ, ಸುಗ್ರಂಥ ಪ್ರಕಟಣೆ, ಚಲನಚಿತ್ರ ನಿರ್ಮಾಣ, ರಾಷ್ಟ್ರೀಯ ಬಸವ ದಳ, ಶರಣ ಸಂಸತ್ತು, ಧರ್ಮತರಬೇತಿ ಕೇಂದ್ರಗಳು, ಬಸವ ಧರ್ಮಪೀಠ, ಕಲ್ಯಾಣ ಕಿರಣ, ಮುಂತಾದವುಗಳು ನಿಮ್ಮ ಕಾರ್ಯಕೀರ್ತಿಯ ವಿಜಯ ಧ್ವಜಗಳಾಗಿವೆ.

ರಾಷ್ಟ್ರೀಯ ಬಸವ ದಳದ ಸಂಸ್ಥಾಪನಾಧ್ಯಕ್ಷರು :

ಕಳೆದ ಎಂಟುನೂರು ವರ್ಷಗಳಿಂದ ಅವ್ಯಾಹತವಾಗಿ ನಡೆದು ಬಂದ ಲಿಂಗಾಯತರ ಮೇಲಿನ ದಬ್ಬಾಳಿಕೆ, ಉದ್ದೇಶ ಪೂರ್ವಕವಾದ ವಿಘಟನೆಯ ಸುವ್ಯವಸ್ಥಿತ ಕಾರ್ಯವನ್ನು ಎದೆಗಾರಿಕೆಯಿಂದ ಎದುರಿಸಿ, ಸದಾ ನವ್ಯ ನೂತನವಾಗಿರುವ ವಿಶ್ವಮಾನ್ಯ ಬಸವ ತತ್ವಗಳನ್ನು ಎಲ್ಲೆಡೆ ಮುಟ್ಟಿಸುವ ಮಣಿಹವನ್ನೊತ್ತು, ಬಸವ ಪ್ರಣೀತ ಲಿಂಗಾಯತ ಧರ್ಮಕ್ಕೊಂದು ಹೊಸ ದಿಶೆಯನ್ನು ತೋರಲು ವೀರವಿರಾಗಿಣಿ ಅಕ್ಕ-ಮಹಾದೇವಿಯ ಅವತಾರವೆಂಬಂತಿರುವ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷೆ-ಯಾದ ನಿಮ್ಮನ್ನು ಶ್ರಾವಣ ಮಾಸದ ಅವ್ಯಾಹತವಾಗಿ ತಿಂಗಳಾನುವರ್ತಿ ನಡೆದ ವಚನ ವಿಶ್ಲೇಷಣೆ ಕಾರ್ಯಕ್ರಮದ ಮುಕ್ತಾಯ ಸಮಾರಂಭಕ್ಕೆ ಬರಮಾಡಿಕೊಂಡುದು ನಮಗೆಲ್ಲ ಅತ್ಯಂತ ಆನಂದ ತಂದ ಅಭೂತಪೂರ್ವ ಉತ್ಸವವಾಗಿದೆ. ತಮ್ಮ ಆಗಮನ ವಿಜಾಪುರ ಜಿಲ್ಲಾ ರಾಷ್ಟ್ರೀಯ ಬಸವ ದಳದ ಸದಸ್ಯರಿಗೆಲ್ಲ ಮತ್ತು ಸಂಪೂರ್ಣ ಬಸವ ತತ್ವಾನುಯಾಯಿಗಳಿಗೆಲ್ಲ ಗೌರವ ತಂದ ವಿಷಯವೆಂದು ನಾವೆಲ್ಲ ಅಭಿಮಾನ ಮತ್ತು ಆನಂದದಿಂದ ಪುಲಕಿತರಾಗಿದ್ದೇವೆ.

ವಿಜಾಪುರ ಜಿಲ್ಲೆಯ ರಾಷ್ಟ್ರೀಯ ಬಸವ ದಳಗಳ
ಸರ್ವ ಸದಸ್ಯರು ಮತ್ತು ಸಂಸತ್ಸದಸ್ಯರು

ಮಹಾಜಗದ್ಗುರು ಲಿಂಗಾನಂದರ ಸಂದೇಶ

ರಾಗ : ಮಿಶ್ರಕಾಫಿ **ತಾಳ : ಜಪತಾಳ**

ಕನ್ನಡದ ನೆಲದಿಂದ ವಿಶ್ವಕಿದು ಸಂದೇಶ
ಕಲ್ಯಾಣ ಕಣ್ಮಣಿಯು ವಿಶ್ವಗುರು ಬಸವೇಶ ॥ಪಲ್ಲವಿ॥

ಕರುಣೆ ತೋರುವ ಗುರುವು ಲಿಂಗಾನಂದರುಪದೇಶ
ಕರುನಾಡ ಜನತೆಗೆ ಅರಿವಿನ ಸಮಾವೇಶ ॥ಅನುಪಲ್ಲವಿ॥

ಸರಳ ಕನ್ನಡದೊಳಗೆ ಅನುಭವದ ಸುಧೆ ಬೆರೆಸಿ
ಸಂತ-ಶರಣರ ವಚನ ವಾಣಿಯನು ತಿಳಿಸಿ
ಸರ್ವರಲಿ ಸಮತೆಯ ಭಾವನೆಗಳನು ಬೆಳೆಸಿ
ಸಮಾಜ ತಿದ್ದುತಲಿಹರು ತಾವೇ ಬಂದು ಅರಸಿ ॥೧॥

ಭಾರತ ಮಾತೆಯ ವರಪುತ್ರರು ಇವರು
ಭಾವ-ಐಕ್ಯತೆಗಾಗಿ ಕಂಕಣವ ತೊಟ್ಟವರು
ಗುರು ಬಸವನ ವರವ ಪಡೆದು ಬಂದವರು
ಭಾರತೀಯಂತೆ ಹಿರಿಮೆ ತಾವ್ ಮೆರೆಸುತಿಹರು ॥೨॥

ಮಾನವರಲೆಂದೆಂದು ಮತ-ಭೇದವು ಬೇಡ
ಮಾನಿನಿಯು ಕೀಳೆಂದು ಭಾವಿಸಲು ಬೇಡ
ಮಾಯೆಯಾ ಒಲವಿನಲಿ ಬದುಕುವುದು ಬೇಡ
ಮಾನವ ದಾನವನು ಆಗುವುದು ಬೇಡ ॥೩॥

ನಿರಂಜನ ಸ್ವರೂಪಿಗಳು ಲಿಂಗಾನಂದ ಮಹಿಮರು
ನಿರುತ ಜನ ಜಾಗೃತಿಗೆ ಪ್ರವಚನವಗೈವರು
ನಿತ್ಯ ಸತ್ಯ ಸಾರುವ ಜಗದ್ಗುರುಗಳಿವರು
ನಿಸ್ವಾರ್ಥ ಸೇವೆಗಿಂದು ಮಾದರಿಯೆ ಆಗಿಹರು ॥೪॥

ಜಗದ ಉದ್ಧಾರಕ್ಕೆ ಇಳೆಗೆ ಬಂದವರಿವರು
ಜಗದೊಡೆಯ ದೇವನ ಒಲುಮೆ ಪಡೆದವರು
ಜಗದೀಶನಾದೇಶದಂತೆ ಬದುಕುವರು
ಜಗಜ್ಯೋತಿ ಬಸವನ ಕರುಣೆಯಾ ಕಂದರು ॥೫॥

ಈಶ್ವರಚಂದ್ರ. ಎಸ್. ಬೆಟಗೇರಿ
ದೂರವಾಣಿ ಕೇಂದ್ರ-ಗೋಕಾಕ

೨೫-೧೦-೧೯೯೪

ಶರಣು ಲಿಂಗಾನಂದ ಪ್ರಭುವೆ
(ಲಾವಣಿಯ ಧಾಟಿಯಲ್ಲಿ ಹಾಡಲು ಬರುವುದು)

ಲೋಕದ ಜನಮನ ಜಾಗೃತಿಗೊಳಿಸಲು
ಧರೆಗವತರಿಸಿದ ಚೇತನವೆ ‖ ಪಲ್ಲವಿ ‖

ವಿಶ್ವಧರ್ಮದ ಸುಧೆಯನು ಸವಿಸಿದ
ಶರಣು–ಲಿಂಗಾನಂದ ಹೇ ಗುರುವೆ ‖ ಅನುಪಲ್ಲವಿ ‖

ತತ್ತ್ವಾಮೃತ ಸವಿಬುತ್ತಿಯ ಕಟ್ಟಿ
ಬಸವ ಧರ್ಮದ ಜ್ಯೋತಿಯ ಎತ್ತಿ ।
ಮನುಕುಲ ಮನ–ಮನೆ ಬಾಗಿಲ ತಟ್ಟಿ
ಉಣಿಸುತ ನಡೆದಿರಿ ನಾಡನು ಸುತ್ತಿ ‖೧‖

ಮೂಢನಂಬಿಕೆಯ ಮೌಢ್ಯತೆ ಕಳೆದು ।
ಸಂಕೋಚತೆಯ ಸಂಕೋಲೆ ತೊಡೆದು ।
ಧರ್ಮದ ಧ್ವಜವನು ಹಿಡಿದು ಮುನ್ನಡೆದು
ಧರ್ಮಾಗಸದಲಿ ಬೆಳಕನು ಬಿಡಿದು ‖೨‖

ಶರಣ ಸಾಹಿತ್ಯದ ಅನುಭವ ಸಾರ
ಸಕಲ ಜೀವಾತ್ಮರ ಹಿತದ ವಿಚಾರ ।
ಎಲ್ಲ ಧರ್ಮಗಳ ಮೂಲ ಆಧಾರ
ಲಿಂಗದ ನಿಜವನು ತಿಳಿಸಿದ ಧೀರ ‖೩‖

ಸತ್ಯಕಾಯಕದಿ ನಿಷ್ಠೆಯನಿರಿಸಿ
ಜಂಗಮ ತತ್ತ್ವದ ಘನತೆಯಾಧರಿಸಿ
ಜನಹಿತಕಾಗಿ ತನುಮನ ಸವೆಸಿ
ಧರ್ಮದೇಳಿಗೆಗೆ ಸತತವೂ ಶ್ರಮಿಸಿ ‖೪‖

ವ್ಯಾಮೋಹಕೆ ಸಿಲುಕದೇ ವೈಭವವೊಲ್ಲದೆ
ಖ್ಯಾತವನು ಬಯಸದ ಮಹಾ ಘಟವೆ ।
ಅಧ್ಯಾತ್ಮದ ಮಂಥನ ಧರ್ಮದ ಚಿಂತನ
ಸಂಗಮವಾಗಿಹ ಶ್ರೀ ಗುರುವೆ ‖೫‖

ಹೆಣ್ಣು ಮಾಯೆ ಎಂಬುವರನು ಜರಿದಿರಿ
ಶರಣರು ಸಾರಿದ ಸಮತೆಗೆ ಒಲಿದಿರಿ ।
ಮಾತಾಜಿಗೆ ಗುರು ಪೀಠವ ನೀಡಿ
ಸಮತೆಯ ಕ್ರಾಂತಿಗೆ ಮೊದಲಿಗರಾಗಿ ‖೬‖

ಸಚ್ಚಿದಾನಂದನ ಕರುಣೆಯ ಕಂದರೆ
ಬಸವನ ಭಕ್ತಿಯ ಕಲ್ಪತರು ।
ವಚನ ವಾಙ್ಮಯ ಜ್ಞಾನದ ಪಠವೆ
ಸ್ವಾನುಭಾವದ ಜೇನಿನ ಆಗರ ‖೭‖

27-10-1994
ಗೋಕಾಕ.

ರಚನೆ : ಶ್ರೀ ಮಹಾದೇವ ಗುಜೇರ
ಜೆ. ಎಸ್. ಎಸ್. ಕಾಲೇಜ್

[8 ನೇ ಪುಟದಿಂದ ಮುಂದುವರಿದಿದೆ]

"ಚೆನ್ನಬಸವಣ್ಣನೆನ್ನ ಪರಮಾರಾಧ್ಯರು
ಚೆನ್ನಬಸವಣ್ಣನ ಪ್ರಸಾದವ ಕೊಂಡು ಜ್ಞಾನ ಸಂಪನ್ನನಾದೆನಯ್ಯಾ"

—ಅಕ್ಕಮಹಾದೇವಿ

"ಎನ್ನಲಲಾಟದಲ್ಲಿ ಓಂಕಾರವಾಗಿದ್ದಾತ ಚೆನ್ನಬಸವಣ್ಣ
....
ಚೆನ್ನಬಸವನಲ್ಲದೆ ಮತ್ತೊಬ್ಬನ ಕಾಣೆ ನೋಡಾ"

—ಸಿದ್ಧರಾಮ

ಎಂದು ಮುಂತಾಗಿ–ಅಲ್ಲಮ ಪ್ರಭು ಆದಿಯಾಗಿ ಉಳಿದೆಲ್ಲ ಶರಣರ ಕಡೆಯಿಂದ ಪ್ರಶಂಸೆಗೆ ಕಾರಣನಾಗಿದ್ದ, 'ನಿಮ್ಮ ಶರಣ ಲೋಕದಿಚ್ಛೆಯ ನಡೆಯ' ಎಂದು ತನ್ನತನವನ್ನು ಪ್ರಕಟಿಸಿಯೇ ಬಿಟ್ಟಿದ್ದ ಚೆನ್ನಬಸವಣ್ಣನನ್ನ ಶಿವಪ್ರಕಾಶರು ತಮ್ಮ ದಿವ್ಯ ಕಲ್ಪನೆಯಲ್ಲಿ ಹೇಡಿಯಂತೆ ಚಿತ್ರಿಸಿದ್ದಾರೆ. ಹೀಗೆ ಚಿತ್ರಿಸಿದ್ದಕ್ಕೆ ಆಧಾರಗಳೇನಾದರೂ ಇವೆಯೆ ?

ಶ್ರೀ ಬಸವಣ್ಣನವರ ವ್ಯಕ್ತಿತ್ವವನ್ನು ಅವರ ಬೆನ್ನ ಹಿಂದೆಯೇ ನಿಂತು ಕಟ್ಟಿದ, ಬಸವಣ್ಣನವರ ಆಲೋಚನೆ ಮತ್ತು ಕ್ರಿಯಾಶಕ್ತಿಗೆ ಮೂಲ ಪ್ರೇರಕಳಾದ ಅವರ ಅಕ್ಕ ಅಕ್ಕನಾಗಮ್ಮಳನ್ನಂತೂ 'ಆದಿನಾಥಯ್ಯ' ಎಂಬುವವನ ಮೂಲಕ 'ಅವನ ನೀತಿಗೆಟ್ಟ ಅಕ್ಕ' [ಪುಟ ೧೯] ಎಂದು ಹೇಳಿಸುವ ಶಿವಪ್ರಕಾಶರ ಈ ಮಾತುಗಳು, ಅವರ ಹೊಲಸು ಮನಸ್ಸಿನ ಪ್ರತಿಬಿಂಬ ಎಂದೇ ಹೇಳಬೇಕಾಗುತ್ತದೆ.

ಆದಿನಾಥಯ್ಯ : "ಒಬ್ಬ ಬತ್ತಲೆ ಹೆಂಗಸು ಕಲ್ಯಾಣದ ಬೀದಿ ಬೀದಿಲಿ ಶಿವನೇ ಗಂಡ, ಶಿವನೇ ಗಂಡ ಅಂತ ಅಡ್ಡಾಡಿದಳು"
ಮುಕುಂದಭಟ್ಟ : "ಏನೇ ಹೇಳಿ ಕೈ ತೊಳೆದು ಮುಟ್ಟಬೇಕು ಹಾಗಿದ್ದಳು"
ಆದಿನಾಥಯ್ಯ : "ಕಲ್ಯಾಣದಲ್ಲಿ ಮರ್ಯಾದಸ್ಥ ಹೆಣ್ಣುಮಕ್ಕಳು ಸೆರಗಲಿ ಮುಖ ಮುಚ್ಚಿಕೊಳ್ಳೋ ಹಾಗಾಯಿತು"

[ಪುಟ : ೨೦/೨೧]

ಎಂಬ ಅಪಚಾರದ, ಕೇವಲ ಕುಹಕ ಕಲ್ಪನೆಯಲ್ಲಿ ಮಾತ್ರ ಗೋಚರಗೊಳ್ಳುವ ಇಂಥ ಮಾತುಗಳನ್ನು ಓದದೆ ಶಿವಪ್ರಕಾಶರ ಬೆನ್ನು ಚಪ್ಪರಿಸಲು ತುದಿಗಾಲ ಮೇಲೆ ನಿಂತ ನಮ್ಮ ಬಂಡಾಯಗಾರರ ಬಂಡಾಯತನ ಎಂಥದು ಎಂದು ಗೊತ್ತಾಗುತ್ತದೆ.

ಇಂದಿನ 'ಜಾತಿ ಜಂಗಮ' ರನ್ನು ಕಣ್ಣು ಮುಂದಿಟ್ಟುಕೊಂಡು ಅಂದಿನ ಜಾತಿ ಸೂಚಕವಲ್ಲದ : 'ಜಂಗಮವೇ ಲಿಂಗ, ಲಿಂಗವೇ ಜಂಗಮ' 'ಲಿಂಗವು ಜಂಗಮದ ಮುದ್ರೆ, ಜಂಗಮವೇ ಮುದ್ರಾಪತಿ,' 'ಜಂಗಮವು ಒಂದೆಡೆ ನಿಲ್ಲದೆ ಎಲ್ಲೆಡೆ ಸಂಚರಿಸುವವನು,' 'ಜಂಗಮಕ್ಕೆ ಜಾತಿ ಇಲ್ಲ, ಜಂಗಮದಲ್ಲಿ ಜಾತಿ ಕುಲವನು ಅರಸುವಾತ ಗುರುದ್ರೋಹಿ'–ಎಂಬುದನ್ನು ಗ್ರಹಿಸಿಕೊಳ್ಳುವ ಸಾಮರ್ಥ್ಯವಿಲ್ಲದೆ 'ಜಂಗಮ' ರನ್ನು

ತಿಂಡಿಪೋತರು, ಜಾತಿವಾದಿಗಳು, ಸಮಯಸಾಧಕರಂತೆ ಚಿತ್ರಿಸಿದ ಶಿವಪ್ರಕಾಶರಿಗೆ 'ಕತ್ತೆಗೇನು ಗೊತ್ತು ಕಸ್ತೂರಿಯ ಪರಿಮಳ ?' ಎಂದು ಕೇಳದೆ ವಿಧಿಯಿಲ್ಲ.

ಶ್ರೀ ಬಸವಣ್ಣನವರನ್ನು ಹಚ್ಚಿಕೊಂಡಿದ್ದ ಹಾಗೂ ಅವರನ್ನು ಬಾಯ್ತುಂಬಿ, ಮನದುಂಬಿ 'ಬಸವಣ್ಣನನ್ನು ನೆನೆಯುವುದೇ ಲಿಂಗಾರ್ಚನೆ' ಎಂದು ಸಂಭ್ರಮ ಪಟ್ಟಿದ್ದ ಮಾಚಿದೇವ ಎಂಬ ಶರಣರ ಬಾಯಿಂದ :

"ನಾವು ಬಸವಣ್ಣನವರ ಬಿಟ್ಟಿ ಆಳುಗಳಲ್ಲ" [ಪುಟ : ೧೨]
"ಅವರು ನಮ್ಮನ್ನು ನಡು ನೀರಿನ ತನಕ ಬಿಟ್ಟು ಹೋಗಿದ್ದಾರೆ.
ದಡ ಸೇರಬೇಕಾದದ್ದು ನಮ್ಮ ಕೆಲಸ" [ಪುಟ : ೧೪]

ಎಂದು ಅತ್ಯಂತ ಅವಹೇಳನಾತ್ಮಕ ಮಾತುಗಳನ್ನಾಡಿಸಿದ ಶಿವಪ್ರಕಾಶ ಅವರ ದಾಷ್ಟ್ರ್ಯ ಎಂಥದ್ದು ?

ನಾಳೆ ಬರುವುದು ನಮಗಿಂದೇ ಬರಲಿ, ಇಂದು ಬರುವುದು ನಮಗೀಗಲೇ ಬರಲಿ, ಜಾತಸ್ಯ ಮರಣಂ ಧ್ರುವಂ, ಛಲ ಬೇಕು ಶರಣಂಗೆ ಬಿಟ್ಟುದ ಹಿಡಿಯೆನೆಂಬ, ಹಿಡಿದುದ ಬಿಡೆನೆಂಬ, ಕೊಲುವೆನೆಂಬ ಭಾಷೆ ದೇವನದಾದರೆ ಗೆಲುವೆನೆಂಬ ಭಾಷೆ ಭಕ್ತನದು, ಬಾರದು ಬಪ್ಪದು, ಬಪ್ಪದು ತಪ್ಪದು, ಉರಿಬರಲಿ ಸಿರಿಬರಲಿ ಬೇಕು ಬೇಡೆಂದೆನ್ನೆ, ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ, ಆರು ಮುನಿದು ನಮ್ಮನೇನು ಮಾಡುವರು ? ಊರು ಮುನಿದು ನಮ್ಮನೆಂತು ಮಾಡುವುದು, ? ಕಾಯದ ಕಳವಳಕ್ಕಂಜಿ ಕಾಯಯ್ಯಾ ಎನ್ನೆನು, ಜೀವದ ಕಳವಳಕ್ಕಂಜಿ ಈಯಯ್ಯಾ ಎನ್ನೆನು, ಯದ್ಭಾವಂ ತದ್ಭವತಿ ಬೇಕು ಬೇಡೆನ್ನೆನು, ಅಂಜಲದೇಕೋ ಅಳುಕಲದೇಕೋ ಲೋಕ ವಿಗುರ್ಭಣೆಗೆ ?–ಎಂಬ ಅತ್ಯಂತ ವಿರೋಚಿತ ಮಾತುಗಳನ್ನಾಡಿ ಹಾಗೂ ಅದರಂತೆ ಬದುಕಿದ ಕ್ರಾಂತಿ ಪುರುಷ ಬಸವಣ್ಣನವರನ್ನ ಹೇಡಿಗಳಂತೆ ಆತ್ಮಹತ್ಯೆ (ಹೊಳೆಯಲ್ಲಿ ಹಾರಿ ಸತ್ತರು) ಮಾಡಿಕೊಂಡರು ಎಂದು ಸಾಧಿಸ ಹೊರಡುವ ಅಥವಾ ಚಿತ್ರಿಸುವ

"ಬಸವರಸರು ಇನ್ನೂ ಧ್ಯಾನ ಮುದ್ರೆಯಲಿ
ಆ ರಾತ್ರಿ.....................................
ಮಾರನೆಯ ದಿನ ಬೆಳಿಗ್ಗೆ ಬಸವಣ್ಣನೋರ ಕಾಯ ಇರಲಿಲ್ಲ
ಸಂಜೆ ಹೊತ್ತಿಗೆ ಬೆಸ್ತರು ಬಲೆ ಬೀಸಿದಾಗ ಸಿಕ್ಕಿತು
ನೀರು ಕುಡಿದು ಬಿಟ್ಟಿತ್ತು, ಗುರುತೆ ಸಿಕ್ತಾ ಇರ್ಲಿಲ್ಲ........"
[ಪುಟ : ೫೬]

ಎಂಬ ಬಸವಣ್ಣನವರ ಚಾರಿತ್ರ್ಯಕ್ಕೆ ಕಲಂಕವನ್ನುಂಟು ಮಾಡುವ ಈ ಮಾತುಗಳನ್ನು ಓದಿದ ಯಾವ ಸಾತ್ವಿಕ ಸಿಟ್ಟಿಗೇಳಲಾರ ?

"ಮಹಾಚೈತ್ರ" ದ ತುಂಬೆಲ್ಲ ಶರಣರ ಘನವಾದ ವ್ಯಕ್ತಿತ್ವಕ್ಕೆ ಮಸಿ ಬಳಿಯಲಾಗುವ ಇಂಥ ಅವಿವೇಕ ಕಲ್ಪನೆಗಳೇ ತುಂಬಿಕೊಂಡಿವೆ. ಬಸವಣ್ಣ ಹಾಗೂ ಅಂದಿನ ಶರಣರ ಎತ್ತರ–ಬಿತ್ತರಗಳನ್ನು ಅರಿಯುವ ತಾಕತ್ತಿಲ್ಲದೆ ಶಿವಪ್ರಕಾಶ ತಮ್ಮ ಹೊಲಸು ಬುದ್ಧಿಗೆ ಏನೇನು ಹೊಳೆದಿದೆಯೋ ಅದೆಲ್ಲವನ್ನೂ ಇಲ್ಲಿ ಬರೆದಿದ್ದಾರೆ. ಈ ಮೂಲಕ ಪ್ರಸಿದ್ಧರಾಗುವ ಹುನ್ನಾರ ಬೇರೆ ನಡೆಸಿದ್ದಾರೆ. ಇದು ಅತ್ಯಂತ ನಾಚಿಕೆಯ ಹಾಗೂ ಖಂಡನಾರ್ಹ ಸಂಗತಿ.

ಶಿವಪ್ರಕಾಶರ ಇಂಥ ಉಪದ್ವ್ಯಾಪಿತನವನ್ನ ಅರಿತೋ–ಅರಿಯದೆಯೋ ಒಮ್ಮೊಂದೊಮ್ಮೆ ಅವರ ಬಾಲಬಡುಕರಂತೆ ಕರ್ನಾಟಕದ ಉದ್ದಗಲಕ್ಕೂ ಪತ್ರಿಕಾ ಹೇಳಿಕೆಗಳನ್ನು ನೀಡುತ್ತಿರುವ ಬಂಡಾಯಿ (ಡಂಬಾಯ) ಗಾರರು ಈಗ ಹಿಡಿದಿರುವ ಹಾದಿ ಎಂಥದು ಎಂದು ಇದರಿಂದ ಗೊತ್ತಾಗುತ್ತದೆ.

ಶಹಾಪುರ —ವಿಶ್ವಾರಾಧ್ಯ ಸತ್ಯಂಪೇಟೆ
ಜಿಲ್ಲೆ–ಗುಲಬರ್ಗಾ ಸಂಪಾದಕರು, ಅಗ್ನಿ ಅಂಕುರ

ಕನ್ನಡ ನಾಡು

ನೋಡು ನೋಡು ಕನ್ನಡ ನಾಡು
ಧರೆಯೊಳು ಬೆಳಗುವ ಹೆಮ್ಮೆಯ ಬೀಡು
ನೋಡು ನೋಡು ಕನ್ನಡ ನಾಡು........... ॥1॥

ಜಿಲ್ಲೆ 20 ತಾಲೂಕು 175
ಗ್ರಾಮಂಗಳು 30 ಸಾವಿರಕ್ಕೂ ಮೇಲು
245 ಪ್ಯಾಟಿ ಪಟ್ಟಗಳ ಬೀಡು
ನೋಡು ನೋಡು ಕನ್ನಡ ನಾಡು........... ॥2॥

ಕ್ಷೇತ್ರ 2 ಲಕ್ಷ ಚದುರ ಕಿಲೋಮೀಟರು
ಅರಣ್ಯ ಪ್ರದೇಶ 28 ಲಕ್ಷ ಹೆಕ್ಟೇರು
ಕಡಲ ತೀರ 320 ಕಿಲೋ ಮೀಟರು
ಮಾವು ಮತ್ತಿ ತೇಗ ಶ್ರೀಗಂಧದ ಬೀಡು
ನೋಡು ನೋಡು ಕನ್ನಡ ನಾಡು........... ॥3॥

ಕೃಷ್ಣೆ ಕಾವೇರಿ ಶರಾವತಿ
ನದಿ ಜಲಾಶಯಗಳ ಹರವು ನೋಡು
ಸೊಂಪಾಗಿ ಬೆಳೆಯುವ ಕಣಜದ ಬೀಡು
ನೋಡು ನೋಡು ಕನ್ನಡ ನಾಡು........... ॥4॥

ದಾಂಡೇಲಿ ಬಂಡಿಪುರ
ಬನ್ನೇರಘಟ್ಟ ನಾಗರಹೊಳೆ
ನಿಬಿಡ ಕಾಡು ಅರಣ್ಯಗಳ ಜಾಡು
ಹುಲಿ ಸಿಂಹ ಆನೆಗಳ ಬೀಡು
ನೋಡು ನೋಡು ಕನ್ನಡ ನಾಡು............ ॥5॥

ರಂಗನತಿಟ್ಟು ಮಂದಗಡ್ಡೆ
ಬಗೆಬಗೆಯ ಪಕ್ಷಿಧಾಮಗಳ ತವರೂರು
ಸೃಷ್ಟಿ ಸೌಂದರ್ಯದ ನೆಲೆವೀಡು
ನೋಡು ನೋಡು ಕನ್ನಡ ನಾಡು............ ॥6॥

ಶಿವಗಂಗೆ ವರಾಹಿ ಮಾಗೋಡು
ಜೋಗ ಜಲಪಾತಗಳ ಅಬ್ಬರ ನೋಡು
ಹಂಪಿ ಹಳೆಬೀಡು ಬೇಲೂರು
ಐಹೊಳೆ ಪಟ್ಟದಕಲ್ಲು ಶಿಲ್ಪಕಲೆಯ ಬೀಡು
ನೋಡು ನೋಡು ಕನ್ನಡ ನಾಡು............ ॥7॥

ಕುದುರೆಮುಖ ಕಬ್ಬಿಣದ ಖಣಿ
ಕೋಲಾರ ಹಟ್ಟಿ ಚಿನ್ನದ ಗಣಿ
ವಿಪುಲ ಖನಿಜ ಹೇರಳ ಸಂಪನ್ಮೂಲ
ನೋಡು ನೋಡು ಕನ್ನಡ ನಾಡು............ ॥8॥

ಗೋಕರ್ಣ ಶ್ರವಣಬೆಳಗೊಳ
ಶ್ರೀಂಗೇರಿ ಶಿರಸಿ ಸೌದತ್ತಿ
ಉಳವಿ ಕಲ್ಯಾಣ ಕೂಡಲ ಸಂಗಮ
ಧಾರ್ಮಿಕ ಸ್ಥಳಗಳ ಕಣ್ಣಾರೆ ನೋಡು
ನೋಡು ನೋಡು ಕನ್ನಡ ನಾಡು............ ॥9॥

ಶಿಕ್ಷಣ ಸಾಹಿತ್ಯ, ಕಲೆ ಕಾವ್ಯ
ಶಾಂತಿ ಸಂಪತ್ತಿನ ನೆಲೆವೀಡು
ಪುಣ್ಯದ ನಾಡು, ಸ್ವರ್ಗದ ಬೀಡು
ನೋಡು ನೋಡು ಕನ್ನಡನಾಡು............ ॥10॥

ಬಿಜಾಪುರ
1-11-1994

—ಕುಮಾರ ಕಕ್ಕಯ್ಯ ಪೋಳ

[ಬಿಜಾಪುರ ದಿನಾಂಕ 1-11-1994 ರಂದು, ರಾಜ್ಯೋತ್ಸವ ಕವಿಗೋಷ್ಠಿಯಲ್ಲಿ ಹಾಡಿದ ಸ್ವರಚಿತ ಕವನ.]

ಮಹಾಚೈತ್ರ ವಿರುದ್ಧ ಹೋರಾಟಕ್ಕೆ ಪ್ರೇರಣೆ ನೀಡಿದ ಪತ್ರ

ರಾಯಚೂರು
16-9-1994

ಶ್ರೀ ಬಸವ ಧರ್ಮ ಪೀಠದ ಸನ್ನಿಧಿಗೆ,

ಇತ್ತ ರಾಯಚೂರಿನಿಂದ B.A. I Year ವಿದ್ಯಾರ್ಥಿ ಶಿವಕುಮಾರನ ದೀರ್ಘದಂಡ ಪ್ರಣಾಮಗಳು. ಪೂಜ್ಯರೇ, ಈ ವರ್ಷ B. A. I ಗೆ ಗುಲಬರ್ಗಾ ವಿಶ್ವವಿದ್ಯಾಲಯದವರು ಹೊಸ ಪಠ್ಯಪುಸ್ತಕವನ್ನು Basic ವಿಷಯವಾಗಿ ಸೇರಿಸಿದ್ದಾರೆ. ಅದರ ಹೆಸರು 'ಮಹಾಚೈತ್ರ'. ಇದರ ಲೇಖಕರು H.S. ಶಿವಪ್ರಕಾಶರು. ಈ 'ಮಹಾಚೈತ್ರ' ಪುಸ್ತಕವು ಹಲವಾರು ದೋಷಪೂರಿತವಾಕ್ಯಗಳಿಂದ ಕೂಡಿದ್ದು, ವಿಶ್ವಗುರು ಬಸವಣ್ಣನವರನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವಲ್ಲಿ ವಿಫಲವಾಗಿದೆ. ಅಷ್ಟೇ ಅಲ್ಲದೇ ಬಸವಣ್ಣನವರ ತೇಜೋಭಂಗಮಾಡುವ ದೃಷ್ಟಿಯಿಂದ ಬರೆದುದಾಗಿದೆ. ಇದಕ್ಕಾಗಿ ಅದರಲ್ಲಿರುವ ಈ ಕೆಳಗಿನ ಅಂಶಗಳನ್ನು ತಮ್ಮಲ್ಲಿ ನಿವೇದಿಸುತ್ತಿದ್ದೇನೆ.

1. ಬಸವಣ್ಣನವರು ಭಂಡಾರದ ಹಣವನ್ನು ದೋಚಿದರೆಂಬಂತೆ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. (ಪುಟ 8)
2. ಚೆನ್ನಬಸವಣ್ಣಪಾತ್ರ : ಸಾಂತಳಿಗೆಯ ಮಾಂಡಲಿಕರು ಶೈವಮಠದವರು ನಮ್ಮ ಪಕ್ಷ ಪಾತಿಗಳಾಗಿದ್ದು, ನಮಗೆ ರಕ್ಷಣೆ ನೀಡುತ್ತಾರೆ (ಪುಟ 14)
3. ಬಹುರೂಪಿ ಚೌಡಯ್ಯನ ಪಾತ್ರ : ಮೂರನೆಯ ದಿನ ನದಿ ದಂಡೆಯ ಮೇಲೆ ಬಸವಣ್ಣನವರ ಕಾಯ ಇರಲಿಲ್ಲ. ಸಂಜೆ ಹೊತ್ತಿಗೆ ಬೆಸ್ತರೋನು ಬಲೆ ಬೀಸಿದಾಗ ಸಿಕ್ಕಿತು. ನೀರು ಕುಡಿದಿತ್ತು. ಗುರುತೇ ಸಿಕ್ಕಲಿಲ್ಲ. ನದಿ ಹರೀತಾ ಇತ್ತು. (ಪುಟ 63)
4. ಕಲಕೇತಯ್ಯನ ಪಾತ್ರ : ಹೇಗಪ್ಪ ನೀಲಾಂಬಿಕೆಗೆ ಬಸವಣ್ಣನವರ ಸಾವಿನ ಸುದ್ದಿ ತಿಳಿಸೋದು ? ಎಂಥಾ ಕಲ್ಲೆದೇನೂ ಬಿರಿಸೋ ಸುದ್ದೀನಾ ? (ಪುಟ 49)

   ಬಹುರೂಪಿಚೌಡಯ್ಯ : ಹೆದರಬೇಡಿ....ಆ ಎದೆ ಕಲ್ಲಿನದಲ್ಲ ವಜ್ರದ್ದು ! (ಪುಟ 49)

ಬ್ರಾಹ್ಮಣರ ಬಾಯಿಯಿಂದ ಬಸವಣ್ಣನವರನ್ನು 'ಬಸವಾಸುರ' ಎಂದು ನಾಟಕಕಾರರು ಕರೆಯಿಸಿದ್ದಾರೆ. (39 ಪುಟ)

ಬೊಮ್ಮಯ್ಯನ ಪಾತ್ರ : ಆ ಬಸವಣ್ಣೋರ ಮಾತ್ಕಟ್ಕಂಡು ಇದೆಲ್ಲಾ ಪರಿಪಾಟಲು. ಇನ್ನಿಮ್ ಸವಾಸ ಸಾಕು ಒನ್ನನ್ನಲ ಅನ್ನುಸ್ತದೆ....ಕಾಳವ್ವಂಗೆ ಕುರಿ ಕೋಳಿ ಕೊಡದ್ಬಿಟ್ಬಿಟ್ವಿ ಅಂತ ಇದೆಲ್ಲ ಗ್ರಹಚಾರ ಬಂತೇನೋ. (ಪುಟ 36)

ನೀಲಾಂಬಿಕೆಯ ಪಾತ್ರ : (ಬಿಜ್ಜಳನನ್ನುದ್ದೇಶಿಸಿ) ಚಿಂತೆಬೇಡ. ನೀವಿಲ್ಲದೆ ಯಾರು ಚಕ್ರವರ್ತಿಗಳಾಗಿದ್ದರೂ ಬಸವರಸರ ಕಥೆ ನೀರಿನಲ್ಲೆ ಮುಗಿಯುತ್ತಿತ್ತು. (ಪುಟ 61)

ಚಂದ್ರುಶೆಟ್ಟಿ ಪಾತ್ರ : ಈಚೀಚೆಗೆ ಬಸವಣ್ಣೋರು ತಾವು ಕಟ್ಟಿದ್ದನ್ನೇ ಕೆಡುವುತ್ತಾ ಇದ್ದರಂತೆ.

ಹೀಗೆ ಅರ್ಥವಿಲ್ಲದೇ ಏನೇನನ್ನೋ ಈ ಪುಸ್ತಕದಲ್ಲಿ ಬರೆಯಲಾಗಿದೆ. ಈ ಅಸಂಬದ್ಧ ಪುಸ್ತಕಕ್ಕೆ ಹಲವಾರು ಜನ ಕವಿಗಳು ಮತ್ತು ಜನಪ್ರಿಯ ಪತ್ರಿಕೆಗಳು [ಪುರೋಹಿತಶಾಹಿಗಳಿರಬೇಕೆಂದು ನನ್ನ ಅನಿಸಿಕೆ] ಮೆಚ್ಚಿಕೊಂಡಿದ್ದಾರಲ್ಲದೇ ಹಿನ್ನುಡಿಯನ್ನು ಬರೆದಿದ್ದಾರೆ. ವಿಶ್ವದ ಪ್ರಪ್ರಥಮ ಸ್ವತಂತ್ರಚಿಂತನಕಾರ ಬಸವೇಶ್ವರರನ್ನು ಹೀಗೆ ವಿದ್ಯಾರ್ಥಿಗಳಿಗೆ ಪರಿಚಯಿಸುವದೆಂದರೇನು ? ಮೇಲೆ ಬರೆದ ಅಂಶಗಳಲ್ಲದೇ ಅನೇಕ ಅಸಮಂಜಸ ವಾಕ್ಯಗಳನ್ನು ಜೋಡಿಸಿಕೊಂಡಿದ್ದಾರೆ. ಬಸವಣ್ಣನವರು ಕಲ್ಯಾಣ ಬಿಟ್ಟು ಹೋದ ಮೇಲೆ ಶರಣರೆಲ್ಲರೂ ನೀತಿತಪ್ಪಿದರೆಂಬಂತೆ ಚಿತ್ರಿಸಲಾಗಿದೆ.

ಬಸವದ್ವೇಷವನ್ನು ಒಳಗಿಟ್ಟುಕೊಂಡು, ಬೂದಿಮುಚ್ಚಿದ ಕೆಂಡದಂತೆ ಈ ಪುಸ್ತಕ ರಚನೆಯಾಗಿದೆ.

ಇದನ್ನು (ಮಹಾಚೈತ್ರ) ಈಗಾಗಲೇ ಮಂಗಳೂರು ವಿಶ್ವವಿದ್ಯಾಲಯದಲ್ಲಿ (91–94) ಪಠ್ಯವಸ್ತುವನ್ನಾಗಿಸಿಕೊಂಡಿದ್ದರೆಂದು ಈ ಪುಸ್ತಕದಿಂದಲೇ ತಿಳಿದುಬರುತ್ತದೆ. ವಚನಗಳನ್ನು ಯದ್ವಾತದ್ವಾ ಬಳಸಿಕೊಂಡಿದ್ದಾರೆ.

ಬಸವಾಭಿಮಾನಿಗಳಾದ ಹಲವಾರು ಉಪನ್ಯಾಸಕರು ಇದನ್ನು ಮಾನ್ಯಮಾಡಿದರೆಂದರೆ ಲಿಂಗಾಯತ ಧರ್ಮದ ಬರಡುತನವನ್ನು ಸೂಚಿಸದೇ ಮತ್ತೇನು ? ಸಾಹಿತ್ಯಕ ಪುಢಾರಿ 'ಚಂಪಾ' ಒಂದು ಕಲಂಕ ಹಚ್ಚಿದರು. ಸ್ವಾಮೀಜಿಯೊಬ್ಬರು ಒಂದು ಅಸಂಬದ್ಧ ಹೇಳಿಕೆ ನೀಡಿದರು. ಹೀಗಾದರೆ ಬಸವ ಭಕ್ತರ ಗತಿಯೇನು ?

ವಿದ್ಯಾರ್ಥಿಯಾದ ನಾನು ಇಷ್ಟನ್ನು ಮಾತ್ರ ತಮ್ಮ ಮುಂದೆ ತಿಳಿಸುತ್ತಿದ್ದೇನೆ. ಏನೇ ಆಗಲಿ ಈ ಪುಸ್ತಕವನ್ನು ಹಿಂತೆಗೆದುಕೊಳ್ಳುವಂತೆ ಪ್ರತಿಭಟಿಸಬೇಕು. ಇಲ್ಲದಿದ್ದರೆ ನಮ್ಮ ಧರ್ಮವನ್ನು ನಾವೇ ಕೊಲೆ ಮಾಡಲು ಹೊರಟಂತೆ ಎಂದು ನಾನು ಭಾವಿಸಿದ್ದೇನೆ. ಪಠ್ಯವಸ್ತುವನ್ನಾಗಿರಿಸಿದ್ದಾರೆಂದು ನೊಂದುಕೊಂಡು ಈ ಪತ್ರ ಬರೆಯಬೇಕಾಯಿತು.

ಈ ಬಗ್ಗೆ ಶ್ರೀ ಬಸವ ಧರ್ಮ ಪೀಠವು ಕಾಳಜಿ ವಹಿಸಿ ಪ್ರತಿಕ್ರಿಯೆ ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುವ,

ತಮ್ಮ ವಿಶ್ವಾಸಿ
ಶಿವಕುಮಾರ ಬಂಡೋಳಿ
L. V. D ಕಾಲೇಜ, ರಾಯಚೂರು

ಮಹಾಚೈತ್ರದ ವಿರುದ್ಧ ಹೋರಾಟದ ವಿವಿಧ ಹಂತ

ಶರಣ ಬಂಧುಗಳೇ,

1. ರಾಯಚೂರಿನ ಶಿವಕುಮಾರ್ ಬಂಡೊಳ್ಳಿ ಮತ್ತು ಚಿತ್ರದುರ್ಗದ ಕುಮಾರಿ ಮಂಗಳಾನ ಪತ್ರಗಳಿಂದ ಪ್ರೇರಿತರಾಗಿ ಸೆಪ್ಟಂಬರ 16 ರಂದು ಪುಸ್ತಕ ಓದಿ, 17 ರಂದು ವಿಮರ್ಶೆ ಬರೆದು, ದಿನಾಂಕ 19–20 ರಂದು ಮುಖ್ಯಮಂತ್ರಿಗಳಿಗೆ ಪಠ್ಯಕ್ರಮದಿಂದ ಮಹಾಚೈತ್ರ ವಾಪಸ್ಸು ಪಡೆಯಲು ಮನವಿ ಸಲ್ಲಿಸಲಾಯಿತು.

2. ಸುಮಾರು ಒಂದು ತಿಂಗಳಾದರೂ ಯಾವ ಪ್ರತಿಕ್ರಿಯೆಯನ್ನೂ ತೋರಿಸದ್ದರಿಂದ ದಿ. 22–10–1994 ಒಂದು ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. **ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳ** ನೇತೃತ್ವದಲ್ಲಿ ಶರಣರ ಒಂದು ತಂಡ ದಿ 20–10–94 ರಂದು ಪುನಃ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ವಿಷಯವನ್ನು ನೆನಪಿಸಿತು. ಅವರು ಆಶ್ವಾಸನೆ ನೀಡಿದರು.
3. ದಿ. 23–10–1994 ರಂದು ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ವಿಧಾನ ಪರಿಷತ್ತಿನ ಉಪಸಭಾಪತಿ ಶ್ರೀಮಂತಿ ರಾಣಿ ಸತೀಶರವರು ಇಂಥ ಕೆಟ್ಟ ಪುಸ್ತಕ ರದ್ದು ಮಾಡಲು ತಾವೂ ಮುಖ್ಯಮಂತ್ರಿಗಳ ಬಳಿ ವಿಷಯ ಮಂಡಿಸುವುದಾಗಿ ಭರವಸೆ ನೀಡಿದರು. ಸದ್ಯ ಪ್ರತಿಭಟನಾ ಪ್ರದರ್ಶನ ಬೇಡವೆಂದರು.
4. ದಿ 7–11–1994 ಉನ್ನತ ಶಿಕ್ಷಣ ಮಂತ್ರಿಗಳಿಗೆ ಶರಣರ ಒಂದು ಗುಂಪು ಮನವಿ ಸಲ್ಲಿಸಿತು.
5. ದಿ 8–11–1994 ರಂದು ಅವರಿಗೆ ಇನ್ನೊಂದು ಗುಂಪು ಸಹ ಮನವಿ ಸಲ್ಲಿಸಿತು ; ಇಷ್ಟು ಮಾತ್ರವಲ್ಲ ವಿ. ಶ್ರೀಕಂಠಕುಮಾರ್ ಎಂಬ ಶರಣರು ಎಸ್. ಎಂ. ಯಾಹ್ಯಾರವರ ಮನೆಯ ಮುಂದೆ ತಮ್ಮ ಮೇಲೆ ಪೇಟ್ರೋಲ್ ಚೆಲ್ಲಿಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಾಹುತಿಗೆ ಯತ್ನಿಸಿದರು. ಬೇಗನೆ ನೋಡಿಕೊಂಡು ಎಲ್ಲರೂ ಆರಿಸಿದ್ದರಿಂದ ಹೆಚ್ಚಿನ ಅನಾಹುತವಾಗಲಿಲ್ಲ.
6. ಇಷ್ಟಾದರೂ ಸರ್ಕಾರ ಕ್ರಮ ತಗೊಳ್ಳಲಿಲ್ಲವಾದ್ದರಿಂದ ದಿ. 16–11–1994 ರಂದು ಬೃಹತ್ ಮೆರವಣಿಗೆಯಲ್ಲಿ ರಾಜಭವನಕ್ಕೆ ತೆರಳಿ ಶರಣ ಬಂಧುಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಿದರಲ್ಲದೆ 250 ಶರಣ ಬಂಧುಗಳು ಪೋಲೀಸರಿಂದ ಬಂಧನಕ್ಕೆ ಒಳಗಾಗಿ, ಸಂಜೆವರೆಗೆ ಠಾಣೆಯಲ್ಲಿದ್ದು ಬಿಡುಗಡೆ ಹೊಂದಿದ್ದರು.
7. ಗುಲಬರ್ಗಾದಲ್ಲಿ ದಿ. 17–11–1994 ಬೃಹತ್ ಪ್ರದರ್ಶನ ಏರ್ಪಡಿಸಿ, ವಿಶ್ವ ವಿದ್ಯಾನಿಲಯಕ್ಕೆ ಮುತ್ತಿಗೆ ಹಾಕಿ, ಸುಮಾರು 600 ಜನ ಶರಣರು ಪೋಲೀಸರ ಬಂಧನಕ್ಕೆ ಒಳಗಾಗಿದ್ದಾರೆ.
8. ಕುವೆಂಪು ವಿಶ್ವವಿದ್ಯಾಲಯಕ್ಕೆ ದಿ. 18–11–1994 ರಂದು ಭದ್ರಾವತಿ–ಶಿವಮೊಗ್ಗಾದ ಶರಣ ಬಂಧುಗಳು ಮುತ್ತಿಗೆ ಹಾಕಿ 300 ಜನ ಬಂಧನಕ್ಕೊಳಗಾಗಿದ್ದಾರೆ.
9. ದಿ. 21–11–94 ರಂದು ಪ್ರಧಾನ ಮಂತ್ರಿಗಳ ಎದುರು ಕಪ್ಪು ಬಾವುಟ ಪ್ರದರ್ಶಿಸಲಿದ್ದಾರೆ.
10. ದಿ. 23–11–94 ರಂದು ಎರಡೂ ವಿಶ್ವವಿದ್ಯಾಲಯಗಳು ತಮ್ಮ ತಮ್ಮ ಶೈಕ್ಷಣಿಕ ಮಂಡಳಿಯ ಸಭೆ ಕರೆದಿದ್ದು ನಿರ್ಣಯ ಕೈಗೊಳ್ಳಲಿವೆ.

ಮುಂದಿನ ವಿವರಗಳು ಮುಂದಿನ ಸಂಚಿಕೆಯಲ್ಲಿ.

—ಪೂಜ್ಯ ದಯಾನಂದ ಸ್ವಾಮೀಜಿ

ಶರಣು ಶರಣಾರ್ಥಿ.

ನಮ್ಮ ಹೆಮ್ಮೆಯ ನಾಡು — ಕರ್ನಾಟಕ

ಎರಡು ಸಾವಿರ ವರ್ಷಗಳ ಭವ್ಯ ಇತಿಹಾಸ, ಪರಂಪರೆಯ ಪುಣ್ಯ ಭೂಮಿ ಕರ್ನಾಟಕ. ಇದು ವಿವಿಧ ಮತ ಧರ್ಮಗಳ ಸಂಗಮ ; ಉದಾತ್ತ ದಾರ್ಶನಿಕರ ಮತ್ತು ಮಹಾನ್ ಸಾಹಿತಿಗಳ ನೆಲೆವೀಡು. ವಿವಿಧ ರಾಜ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಒಂದೇ ಆಡಳಿತಕ್ಕೆ ಒಳಪಟ್ಟ ಅಪೂರ್ವದಿನ ಕನ್ನಡ ರಾಜ್ಯೋತ್ಸವ ದಿನ. ರಾಷ್ಟ್ರದ ಸರ್ವತೋಮುಖ ಪ್ರಗತಿಗೆ ಕರ್ನಾಟಕದ ಕೊಡುಗೆ ಗಣನೀಯ. ರಾಷ್ಟ್ರ ನಿರ್ಮಾಣದ ಮಹತ್ಕಾರ್ಯವನ್ನು ಮುಂದುವರಿಸುವುದು ನಮ್ಮೆಲ್ಲರ ಪರಮ ಕರ್ತವ್ಯ.

ದಾರ್ಶನಿಕರು, ಸಮಾಜ ಸುಧಾರಕರು, ಸಾಹಿತಿಗಳು, ವಿಜ್ಞಾನಿಗಳು, ಕರ್ನಾಟಕವನ್ನು ಶ್ರೀಮಂತಗೊಳಿಸಿದ್ದಾರೆ.

"ಮಾನವ ಜಾತಿ ತಾನೊಂದೆ ವಲಂ"

—ಪಂಪ

"ಸರ್ವಜ್ಞನೆಂಬುವನು ಗರ್ವದಿಂದಾದವನೆ ?
ಸರ್ವರೊಳೊಂದೊಂದು ನುಡಿಗಲಿತು
ವಿದ್ಯದ ಪರ್ವತವೆ ಆದ ಸರ್ವಜ್ಞ"

—ಸರ್ವಜ್ಞ

''ಒಂದೇ ಕರ್ನಾಟಕ ಒಂದೇ,
ಇಂದೆ, ಹಿಂದೆ, ಮುಂದೆ,
ಒಂದೇ ಕರ್ನಾಟಕ ಒಂದೇ''

—ದ. ರಾ. ಬೇಂದ್ರೆ

''ಎಲ್ಲರೂ ದೇಶಾಭಿಮಾನದಿಂದ,
ಸೇವಾಪ್ರೇಮದಿಂದ, ಕರ್ನಾಟಕ ಸಂಸ್ಕೃತಿ
ಭಾಷೆಗಳ ಸದಭಿಮಾನದಿಂದ, ಪ್ರೇರಿತರಾದರೆ
ಅವರು ಹೆಚ್ಚು ಹೆಚ್ಚು ಸುಖಿಗಳಾಗುವರು''

—ಸರ್. ಎಂ. ವಿಶ್ವೇಶ್ವರಯ್ಯ

''ಬರಿಯ ಚದರ ಮೈಲಿಗಳಲ್ತು, ಕರ್ನಾಟಕದ
ದೇಶ ವಿಸ್ತೀರ್ಣಂ ನೆನೆ, ನೆನೆ,
ಮನೋಮಯದ ಸಂಸ್ಕೃತಿಯ ಕೋಶ
ವಿಸ್ತೀರ್ಣಮಂ ಮರೆಯದಿರು ಚದರ
ಸಂವತ್ಸರದ ಶತಮಾನಗಳ ಕಾಲ
ವಿಸ್ತೀರ್ಣಮಂ ಪ್ರಾಣಮಯ ಭಾವಮಯ
ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ
ವಿಸ್ತೀರ್ಣಮಂ''

—ಕುವೆಂಪು

''ಈಸಬೇಕು ಇದ್ದು ಜೈಸಬೇಕು''

—ಪುರಂದರದಾಸರು

''ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ''

—ಕನಕದಾಸರು

''ಕಳಬೇಡ ಕೊಲಬೇಡ ಹುಸಿಯ ನುಡಿಯಲು—
ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರ—
ನೊಲಿಸುವ ಪರಿ''

—ಬಸವಣ್ಣ

"ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ
ಬಾಯೊಲ್ಸಾಕಿದ್ರೂನೆ
ಮೂಗ್ನಲ್ ಕನ್ನಡ ಪದಗಳ್ನಾಡ್ತೀನಿ
ನನ್ ಮನಸ್ನ ನೀ ಕಾಣೆ"

—ಜಿ. ಪಿ. ರಾಜರತ್ನಂ

''ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ
ಕೇವಲ ಭಾಷಾಭಿಮಾನವಲ್ಲ. ಇವೆಲ್ಲವುಗಳನ್ನು
ಮೀರಿದ ಇವೆಲ್ಲವುಗಳನ್ನು ಒಳಗೊಂಡ
ಪರಿಶುದ್ಧ ಭಾವನೆ''

—ಆಲೂರ ವೆಂಕಟರಾಯರು

''ಹಸಿರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ''

—ಚೆನ್ನವೀರ ಕಣವಿ

— ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು —

— ಕರ್ನಾಟಕ ವಾರ್ತೆ



ದಿ. 16-11-1994 "ಮಹಾಚೈತ್ರ"ದ ವಿರುದ್ಧ ರಾಜ್‌ಭವನ್ ಚಲೋ ಪ್ರತಿಭಟನಾ ಮೆರವಣಿಗೆಯ ಮುನ್ನೋಟ

[ರಾಷ್ಟ್ರೀಯ ಬಸವ ದಳ, ಬೆಂಗಳೂರು ಘಟಕ]

ಶರಣ ಬಂಧುಗಳೇ,

ಇದ್ದಕ್ಕಿದ್ದ ಹಾಗೆಯೇ "ಮಹಾಚೈತ್ರ" ಎಂಬ ಕುಚೋದ್ಯದ ಕೃತಿಯ ವಿರುದ್ಧ ಒಂದು ಹೋರಾಟವನ್ನು ಕೈಗೊಂಡಿದ್ದರಿಂದ ಬಹು ಅಮೂಲ್ಯವಾದ ಸಮಯವು ಇದರಲ್ಲೇ ವ್ಯಯವಾಯಿತು. ವಿವಿಧ ಸಂಘಟನೆಗಳನ್ನು, ರಾಷ್ಟ್ರೀಯ ಬಸವ ದಳಗಳನ್ನು ಸಂಪರ್ಕಿಸುವುದರಲ್ಲಿ, ವಿವಿಧ ಟೀಕಾಕಾರರಿಗೆ ಉತ್ತರ ನೀಡುವಲ್ಲಿ ಬಹಳ ಸಮಯವು ಹೋದದರಿಂದ "ಕಲ್ಯಾಣ-ಕಿರಣ"ಕ್ಕೆ ಗಮನಕೊಡಲು ಆಗಲಿಲ್ಲ. ಆದ್ದರಿಂದ ಪತ್ರಿಕೆ ವಿಳಂಬವಾಗಿ ನಿಮ್ಮ ಕೈ ಸೇರುತ್ತಿದೆ. ಮುಂದಿನ ಸಂಚಿಕೆಯಲ್ಲಿ ಪರ-ವಿರೋಧಿ ಮತ್ತಷ್ಟು ಲೇಖನಗಳನ್ನು ಮುದ್ರಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ



ರಾಷ್ಟ್ರೀಯ ಬಸವ ದಳ, ಬೈಲಹೊಂಗಲ—ಇವರು ದಿ. 6–10–94 ರಂದು "ಮಹಾಚೈತ್ರ"ದ ವಿರುದ್ಧ ಪ್ರತಿಭಟಿಸಿ, ಉಪ ವಿಭಾಗಾಧಿಕಾರಿಯವರಿಗೆ ಮನವಿ ಅರ್ಪಿಸಿದರು.